# ಜೀತ ಕಾರ್ಮಿಕರ ಗುರುತಿಸುವಿಕೆ, ರಕ್ಷಣೆ, ಪುನರ್ವಸತಿ ಮತ್ತು ಜೀತ ಪದ್ಧತಿ (ರದ್ದತಿ) ಕಾಯ್ದೆ, 1976 ಕಲಂ 21ರಡಿ ಸಂಕ್ಷಿಪ್ತ ವಿಚಾರಣೆಗಳ ಬಗ್ಗೆ ವಹಿಸಬೇಕಾದ ಕ್ರಮದ ಕುರಿತ ಮಾದರಿ ಕಾರ್ಯ ವಿಧಾನಗಳ ಮಾಹಿತಿ ಕೈಪಿಡಿ 2022

(ಪರಿಷ್ಕೃತ)



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕರ್ನಾಟಕ ಸರ್ಕಾರ

# ಜೀತಕಾರ್ಮಿಕರ ಗುರುತಿಸುವಿಕೆ, ರಕ್ಷಣೆ, ಪುನರ್ವಸತಿ ಮತ್ತು ಜೀತ ಪದ್ಧತಿ (ರದ್ದತಿ) ಕಾಯ್ದೆ, 1976 ಕಲಂ 21ರಡಿ ಸಂಕ್ಷಿಪ್ತ ವಿಚಾರಣೆಗಳ ಬಗ್ಗೆ ವಹಿಸಬೇಕಾದ ಕ್ರಮದ ಕುರಿತ ಮಾದರಿ ಕಾರ್ಯ ವಿಧಾನಗಳ ಮಾಹಿತಿ ಕೈಪಿಡಿ 2022 (ಪರಿಷ್ಕೃತ)



ಚಂದ್ರಮ್ಮ ರೇಷ್ಮೆ ಉದ್ಯಮದಿಂದ
ವಿಮುಕ್ತಿಗೊಂಡ ಜೀತ ಕಾರ್ಮಿಕರು
ಚಿಕ್ಕಬಳ್ಳಾಪುರ ಜಿಲ್ಲೆ

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕರ್ನಾಟಕ ಸರ್ಕಾರ



**ಬಸವರಾಜ ಬೊಮ್ಮಾಯಿ**
**ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ**

# ಸಂದೇಶ

ಕಾನೂನು ಇಲಾಖೆ, ಪೊಲೀಸ್ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಸರ್ಕಾರೇತರ ಸಂಸ್ಥೆಗಳು ಆಸಕ್ತಿ ವಹಿಸಿ ಜೀತ ಪದ್ಧತಿ (ರ) ಕಾಯ್ದೆ 1976ರ ಆಶಯ, ಜೀತ ವಿಮುಕ್ತರ ಪುನರ್ವಸತಿ ಅಪರಾಧಗಳ ವಿಚಾರಣೆಗಳ ಕುರಿತ ಕೈಪಿಡಿಯನ್ನು ಹೊರತರುತ್ತಿರುವುದು ಶ್ಲಾಘನೀಯ.

ಜೀತ ಪದ್ಧತಿ ನಿರ್ಮೂಲನೆಯ ಅಂತರರಾಷ್ಟ್ರೀಯ ಒಪ್ಪಂದದ ಅನ್ವಯ ಕೇಂದ್ರ ಸರ್ಕಾರವು 1976ರಲ್ಲಿ ಜೀತ ಪದ್ಧತಿ (ರದ್ಧತಿ) ಕಾಯ್ದೆಯನ್ನು ದೇಶದಾದ್ಯಂತ ಜಾರಿಗೆ ತಂದು ಈ ಕಾಯ್ದೆಯ ಅನುಷ್ಠಾನದ ಹೊಣೆಗಾರಿಕೆಯನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಅವರಿಂದ ಪ್ರಾಧಿಕೃತವಾದಂತಹ ಅಧಿಕಾರಿಗಳಿಗೆ ನೀಡಲಾಗಿದೆ.

ಜೀತಕ್ಕೆ ದುಡಿಸಿಕೊಳ್ಳುವ ಮಾಲೀಕರು/ಸಂಸ್ಥೆಗಳಿಗೆ ಕಾಯ್ದೆಯಡಿ ಅವಕಾಶವಿರುವಂತೆ ಶಿಕ್ಷೆ ನೀಡಿದಾಗ ಮಾತ್ರ ಈ ಅಪರಾಧ ತಹಬದಿಗೆ ಬರಲು ಸಾಧ್ಯ ಈ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಬೇಕು.

ಜೀತ ಪದ್ಧತಿ ನಿರ್ಮೂಲನೆ ಸಮಾಜದ ಕೈಯಲ್ಲಿದೆ. ಇದನ್ನು ಸಾಕಾರಗೊಳಿಸುವ ಜವಾಬ್ದಾರಿ ಎಲ್ಲಾ ಹಂತದ ಅಧಿಕಾರಿಗಳ ಮೇಲಿದೆ. ಜೀತಮುಕ್ತರಿಗೆ ಪುನರ್ವಸತಿಯನ್ನು ಸರಿಯಾದ ಸಮಯದಲ್ಲಿ ನೀಡುವುದರಿಂದ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಾಧ್ಯ ಕಾರ್ಮಿಕ ನೀತಿಗಳನ್ನು ಅಧಿಕಾರಿಗಳು ಸಮರ್ಪಕವಾಗಿ ಅನುಷ್ಠಾನ ಮಾಡಿದ್ದಲ್ಲಿ ಜೀತ ಪ್ರಕರಣಗಳನ್ನು ತಪ್ಪಿಸಬಹುದಾಗಿದೆ.

ಈ ಕೈಪಿಡಿಯು ಜೀತ ಪದ್ಧತಿ(ರ) ಕಾಯ್ದೆ 1976ರ ಆಶಯ, ಜೀತ ವಿಮುಕ್ತರ ಪುನರ್ವಸತಿ ಅಪರಾಧಗಳ ವಿಚಾರಣೆ ಬಗ್ಗೆ ಬೆಳಕು ಚೆಲ್ಲಿದೆ. ಜೀತ ಪದ್ಧತಿ ನಿರ್ಮೂಲನೆ ನಮ್ಮ ನಿಮ್ಮೆಲ್ಲರ ಹೊಣೆ, ಇದನ್ನು ಯಶಸ್ವಿಯಾಗಿ ನಿರ್ವಹಿಸಲು ಈ ಕೈಪಿಡಿ ದಿಕ್ಸೂಚಿಯಾಗಲಿ ಎಂದು ಹಾರೈಸುತ್ತೇನೆ.

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ



**ಎಲ್.ಕೆ.ಅತೀಕ್**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**
**ಗ್ರಾಮೀಣಾಭಿವೃದ್ಧಿ ಮತ್ತು**
**ಪಂಚಾಯತ್ ರಾಜ್ ಇಲಾಖೆ.**

# ಸಂದೇಶ

ಜೀತ ಪದ್ಧತಿ ಒಂದು ಸಾಮಾಜಿಕ ಕ್ರೌರ್ಯ. ಮಾನವ ಹಕ್ಕುಗಳ ಉಲ್ಲಂಘನೆ. ಈ ಜೀತ ಪದ್ಧತಿಯ ಅಸ್ತಿತ್ವಕ್ಕೆ ಕಾರಣ ಬಡತನ, ನಿರುದ್ಯೋಗ, ಆರ್ಥಿಕ ಸಂಕಷ್ಟಗಳಿಂದಾಗಿ ವಲಸೆ ಹಾಗೂ ಸಮಾಜದ ಕೆಲವು ಸಂಪ್ರದಾಯ. ಜಮೀನುದಾರಿ ಪದ್ಧತಿಯಡಿ ಸಿಲುಕಿ ಭೂಮಿ ಕಳೆದುಕೊಂಡು ಜೀತದ ಸುಳಿವಿಗೆ ಸಿಲುಕಿಕೊಂಡ ,ಸಣ್ಣ ಹಿಡುವಳಿದಾರರು, ಸಂಪ್ರದಾಯದ ಕಾರಣಗಳಿಂದ ಜೀತಕ್ಕಿದ್ದ ಕಾರ್ಮಿಕರನ್ನು ಈ ಪದ್ಧತಿಯಿಂದ ಬಿಡಿಸಲು 1976ರಲ್ಲಿ ಸಂವಿಧಾನವು ಜೀತ ಕಾರ್ಮಿಕ ಪದ್ಧತಿ(ರದ್ದತಿ) ಕಾಯ್ದೆಯನ್ನು ಜಾರಿಗೆ ತಂದಿದೆ. ಕಾಯ್ದೆಯ ಉದ್ದೇಶ ಜೀತ ಪದ್ಧತಿಯನ್ನು ನಿರ್ಮೂಲನೆಗೊಳಿಸುವುದು ಮತ್ತು ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕ ನೀತಿಗಳನ್ನು ಜಾರಿಗೆ ತಂದು ಕಾರ್ಮಿಕರ ಹಿತಾಸಕ್ತಿ ಕಾಪಾಡುವುದು, ಜೀತದಲ್ಲಿ ಸಿಲುಕಿರುವವರನ್ನು ಬಿಡಿಸಿ, ಪುನರ್ವಸತಿ ನೀಡುವುದು..

2000ನೇ ವರ್ಷದಲ್ಲಿ ಮಂಡ್ಯ ಜಿಲ್ಲೆ ಶ್ರೀರಂಗ ಪಟ್ಟಣ ತಾಲ್ಲೂಕಿನ ಹಂಗರಳ್ಳಿಯಲ್ಲಿ ಕಾಣಿಸಿಕೊಂಡ ಜೀತದಾಳುಗಳ ಪ್ರಕರಣ ಕರ್ನಾಟಕದಲ್ಲಿ ಜೀತ ಸಮಸ್ಯೆಯನ್ನು ಪರಿಣಮಕಾರಿಯಾಗಿ ನಿರ್ಮೂಲನೆ ಮಾಡುವತ್ತ ನಮ್ಮೆಲ್ಲರ ಪ್ರಯತ್ನವನ್ನು ಸಾಗಿಸಿದೆ.

ಮಾನವ ಹಕ್ಕುಗಳ ರಕ್ಷಣೆ ಕೇವಲ ಕಾನೂನು ಜಾರಿಯಿಂದ ಮಾತ್ರ ಸಾಧ್ಯವಾಗುವುದಿಲ್ಲ. ಇದರೊಂದಿಗೆ ಸಮಾನತೆಯ ದೃಷ್ಟಿಕೋನ, ನ್ಯಾಯ ಪಾಲನೆ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಪ್ರಾಮುಖ್ಯತೆಯ ಅರಿವು ಸಹಾ ಅತೀ ಅವಶ್ಯಕ. ಇದನ್ನು ಸಮಾಜ ತನ್ನ ನಡೆಯಲ್ಲಿ ಹಾಗೂ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ಅಳವಡಿಸಿಕೊಳ್ಳುವುದರಿಂದ ಸಾಮಾಜಿಕ ಸಮಸ್ಯೆಗಳು ಅಂತ್ಯವಾಗುತ್ತವೆ.

ಜೀತದಿಂದ ಮುಕ್ತಿಹೊಂದಿದ ಜೀತದಾಳುಗಳಿಗೆ ಪುನರ್ವಸತಿಯನ್ನು ಮಾಡುವ ಮೂಲಕ ಅವರಿಗೆ ಹೊಸ ಬದುಕನ್ನು ಕಟ್ಟಿಕೊಡುವ ಅಪೂರ್ವ ಕಾರ್ಯವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಬರುವ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು ಮಾಡುತ್ತಿವೆ. ಜೀತವಿಮುಕ್ತರಿಗೆ ಕನಿಷ್ಠ ಮೂಲ ಭೂತ ಸೌಕರ್ಯವನ್ನು ಒದಗಿಸುವುದರಿಂದ ಹಿಡಿದು ಅವರಿಗೆ ಸ್ವಾವಲಂಬನೆ ಬದುಕು ನಡೆಸಲು ಅವಶ್ಯವಿರುವ ಕೌಶಲ್ಯ ತರಬೇತಿ, ನರೇಗಾ ಯೋಜನೆ ಮೂಲಕ ವರ್ಷಕ್ಕೆ 100-150 ದಿವಸಗಳ ಕಾಲ ಉದ್ಯೋಗ ಒದಗಿಸುವ ಕಾರ್ಯ, ಸರ್ಕಾರದ ವಿವಿಧ ಇಲಾಖೆಗಳ ಯೋಜನೆಗಳಡಿ ಸ್ವಯಂ ಉದ್ಯೋಗ ಮಾಡಲು ಬ್ಯಾಂಕ್ ನಿಂದ ಸಾಲ ಸೌಲಭ್ಯ ಒದಗಿಸುವ ಮೂಲಕ ಜೀತವಿಮುಕ್ತರಿಗೆ ಮಾನಸಿಕ ಸ್ಥೈರ್ಯ ಹಾಗೂ ಆರ್ಥಿಕ ಸಹಾಯ ನೀಡಬೇಕಾಗಿದೆ.

ರಾಜ್ಯದಲ್ಲಿನ ಸಾಮಾಜಿಕ, ಆರ್ಥಿಕ, ಸಾಂಪ್ರದಾಯಿಕ ಮತ್ತು ಭೌಗೋಳಿಕ ಪರಿಸ್ಥಿತಿಗಳನ್ನು ಪರಿಗಣಿಸಿ ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆಯ ಕುರಿತಾದ ಮಾದರಿ ಕಾರ್ಯವಿಧಾನ ಮತ್ತು ಜೀತ ಪದ್ಧತಿ(ರದ್ದತಿ) ಕಾಯ್ದೆ 1976ರ ಕಲಂ 21ರಡಿ ಅಪರಾಧಿಗಳ ವಿಚಾರಣೆ ಪ್ರಕ್ರಿಯೆ ಕುರಿತು ಸದರಿ ಕೈಪಿಡಿಯಲ್ಲಿ ವಿವರಿಸಲಾಗಿದೆ. ಈ ಕೈಪಿಡಿಯ ಸದುಪಯೋಗವನ್ನು ಅನುಷ್ಠಾನಾಧಿಕಾರಿಗಳು ಮಾಡಿಕೊಂಡಲ್ಲಿ, ಜೀತ ಪದ್ಧತಿ(ರ) ಕಾಯ್ದೆಯಡಿ ಬರುವ ಅಪರಾಧಿಗಳಿಗೆ ತ್ವರಿತ ಶಿಕ್ಷೆ ಮತ್ತು ದಂಡ ವಿಧಿಸುವ ಮತ್ತು ಜೀತದಾಳುಗಳನ್ನು ಬಿಡುಗಡೆಗೊಳಿಸುವ ಕೆಲಸ ಸಕಾಲದಲ್ಲಿ ನಡೆಯಲು ಸಹಕಾರಿಯಾಗಲಿದೆ. ಈ ಕೈಪಿಡಿಯನ್ನು ವಿವಿಧ ಇಲಾಖೆಗಳ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಕಾರದೊಂದಿಗೆ ರೂಪಿಸಲಾಗಿದೆ. ಈ ಕೈಪಿಡಿಯಲ್ಲಿ ವಿವರಿಸಿರುವ ಜವಾಬ್ದಾರಿಗಳನ್ನು ಕಂದಾಯ, ಕಾರ್ಮಿಕ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಅನುಸರಿಸಿದಲ್ಲಿ ಕಾಲಮಿತಿಯೊಳಗೆ ಜೀತ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸಾಧ್ಯವಾಗುತ್ತದೆ.

**(ಎಲ್.ಕೆ.ಅತೀಕ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕರ್ನಾಟಕ ಸರ್ಕಾರ



**ಉಮಾ ಮಹದೇವನ್**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**
**(ಪಂ. ರಾಜ್), ಗ್ರಾಮೀಣಾಭಿವೃದ್ಧಿ ಮತ್ತು**
**ಪಂಚಾಯತ್ ರಾಜ್ ಇಲಾಖೆ.**

# ಸಂದೇಶ

ಜೀತ ಪದ್ದತಿ(ರದ್ದತಿ) ಕಾಯ್ದೆ, 1976ರಡಿ ಜೀತ ಪದ್ಧತಿ ಕ್ರಿಮಿನಲ್(ಸಂಜ್ಞೇಯ) ಅಪರಾಧವಾಗಿದೆ. ಜೀತ ಅತ್ಯಂತ ಅಮಾನವೀಯ ಮತ್ತು ಗಾಢವಾದ ಸಾಮಾಜಿಕ ಸಮಸ್ಯೆಯಾಗಿದೆ. ನಮ್ಮ ರಾಜ್ಯವನ್ನು ಜೀತವಿಮುಕ್ತ ರಾಜ್ಯವನ್ನಾಗಿ ಮಾಡಬೇಕೆಂಬುದು ಸರ್ಕಾರದ ಧ್ಯೇಯವಾಗಿದೆ. ಈ ದಿಶೆಯಲ್ಲಿ ಕರ್ನಾಟಕ ರಾಜ್ಯ ಜೀತ ಪದ್ಧತಿ ನಿರ್ಮೂಲನೆಗೆ ಪರಿಣಾಮಕಾರಿಯಾದ ಸೂತ್ರಗಳನ್ನು ರೂಪಿಸಿದೆ.

ಇತ್ತೀಚಿನ ದಿನಗಳಲ್ಲಿ ಹಲವು ಉದ್ಯಮಗಳಲ್ಲಿ ನಾವು ಜೀತ ಸ್ವರೂಪವನ್ನು ಸಾಕ್ಷೀಕರಿಸಬಹುದಾಗಿದೆ. ಹಲವು ಮಾನವ ಅವಲಂಬಿತ ಉದ್ಯಮಗಳಲ್ಲಿ ಕಾರ್ಮಿಕರಿಗೆ ಮೂಲಭೂತ ಸೌಕರ್ಯ, ಕನಿಷ್ಠ ವೇತನ, ವೈದ್ಯಕೀಯ ವಿಮೆ ಇವಾವುದನ್ನು ನೀಡದೆ ದುಡಿಸಿಕೊಳ್ಳುತ್ತಿರುವ ವ್ಯಕ್ತಿ/ಸಂಸ್ಥೆಗಳನ್ನು ಜೀತ ಪದ್ಧತಿ(ರ) ಕಾಯ್ದೆ 1976ರಡಿ ಪರಿಗಣಿಸಿ ಶಿಕ್ಷೆ ಮತ್ತು ದಂಡ ವಿಧಿಸಬೇಕು. ಜೀತದಿಂದ ಕಾರ್ಮಿಕರನ್ನು ಮುಕ್ತಿಗೊಳಿಸಿ ಅವರಿಗೆ ತುರ್ತು ಪರಿಹಾರ ನೀಡಲು ಕೇಂದ್ರದ ನೂತನ ಮಾರ್ಗಸೂಚಿಯಡಿ ಅವಕಾಶ ಕಲ್ಪಿಸಲಾಗಿದೆ. ಜೀತಕ್ಕೆ ದುಡಿಸಿಕೊಳ್ಳುವ ಮಾಲೀಕರು/ಸಂಸ್ಥೆಗಳಿಗೆ ಕಾಯ್ದೆಯಡಿ ಅವಕಾಶವಿರುವಂತೆ ಶಿಕ್ಷೆ ನೀಡಿದಾಗ ಮಾತ್ರ ಈ ಅಪರಾಧ ತಹಬದಿಗೆ ಬರಲು ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು.

ಕೇಂದ್ರ ಸರ್ಕಾರದಿಂದ ಜೀತದಾಳುಗಳ ಗುರುತಿಸುವಿಕೆ, ರಕ್ಷಣೆ, ಪುನರ್ವಸತಿ ಹಾಗೂ ಜೀತ ಕಾಯ್ದೆ , 1976 ಕಲಂ 21ರಡಿ ಶಿಕ್ಷೆ ವಿಧಿಸುವ ಮಾದರಿ ಕಾರ್ಯವಿಧಾನವನ್ನು ಪ್ರಕಟಿಸಿದ ನಂತರ ರಾಜ್ಯ ಸರ್ಕಾರವು ಸಹ ಇದನ್ನು ಅನುಷ್ಠಾನ ಮಾಡುವ ನಿಟ್ಟಿನಲ್ಲಿ ರಾಜ್ಯ ಮಟ್ಟದ ಮಾದರಿ ಕಾರ್ಯವಿಧಾನವನ್ನು ರೂಪಿಸಿದೆ. ಈ ಮಾದರಿ ಕಾರ್ಯವಿಧಾನವನ್ನು ಕಾನೂನು ಇಲಾಖೆ, ಪೊಲೀಸ್ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಜೀವಿಕ ಸಂಸ್ಥೆ, ಐಜೆಎಮ್ (IJM) ಸಂಸ್ಥೆಗಳು ಆಸಕ್ತಿವಹಿಸಿ ರೂಪಿಸಿದ್ದು, ಈ ಕೈಪಿಡಿಯು ಜೀತ ಪದ್ಧತಿ(ರ) ಕಾಯ್ದೆಯ ಆಶಯ, ಜೀತವಿಮುಕ್ತರ ಪುನರ್ವಸತಿ, ಅಪರಾಧಗಳ ವಿಚಾರಣೆ ಬಗ್ಗೆ ಬೆಳಕು ಚೆಲ್ಲಿದೆ.

ಜೀತ ಪದ್ಧತಿ ನಿರ್ಮೂಲನೆ ಸಮಾಜದ ಕೈಯಲ್ಲಿದೆ; ಇದನ್ನು ಸಾಕಾರಗೊಳಿಸುವ ಜವಾಬ್ದಾರಿ ಎಲ್ಲಾ ಹಂತದ ಅಧಿಕಾರಿಗಳ ಮೇಲಿದೆ. ಜೀತವಿಮುಕ್ತರಿಗೆ ಪುನರ್ವಸತಿಯನ್ನು ಸರಿಯಾದ ಸಮಯದಲ್ಲಿ ನೀಡುವುದರಿಂದ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಾಧ್ಯ. ಕಾರ್ಮಿಕ ನೀತಿಗಳನ್ನು ಅಧಿಕಾರಿಗಳು ಸರಿಯಾಗಿ ಅನುಷ್ಠಾನ ಮಾಡಿದಲ್ಲಿ ಬಹುತೇಕ ಜೀತ ಪ್ರಕರಣಗಳನ್ನು ತಪ್ಪಿಸಬಹುದಾಗಿದೆ. ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವುದರಿಂದ ದೇಶವನ್ನು ಅಭಿವೃದ್ಧಿ ಹಾದಿಗೆ ತರಲು ಸಾಧ್ಯ.

**(ಉಮಾ ಮಹದೇವನ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
(ಪಂ. ರಾಜ್), ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ.

# ಪರಿವಿಡಿ


1. ಪೀಠಿಕೆ ........................................................................................................................11

2. ಜೀತದಾಳುಗಳ – ಗುರುತಿಸುವಿಕೆ, ಬಿಡುಗಡೆ, ಪುನರ್ವಸತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮಾದರಿ ಕಾರ್ಯವಿಧಾನಗಳು ಮತ್ತು ಜೀತ ಪದ್ಧತಿ (ರದ್ದತಿ) ಕಾಯ್ದೆ, 1976 ಕಲಂ 21ರಡಿ ಸಂಕ್ಷಿಪ್ತ ವಿಚಾರಣೆ ಕುರಿತು ವಹಿಸಬೇಕಾಗಿರುವ ಕ್ರಮ..........................................................................12

3. ಜೀತಕಾರ್ಮಿಕರ ರಕ್ಷಣೆ ಮತ್ತು ಪುನರ್ವಸತಿ ಕುರಿತ ಸರಳ Flow Chart..........................................20

4. ಜೀತ ಕಾರ್ಮಿಕ ಪದ್ಧತಿ (ರದ್ದತಿ) ಕಾಯ್ದೆ, 1976 ಕನ್ನಡ ಭಾಷೆಯಲ್ಲಿ...............................................24

5. ಜೀತಕಾರ್ಮಿಕರ ರಕ್ಷಣೆ ಒಂದು ಕೇಸ್ ಸ್ಟಡಿ.................................................................................48

6. ಜೀತ ಪದ್ಧತಿಯಿಂದ ಮುಕ್ತರಾದ ಮಾದೇಶ್ ಮತ್ತು ಕುಟುಂಬದವರ ಯಶೋಗಾಥೆ.....................................50

7. ಜೀತಕಾರ್ಮಿಕರ ಪುನರ್ವಸತಿ ಯೋಜನೆಯ ಪ್ರಮುಖಾಂಶಗಳು (ಕೇಂದ್ರ ಮಾರ್ಗಸೂಚಿಯಲ್ಲಿರುವಂತೆ).......52

8. ಜೀತಕಾರ್ಮಿಕರ ರಕ್ಷಣೆ, ಪುನರ್ವಸತಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ...................................62

9. ಜೀತಕಾರ್ಮಿಕರ ರಕ್ಷಣೆ ಮತ್ತು ಪುನರ್ವಸತಿ–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಕಾರ್ಮಿಕ ಇಲಾಖೆಗಳ ಪಾತ್ರ..........................................................................................66

10. ಜೀತ ಕಾರ್ಮಿಕ ಪದ್ಧತಿ ಕುರಿತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಪಾತ್ರ...........................................................................................70

11. ಜಿಲ್ಲಾ ಹಾಗೂ ಉಪ–ವಿಭಾಗೀಯ ಜಾಗೃತಿ ಸಮಿತಿಗಳ ರಚನೆ ಮತ್ತು ಜಾಗೃತಿ ಸಮಿತಿಗಳ ಕರ್ತವ್ಯಗಳು.......72

12 ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಪತ್ರಗಳು.........................................................78

# 1. ಪೀಠಿಕೆ

ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಕಛೇರಿ ಆದೇಶ ಸಂಖ್ಯೆ– F.No.S-11012/01/2015 BL(PL) ದಿನಾಂಕ: 17/8/2017 ರಂದು ಜೀತಕಾರ್ಮಿಕರ ಗುರುತಿಸುವಿಕೆ, ಬಿಡುಗಡೆ ಹಾಗೂ ಈ ಕಾಯ್ದೆಯಡಿ ಅಪರಾಧವೆಸಗಿದವರ ಮೇಲೆ ತೆಗೆದುಕೊಳ್ಳಬೇಕಾಗಿರುವ ಕಾನೂನು ಕ್ರಮಗಳ ಕುರಿತು ಮಾದರಿ ಕಾರ್ಯವಿಧಾನವನ್ನು ಹೊರತಂದಿರುತ್ತದೆ. ಈಗಾಗಲೇ ಈ ಮಾದರಿ ಕಾರ್ಯವಿಧಾನವನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.

ಕೆಲವು ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಆಸಕ್ತ ಗುಂಪುಗಳು ಪ್ರಾದೇಶಿಕ ಪರಿಸ್ಥಿತಿಗಳನ್ವಯ ಮಾದರಿ ಕಾರ್ಯವಿಧಾನವನ್ನು ಕೆಲವು ಸೂಕ್ತ ಮಾರ್ಪಾಡುಗಳೊಂದಿಗೆ ಕನ್ನಡದಲ್ಲಿ ಹೊರತರುವಂತೆ ಸರ್ಕಾರಕ್ಕೆ ಪ್ರಸ್ತಾಪಿಸಿರುವ ಕಾರಣ, ಈ ಮಾದರಿ ಕಾರ್ಯವಿಧಾನವನ್ನು ವಿನ್ಯಾಸಗೊಳಿಸಲಾಗಿದೆ.

ಜೀತ ಕಾರ್ಮಿಕ ಪದ್ಧತಿ(ರದ್ದತಿ) ಕಾಯ್ದೆ, 1976ರನ್ವಯ ದೇಶದಾದ್ಯಂತ ಜೀತ ಪದ್ಧತಿಯನ್ನು ಅಂತ್ಯಗೊಳಿಸುವ ಜವಾಬ್ದಾರಿಯನ್ನು ಹಾಗೂ ಜೀತ ಕಾರ್ಮಿಕರನ್ನು ಗುರುತಿಸಿ ಜೀತದಿಂದ ವಿಮುಕ್ತಿ ಮಾಡುವ ಕರ್ತವ್ಯವನ್ನು ಈ ಕಾಯ್ದೆ ಕಲಂ 10 ರಿಂದ ಕಲಂ 12ರವರೆಗೆ ಜಿಲ್ಲಾಧಿಕಾರಿಗಳಿಗೆ ಹಾಗೂ ಅವರಿಂದ ಪ್ರಾಧೀಕೃತವಾದಂತಹ ಅಧಿಕಾರಿಗಳಿಗೆ ಈ ಜವಾಬ್ದಾರಿಯನ್ನು ವಹಿಸಲಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಲೋಪವಿಲ್ಲದೆ ನಿರ್ವಹಿಸಬೇಕಾಗಿದೆ. ಜೀತ ಕಾರ್ಮಿಕ ಪದ್ಧತಿ(ರದ್ದತಿ) ಕಾಯ್ದೆ 1976ರನ್ನು ಜೀತ ಕಾರ್ಮಿಕರ ಹಿತದೃಷ್ಟಿಯಿಂದ ಜಾರಿ ಮಾಡಬೇಕು. ಜೀತ ಕಾರ್ಮಿಕ ಪದ್ಧತಿಯು ಸಂಜ್ಞೇಯ ಅಪರಾಧವೆಂದು (Cognizable offence) ಕಲಂ 22ರಲ್ಲಿ ಹೇಳಲಾಗಿದೆ. ಆದ್ದರಿಂದ ಜೀತ ಕಾರ್ಮಿಕ ಪದ್ಧತಿಯಡಿ ಇರುವವರನ್ನು ಜೀತವಿಮುಕ್ತಿ ಮಾಡದೆ ಇದ್ದರೆ ಹಾಗೂ ಜೀತ ಪದ್ಧತಿಯನ್ನು ಅನುಸರಿಸುವಂತಹ ಮಾಲೀಕರಿಗೆ ಶಿಕ್ಷೆ ನೀಡದಿದ್ದರೆ ಈ ಅಪರಾಧದ ಅಸ್ತಿತ್ವಕ್ಕೆ ಅವಕಾಶ ಕಲ್ಪಿಸಿದಂತಾಗುತ್ತದೆ.

ಜೀತದಾಳುಗಳನ್ನು ಬಿಡುಗಡೆಗೊಳಿಸಿದ ನಂತರ, ಜೀತಕ್ಕೆ ಇರಿಸಿಕೊಂಡಿದ್ದ ಮಾಲೀಕರನ್ನು ಹಾಗೂ ಸಹಚರರನ್ನು ಜೀತ ಕಾರ್ಮಿಕ ಪದ್ಧತಿ(ರದ್ದತಿ) ಕಾಯ್ದೆ, 1976ರಡಿ ತಪ್ಪಿತಸ್ಥರ ವಿರುದ್ಧ ಪ್ರಥಮ ವರ್ತಮಾನ ವರದಿ(FIR) ದಾಖಲಿಸಿದ ನಂತರ ಪ್ರಕರಣವನ್ನು ಸಕ್ಷಮ ನ್ಯಾಯಾಲಯಕ್ಕೆ ಒಪ್ಪಿಸಬೇಕಾಗಿರುತ್ತದೆ.

ಈ ಎಲ್ಲಾ ಅಂಶಗಳನ್ನು ಹಾಗೂ ಕಾಯ್ದೆ ಅಸ್ತಿತ್ವಕ್ಕೆ ತಂದಿರುವ ಮೂಲ ಆಶಯವನ್ನು ಪೂರೈಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಈ ಮಾದರಿ ಕಾರ್ಯವಿಧಾನವನ್ನು ವಿನ್ಯಾಸಗೊಳಿಸಿದೆ.




# 2. ಜೀತದಾಳುಗಳ – ಗುರುತಿಸುವಿಕೆ, ಬಿಡುಗಡೆ, ಪುನರ್ವಸತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮಾದರಿ ಕಾರ್ಯವಿಧಾನಗಳು ಮತ್ತು ಜೀತ ಪದ್ಧತಿ (ರದ್ದತಿ) ಕಾಯ್ದೆ, 1976 ಕಲಂ 21ರಡಿ ಸಂಕ್ಷಿಪ್ತ ವಿಚಾರಣೆ ಕುರಿತು ವಹಿಸಬೇಕಾಗಿರುವ ಕ್ರಮ

## 2. ಜೀತದಾಳುಗಳ- ಗುರುತಿಸುವಿಕೆ, ಬಿಡುಗಡೆ, ಪುನರ್ವಸತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮಾದರಿ ಕಾರ್ಯವಿಧಾನಗಳು ಮತ್ತು ಜೀತ ಪದ್ಧತಿ(ರದ್ದತಿ) ಕಾಯ್ದೆ,1976 ಕಲಂ 21ರಡಿ ಸಂಕ್ಷಿಪ್ತ ವಿಚಾರಣೆ ಕುರಿತು ವಹಿಸಬೇಕಾಗಿರುವ ಕ್ರಮ

### 1. ಜೀತ ಅಪರಾಧದ ಬಗ್ಗೆ ದೂರು ಪಡೆಯುವುದು:

1.1) ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಅಥವಾ ಪೊಲೀಸರು ಜೀತ ಪದ್ಧತಿ(ರದ್ದತಿ) ಕಾಯ್ದೆಯಡಿ ಅಪರಾಧವಾಗಿದೆ ಎಂದು ಯಾವುದೇ ವ್ಯಕ್ತಿಯಿಂದ ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ದೂರು ಬಂದಲ್ಲಿ ಆ ದೂರನ್ನು ಲಿಖಿತ ರೂಪದಲ್ಲಿ ದಾಖಲಿಸಿಕೊಂಡು, ದೂರು ಸ್ವೀಕೃತಿಯಾದ ಸಮಯ ಹಾಗೂ ದಿನಾಂಕವನ್ನು ಸಹಾ ತಪ್ಪದೇ ದಾಖಲಿಸಿಕೊಳ್ಳಬೇಕು.

1.2) ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಅಥವಾ ಪೊಲೀಸರು ದೂರನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಹೇಳುವುದರ ಜೊತೆಗೆ ದೂರುದಾರರಿಗೆ ದೂರು ದಾಖಲಿಸಿಕೊಂಡ ರಶೀದಿಯನ್ನು ನೀಡಬೇಕು.

1.3) ರಕ್ಷಣೆ ಮಾಡುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಅಥವಾ ಪೊಲೀಸರು ರಕ್ಷಣಾ ಕಾರ್ಯಾಚರಣೆ, ದೂರುದಾರ ಅಥವಾ ಮಾಹಿತಿ ನೀಡಿದಂತಹ ವ್ಯಕ್ತಿಯ ಗೌಪ್ಯತೆಯನ್ನು ಕಾಪಾಡುವುದು ಮುಖ್ಯ. ಯಾವುದೇ ಕಾರಣದಿಂದಲೂ ದೂರುದಾರ/ಮಾಹಿತಿದಾರರ ಗೌಪ್ಯತೆ ಹಾಗೂ ರಕ್ಷಣಾ ಕಾರ್ಯಾಚರಣೆಯ ಸುಳಿವುಗಳನ್ನು ಹೊರಗಡೆ ಹೋಗದಂತೆ ರಹಸ್ಯವಾಗಿರಿಸತಕ್ಕದ್ದು. ವಿಷಯ ಸೋರಿಕೆಯಾದರೆ ಸಾಕ್ಷ್ಯಾಧಾರಗಳು ನಾಶವಾಗಬಹುದು, ಜೀತದಾಳುಗಳನ್ನು ಬೇರೆಡೆ ಸಾಗಿಸುವ ಸಾಧ್ಯತೆ ಇರಬಹುದು, ಮಾಲೀಕರು ಹಾಗೂ ಮಧ್ಯವರ್ತಿಗಳು ತಪ್ಪಿಸಿಕೊಳ್ಳಬಹುದು, ಜೀತದಾಳುಗಳನ್ನು ಬೆದರಿಸಬಹುದು ಅಥವಾ ದೂರು ನೀಡಿದ ವ್ಯಕ್ತಿಗೆ ತೊಂದರೆ ಮಾಡುವ ಸಾಧ್ಯತೆಗಳಿರುವ ಕಾರಣಗಳಿಂದ ಈ ಹಂತದಲ್ಲಿ ಈ ವಿಷಯಗಳ ಬಗ್ಗೆ ಜಿಲ್ಲಾಡಳಿತ/ಪೊಲೀಸ್ ಇಲಾಖೆಯು ಎಚ್ಚರ ವಹಿಸಬೇಕು.

### 2. ಜೀತ ಕಾರ್ಮಿಕರ ರಕ್ಷಣೆ:

2.1 ಜಿಲ್ಲಾಧಿಕಾರಿಗಳು, ಉಪ-ವಿಭಾಗಾಧಿಕಾರಿಗಳು ಅಥವಾ ಪೊಲೀಸರು ಜೀತದಾಳುಗಳಿಂದ ಅಥವಾ ಜೀತದಾಳುಗಳ ಪರವಾಗಿ ದೂರು ಸ್ವೀಕರಿಸಿದ 24 ಗಂಟೆಯೊಳಗೆ ಜೀತದಾಳುಗಳನ್ನು ರಕ್ಷಣೆ ಮಾಡಬೇಕು.

2.2 ರಕ್ಷಣಾ ತಂಡವು ಸಾಧ್ಯವಾದಷ್ಟು ವಿವಿಧ ಇಲಾಖೆಗಳಿಗೆ ಸೇರಿದ ಅಧಿಕಾರಿಗಳು, ಅವರುಗಳ ಜೊತೆಗೆ ದೂರುದಾರರು ಹಾಗೂ ಸಮಾಜ ಸೇವಕರು /ಸ್ವಯಂ ಸೇವಾ ಸಂಘಟನೆಗಳನ್ನು ಒಳಗೊಂಡಿರಬೇಕು:

| | |
|---|---|
| ಅ | ತಹಶೀಲ್ದಾರ್‌ರವರ ಹುದ್ದೆಗೆ ಕಡಿಮೆಯಲ್ಲದ ಅಧಿಕಾರಿಯನ್ನು ಜಿಲ್ಲಾಧಿಕಾರಿಯು ತನ್ನ ಪ್ರತಿನಿಧಿಯನ್ನಾಗಿ ನಿಯೋಜಿಸಬೇಕು ಕಾರಣ ಈ ಅಧಿಕಾರಿಯು ಜೀತ ಕಾರ್ಮಿಕ ಪದ್ಧತಿ(ರದ್ದತಿ) ಕಾಯ್ದೆ,1976ರಲ್ಲಿ ತಿಳಿಸಿರುವ ಕಾರ್ಯವನ್ನು ಪಾಲನೆ ಮಾಡಲು ಹಾಗೂ ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಾಲಯವು 2016ರಲ್ಲಿ ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿಯ ವಿಧಾನಗಳನ್ನು ಅನುಸರಿಸಲು. |
| ಆ | ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯಿಂದ ನೇಮಿಸಲ್ಪಟ್ಟ ಒಬ್ಬ ಪೋಲೀಸ್ ಅಧಿಕಾರಿ. |
| ಇ | ಕಾರ್ಮಿಕ ಅಧಿಕಾರಿ/ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು- ಕನಿಷ್ಟ ವೇತನ ಕಾಯ್ದೆ, ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯ್ದೆ, 1979, ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ(ನಿಷೇದ ಮತ್ತು ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ ಕಾಯ್ದೆ 2016 ಮತ್ತು ವೇತನ ಪಾವತಿ ಕಾಯ್ದೆಯೂ ಒಳಗೊಂಡಂತೆ ಅನ್ವಯಿಸುವ ಕಾರ್ಮಿಕ ಕಾಯ್ದೆಗಳನ್ನು ಪಾಲಿಸಲಾಗಿದೆಯೇ ಎಂದು ಪರಿಶೀಲಿಸಲು/ ಪರಿವೀಕ್ಷಣೆ ಮಾಡಲು. |
| ಈ | ಕೆಲಸದ ಜಾಗವನ್ನು ಸಂರಕ್ಷಿಸಲು ಹಾಗೂ ಭದ್ರತೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಲು ಅಗತ್ಯವಾಗಿರುವ ಪೋಲೀಸ್ ಅಧಿಕಾರಿಗಳು/ಸಿಬ್ಬಂಧಿ |
| ಉ | ಇಬ್ಬರು ಅಥವಾ ಹೆಚ್ಚಿನ ಮಹಿಳಾ ಅಧಿಕಾರಿಗಳು- ಸಾಧ್ಯವಾದರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸೇರಿದ ಅಧಿಕಾರಿಗಳು. |
| ಊ | ಒಬ್ಬ ಪೋಲೀಸ್ ಛಾಯಾಗ್ರಾಹಕರು. |

| | |
|---|---|
| ಋ | ಒಬ್ಬ ಮಹಿಳೆಯನ್ನು ಸೇರಿ ಇಬ್ಬರು ತಟಸ್ಥ ಸಾಕ್ಷಿದಾರರು. |
| ಎ | ದೂರುದಾರ. |
| ಏ | ಸ್ವಯಂ ಸೇವಾ ಸಂಘಟನೆಗಳು/ಸರ್ಕಾರೇತರ ಸಂಸ್ಥೆಗಳು ಅಥವಾ ಸಮಾಜ ಸೇವಕರ ಉಪಸ್ಥಿತಿ ಉತ್ತಮ, ಕಾರಣ ಬಾಧಿತ ಜೀತ ಕಾರ್ಮಿಕರಿಗೆ ಅವಶ್ಯವಿರುವ ಮನೋಸ್ಥೈರ್ಯ, ನೈತಿಕ ಬಲ ತುಂಬಲು. |
| ಐ | ಅವಶ್ಯಾನುಸಾರ ಇತರೆ ವ್ಯಕ್ತಿಗಳು. |
| ಒ | ಒಬ್ಬ ಸರ್ಕಾರಿ ವೈದ್ಯರು– ವ್ಯಕ್ತಿಗಳ/ಮಕ್ಕಳ ವಯಸ್ಸನ್ನು ನಿರ್ಧರಿಸಲು ಹಾಗೂ ತುರ್ತು ವೈದ್ಯಕೀಯ ಚಿಕಿತ್ಸೆ ನೀಡಲು |

**ರಕ್ಷಣಾ ಕಾರ್ಯ ಪಡೆ ಈ ಸಂಖ್ಯೆಯ ವ್ಯಕ್ತಿಗಳನ್ನು ಹಾಗೂ ಅಧಿಕಾರಿಗಳನ್ನು ಏಕಕಾಲದಲ್ಲಿ ಹೊಂದಿಸಿಕೊಂಡು ಸ್ಥಳಕ್ಕೆ ತೆರಳುವುದು ಕಷ್ಟಸಾಧ್ಯವಾಗಬಹುದು, ಆದ್ದರಿಂದ ತಂಡದ ಸದಸ್ಯರ ಸಂಖ್ಯೆಗಳನ್ನು ಮಿತಿಗೊಳಿಸಲು ಅಥವಾ ಸಂದರ್ಭಾನುಸಾರ ಅಧಿಕಾರಿ/ವ್ಯಕ್ತಿಗಳನ್ನು ನಿರ್ಧರಿಸುವುದು ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿಗಳ ವಿವೇಚನೆಗೆ ಬಿಟ್ಟಿದೆ.**

2.3) ಸಾಕ್ಷಿ ನಾಶ ಮತ್ತು ಕಾರ್ಮಿಕರ ಸ್ಥಳಾಂತರ ಮಾಡುವ ಅವಕಾಶವಿರುವ ಸಾಧ್ಯತೆಗಳಿರುವುದಾಗಿ ತಿಳಿದುಬಂದರೆ, ಅಂತಹ ಸಂದರ್ಭದಲ್ಲಿ ವಿಳಂಬವಾಗಬಾರದೆಂದು ಅನಿಸಿದರೆ ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಗಳು ರಕ್ಷಣಾತಂಡವಿಲ್ಲದೆಯೇ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯವನ್ನು ಮಾಡಬೇಕು ಹಾಗೂ ಯಾವುದೇ ವಿಳಂಬ ಮಾಡದೇ ರಕ್ಷಣಾ ಪಡೆಯ ಉಳಿದ ಸದಸ್ಯರಿಗೆ ಈ ಕುರಿತು ಮಾಹಿತಿ ನೀಡಿ ರಕ್ಷಣಾ ಸ್ಥಳಕ್ಕೆ ಧಾವಿಸುವಂತೆ ಸೂಚನೆ ನೀಡಬೇಕು.

2.4) ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಗಳು ಪೋಲೀಸರ ನೆರವಿನಿಂದ ಜೀತದಾಳುವನ್ನು ಅವನ ಯಜಮಾನನಿಂದ ಹಾಗೂ ಅವನ ಸಹಸದಸ್ಯರು/ಸಹಚರರುಗಳಿಂದ ಪ್ರತ್ಯೇಕಿಸಿ ರಕ್ಷಣೆ ನೀಡಬೇಕು. ರಕ್ಷಣಾ ಸ್ಥಳವು ಸುರಕ್ಷಿತವಾಗಿರುವ ಕುರಿತು ಖಾತ್ರಿ ಪಡಿಸಿಕೊಳ್ಳಬೇಕು.

2.5) ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಗಳು ಜೀತದಾಳಿಗೆ, ಅವನ ಯಜಮಾನನ ಅನುಪಸ್ಥಿತಿಯಲ್ಲಿ ಮತ್ತು ಒಬ್ಬ ಸ್ವಯಂ ಸೇವಾ ಸಂಘಟನೆಯ ಪ್ರತಿನಿಧಿ ಅಥವಾ ಒಬ್ಬ ಸಮಾಜ ಸೇವಕರ ಸಮಕ್ಷಮ, ಮುಂಗಡ ಅಥವಾ ಬೇರಾವುದೇ ತರಹದ ಬಾದ್ಯತೆ ಬಗ್ಗೆ , ನೀಡಲಾಗುತ್ತಿರುವ ವೇತನ, ಕೆಲಸ ಮಾಡುವ ಸ್ವಾತಂತ್ರ್ಯ(ಕೆಲಸ ಮಾಡುವ ಜಾಗ ಬಿಟ್ಟು ಬೇರೆಡೆ ಕೆಲಸ ಮಾಡಲು ಅವನಿಗೆ ಸ್ವಾತಂತ್ರ್ಯವಿದೆಯೇ ಎಂಬುದರ ಬಗ್ಗೆ) ಮುಂತಾದ ವಿಷಯಗಳ ಬಗ್ಗೆ ಚುಟುಕಾಗಿ ಕೆಲವು ಪ್ರಶ್ನೆಗಳನ್ನು ಕೇಳಿ ವ್ಯಕ್ತಿಯು ಜೀತಕ್ಕಿರುವ ಬಗ್ಗೆ ಮಾಹಿತಿಯನ್ನು ಪಡೆಯಬೇಕು.

**ಪ್ರಶ್ನೆಗಳು ಜೀತಕ್ಕಿರುವ ಬಗ್ಗೆ ಮಾತ್ರ ಸಂಬಂಧಿಸಿರಬೇಕು(ಬಹುಪಾಲು ಪ್ರಶ್ನೆಗಳು ಕೇಂದ್ರ ಸರ್ಕಾರವು ನೀಡಿರುವ ಮಾರ್ಗ ಸೂಚಿಯಲ್ಲಿಯೇ ಇದೆ) ವಿಚಾರಣೆಯು ವಿಷಯಾಂತರವಾಗಬಾರದು, ಅಸಂಬದ್ಧ/ವೈಯುಕ್ತಿಕ ಪ್ರಶ್ನೆಗಳನ್ನು ಕೇಳಬಾರದು.**

**ಸ್ಥಳದಲ್ಲಿ (Spot) ತನಿಖಾ ವಿಚಾರಣೆಯನ್ನು ಜೀತದ ಕುರಿತು ತಿಳಿದುಕೊಳ್ಳಲು ಜೀತದಾಳುಗಳು ಕೆಲಸ ಮಾಡುವ ಸ್ಥಳದಲ್ಲಿ ನಡೆಸತಕ್ಕದ್ದು ಹಾಗೂ ಸುಧೀರ್ಘ ತನಿಖಾ ವಿಚಾರಣೆಯನ್ನು ಕಾರ್ಮಿಕರನ್ನು ಸುರಕ್ಷಿತ ಸ್ಥಳಕ್ಕೆ ವರ್ಗಾಯಿಸಿದ ನಂತರ ಜೀತವಲ್ಲದೆ ಮತ್ತಾವುದಾದರೂ ಬೇರೆ ತರಹದ IPC/CrPC ರಡಿ ಬರುವಂತಹ ಅಪರಾಧಗಳು ಜರುಗಿವೆಯೇ ಎಂದು ತಿಳಿದುಕೊಳ್ಳಲು ಎರಡು ಹಂತದ ವಿಚಾರಣೆಯನ್ನು ಅಧಿಕಾರಿಗಳು ನಡೆಸಬೇಕು. ಈ ವಿಚಾರಣೆಯು ಸಂಕ್ಷಿಪ್ತ ವಿಚಾರಣೆಗೆ ಸಂಬಂಧಿಸಿದ್ದಲ್ಲ.**

2.6) ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿಗಳು ಅವಶ್ಯವಿರುವ ಸಾಕ್ಷಿಗಳನ್ನು ಕಲೆಹಾಕಿರುವ ಕುರಿತು ಖಚಿತಪಡಿಸಿಕೊಳ್ಳಬೇಕು, ಅವುಗಳೆಂದರೆ – ದೂರವಾಣಿ ಪುಸ್ತಕ(ಮಧ್ಯವರ್ತಿಗಳು ಹಾಗೂ ಕಳ್ಳಸಾಗಾಣಿಕೆಯಲ್ಲಿ ಭಾಗಿಯಾದ ವ್ಯಕ್ತಿಗಳ ದೂರವಾಣಿ ಸಂಪರ್ಕ ಸಂಖ್ಯೆಗಳಿರುವ ಪುಸ್ತಕ), ಮೊಬೈಲ್ ಫೋನ್‌ಗಳು, ಪ್ರಯಾಣದ ಟಿಕೆಟ್‌ಗಳು ಮತ್ತು ದಾಖಲಾತಿಗಳು , ಹಾಜರಿ ಪಟ್ಟಿ, ವಹಿಗಳು, ಒಡಂಬಡಿಕೆ ಪತ್ರಗಳು, ಬ್ಯಾಂಕ್ ವಹಿವಾಟು/ಲೆಕ್ಕಪತ್ರಗಳ ವಿವರ, ವೇತನ ರಶೀದಿ ಚೀಟಿಗಳು, ಖಾತೆ ಪುಸ್ತಕ, ಮಾಲೀಕತ್ವದ ಪತ್ರ, ಪರವಾನಗಿ ಪತ್ರ, ನಗದು, ಆಯುಧಗಳು, ಬೀಗಗಳು ಮತ್ತು ಇನ್ನಿತರ ಸಾಕ್ಷಿಗಳ ಛಾಯಾಚಿತ್ರಗಳು. ಈವರೆವಿಗೂ ವಿವರಿಸಲಾದ ಈ ಎಲ್ಲಾ ಸಾಕ್ಷಿಗಳನ್ನು ಪೋಲೀಸ್ ಇಲಾಖೆಯವರು ವಶಕ್ಕೆ ಪಡೆಯಬೇಕು ಹಾಗೂ ಅಪರಾಧಿಯನ್ನು CrPC 1973ರನ್ವಯ ಬಂಧಿಸಬೇಕು.

2.7) ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿಗಳು ವಶಪಡಿಸಿಕೊಂಡ ಸಾಕ್ಷ್ಯ/ದಾಖಲೆಗಳ ಜಪ್ತಿ ಪಟ್ಟಿಯನ್ನು ಸಿದ್ಧಪಡಿಸುವಂತೆ ಪೋಲೀಸರಿಗೆ ಸೂಚಿಸಬೇಕು. ಜೊತೆಗೆ ಸ್ಥಳದಲ್ಲಿಯೇ ರಕ್ಷಣಾ ಟಿಪ್ಪಣಿಯನ್ನು ತಯಾರಿಸಬೇಕು- ಟಿಪ್ಪಣಿಯಲ್ಲಿ ಜೀತದಾಳುಗಳ ಗುರುತಿನ ವಿವರಗಳು, ಅವರುಗಳ ಸಂಪರ್ಕ ಸಂಖ್ಯೆಗಳ ವಿವರಣೆ ಇರಬೇಕು. ಈ ರಕ್ಷಣಾ ಟಿಪ್ಪಣಿಗೆ ತಟಸ್ಥ ಸಾಕ್ಷಿದಾರರ ಹಾಗೂ ಸ್ಥಳೀಯ ಸಾಕ್ಷಿದಾರರ ರುಜು ಪಡೆಯಬೇಕು.

2.8) ಎಲ್ಲಾ ಪೊಲೀಸ್ ಅಧಿಕಾರಿಗಳು ಮತ್ತು ಎಕ್ಸಿಕ್ಯೂಟೀವ್ ಮ್ಯಾಜಿಸ್ಟ್ರೇಟ್‌ಗಳು ಸಿ.ಆರ್.ಪಿ.ಸಿ. 1973ರ ಕಲಂ 41 ಮತ್ತು 44ರನ್ವಯ ವಾರಂಟ್ ಇಲ್ಲದೆ ಅರೋಪಿಯನ್ನು ಬಂಧಿಸುವ ಅಧಿಕಾರ ಹೊಂದಿರುತ್ತಾರೆ.

2.9) ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿಗಳು ಮೊದಲು ಜೀತದಾಳುಗಳನ್ನು ಅಪರಾಧ ನಡೆದಿರುವ ಸ್ಥಳದಿಂದ ಸುರಕ್ಷಿತವಾದ ಸ್ಥಳಕ್ಕೆ ಕೊಂಡೊಯ್ಯಬೇಕು, ಹೀಗೆ ಸಾಗಿಸುವಾಗ ಎಲ್ಲಾ ಜೀತದಾಳುಗಳು ಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಇದಲ್ಲದೆ, ಯಾವೊಬ್ಬ ಜೀತದಾಳಿಗೂ ಅಪರಾಧಿ ಅಥವಾ ಅವನ ಸಹಚರರಿಂದ ಯಾವುದೇ ಅಪಾಯವಾಗದಂತೆ ಭದ್ರತೆ ಒದಗಿಸಬೇಕು

## ೩. ತನಿಖಾ ವಿಚಾರಣಾ ಹಂತ:

3.1) ಜಿಲ್ಲಾಧಿಕಾರಿಗಳು/ಉಪ-ವಿಭಾಗಾಧಿಕಾರಿಗಳು ರಕ್ಷಣೆ ಮಾಡಿದ ಜೀತದಾಳುಗಳಿಗೆ-ಬಿಡುಗಡೆ ಪ್ರಮಾಣ ಪತ್ರ, ತುರ್ತು ಪರಿಹಾರ ನೀಡಬೇಕು (ಕಾರ್ಪಸ್ ನಿಧಿಯಿಂದ ರೂ.30,000/-) (w.e.f. 27.01.2022). ಜೊತೆಗೆ ತಾತ್ಕಾಲಿಕವಾಗಿ ಅವರಿಗೆ ತಂಗುವ ವ್ಯವಸ್ಥೆ ಮಾಡಿ, ಆಹಾರ ಹಾಗೂ ಭದ್ರತೆ ಒದಗಿಸುವ ಕಾರ್ಯವನ್ನು ಮಾಡಬೇಕು.

3.2) ಪತ್ತೆಯಾದ ಜೀತ ಪ್ರಕರಣದ ಸಂಬಂಧ ಕಾರ್ಮಿಕ ಅಧಿಕಾರಿ/ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು ಕನಿಷ್ಟ ವೇತನ ಕಾಯ್ದೆ, 1948; ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯ್ದೆ 1979, ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ ಕಾಯ್ದೆ 2016, ವೇತನ ಪಾವತಿ ಕಾಯ್ದೆ (1936)ಯೂ ಒಳಗೊಂಡಂತೆ ಅನ್ವಯಿಸುವ ಕಾರ್ಮಿಕ ಕಾಯ್ದೆಗಳನ್ವಯ ಅವಶ್ಯಾಕ ಕ್ರಮ ಕೈಗೊಳ್ಳವಂತೆ ಜಿಲ್ಲಾಧಿಕಾ- ರಿಗಳು/ಉಪ ವಿಭಾಗಾಧಿಕಾರಿಗಳು ಖಚಿತ ಪಡಿಸಿಕೊಳ್ಳಬೇಕು.

3.3) ರಕ್ಷಣೆ ಮಾಡಲಾದ ಜೀತದಾಳುಗಳಿಗೆ ಕೇಂದ್ರ ಸರ್ಕಾರವು ಸೂಚಿಸಿರುವ ನಮೂನೆಯನ್ವಯ ಬಿಡುಗಡೆ ಪ್ರಮಾಣ ಪತ್ರಗಳನ್ನು ನೀಡಬೇಕಾಗಿರುವುದರಿಂದ ರಕ್ಷಣೆ ಮಾಡಿದ ತಕ್ಷಣವೇ ಅಥವಾ ರಕ್ಷಣೆ ಕೈಗೊಂಡ 24 ಗಂಟೆಯೊಳಗಾಗಿ ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿಗಳು ಪ್ರತಿಯೊಬ್ಬ ಜೀತದಾಳನ್ನು ಪ್ರತ್ಯೇಕವಾಗಿ ಅಥವಾ ಅವನ ಕುಟುಂಬದೊಡನೆ ಮತ್ತು ಒಬ್ಬ ಸ್ವಯಂ ಸೇವಾ ಸಂಘಟನೆಯ ಪ್ರತಿನಿಧಿ ಅಥವಾ ಒಬ್ಬ ಸಮಾಜ ಸೇವಕರ ಸಮಕ್ಷಮ ಆದರೆ ಅವನ ಯಜಮಾನನ ಅನುಪಸ್ಥಿತಿಯಲ್ಲಿ ಮುಕ್ತ ವಾತಾವರಣದಲ್ಲಿ ತನಿಖಾ ವಿಚಾರಣೆ ನಡೆಸಬೇಕು. ವಿಚಾರಣೆಯ ವೇಳೆ ಕೇಳುವ ಪ್ರಶ್ನೆಗಳು- ಜೀತದಾಳನ ಮುಂಗಡ ಅಥವಾ ಬೇರಾವುದೇ ಬಾದ್ಯತೆ, ವೇತನ, ಕೆಲಸ ಮಾಡುವ ಸ್ವಾತಂತ್ರ್ಯ (ಕೆಲಸ ಮಾಡುವ ಜಾಗ ಬಿಟ್ಟು ಬೇರೆಡೆ ಕೆಲಸ ಮಾಡಲು ಅವನಿಗೆ ಸ್ವಾತಂತ್ರ್ಯವಿದೆಯೇ ಎಂಬುದರ ಬಗ್ಗೆ), ಮುಕ್ತವಾಗಿ ಪ್ರಯಾಣಿಸುವ ಸ್ವಾತಂತ್ರ್ಯ, ಅವನು ಬೆಳೆದ ಸರಕನ್ನು ಮಾರುಕಟ್ಟೆ-ದರದಲ್ಲಿ ಮಾರುವ ಅಥವಾ ಕೊಳ್ಳುವ ಸ್ವಾತಂತ್ರ್ಯವಿರುವುದೇ ಎಂದು ಪ್ರಶ್ನೆಗಳ ಮೂಲಕ ಮಾಹಿತಿ ಪಡೆಯಬೇಕು. ಮುಂದುವರೆದು ಜೀತಕ್ಕಿದ್ದ ಅವಧಿಯಲ್ಲಿ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ - ಜನಾಂಗದವರ ವಿರುದ್ಧ ದೌರ್ಜನ್ಯಗಳಾಗಿವೆಯೇ, ಮಕ್ಕಳ ಶೋಷಣೆ ಮುಂತಾದ ಅಪರಾಧಗಳು ನಡೆದಿವೆಯೇ ಎಂಬುದನ್ನು ಸಹಾ ತನಿಖಾ ವಿಚಾರಣೆ ವೇಳೆ ತಿಳಿಯಬೇಕು. ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿಯಲ್ಲಿ ಬರುವ ಅನುಬಂಧ-1ರಲ್ಲಿ ನೀಡಿರುವ ಪ್ರಶ್ನಾವಳಿಗಳನ್ನು ಹಾಗೂ ಅವಶ್ಯವಿದ್ದಲ್ಲಿ ಈ ಹಿಂದೆ ಸರ್ಕಾರವು ಸಮೀಕ್ಷೆ ಸಲುವಾಗಿ ಒದಗಿಸಿದ ಅನುಬಂಧ(1) ಮತ್ತು ಅನುಬಂಧ(4) ನ್ನು ಆಧಾರವಾಗಿರಿಸಿಕೊಂಡು ಪ್ರಶ್ನೆಗಳನ್ನು ಕೇಳಬಹುದಾಗಿದೆ. ಅಪರಾಧಿ ಹಾಗೂ ಅವನ ಸಹಸದಸ್ಯರು/ಸಹಚರರನ್ನು ವಿಚಾರಣೆ ಮಾಡುವ ಅವಶ್ಯಕತೆ ಇರುವುದಿಲ್ಲ. ಈ ವಿಚಾರಣೆಯು ವಾದ-ಪ್ರತಿವಾದದ ತರಹ ಇರಬಾರದು ಮತ್ತು ಅಪರಾಧದ ತನಿಖೆಯಂತಿರಬಾರದು. ತನಿಖೆ ಸಮಯದಲ್ಲಿ ಪೋಲೀಸ್ ನಡೆಸುವ ಪಂಚನಾಮೆ ಅಥವಾ Spot ಮಹಜರ್ ಅವಶ್ಯಕ. ಆದರೆ ಈ Spot ಮಹಜರ್ ಸದರಿ ಕಾರ್ಮಿಕನು ಜೀತದಾಳು ಹೌದು ಅಥವಾ ಅಲ್ಲವೋ ಎಂದು ಹಾಜರಿರುವ ಜನರಿಂದ ಸಂಗ್ರಹಿಸಿದ ಅಭಿಪ್ರಾಯವಾಗಿರಬಾರದು. ಈ Spot ಮಹಜರ್ ಮುಂದೆ ಮೇಲ್ಮನವಿ ನ್ಯಾಯಲಯದಲ್ಲಿ ಪ್ರಕರಣವನ್ನು ಸಮರ್ಥವಾಗಿ ಮುಂದುವರೆಸಲು ಅನುಕೂಲವಾಗುವುದು.

3.4) ತನಿಖಾ ವಿಚಾರಣೆ ಮಾಡಿದ 24 ಗಂಟೆಯೊಳಗೆ ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಗಳು ಮಕ್ಕಳನ್ನೂ ಸೇರಿಸಿ ಪ್ರತಿಯೊಬ್ಬ ರಕ್ಷಿಸಲ್ಪಟ್ಟ ಜೀತದಾಳುಗಳಿಗೆ ಬಿಡುಗಡೆ ಪತ್ರ ನೀಡಬೇಕು. ಮಕ್ಕಳು ಅವರ ಕುಟುಂಬದೊಂದಿಗೆ ಇದ್ದರೂ ಸಹಾ ಅವರಿಗೆ ಬಿಡುಗಡೆ ಪ್ರಮಾಣ ಪತ್ರವನ್ನು ನೀಡಬೇಕು. ಬಿಡುಗಡೆ ಪ್ರಮಾಣ ಪತ್ರವನ್ನು ನೀಡುವ

ಮೊದಲು ಜೀತ ಕಾಯ್ದೆ ಸೇರಿದಂತೆ ಮತ್ತಾವುದಾದರೂ ಅಪರಾಧಗಳು (IPC, CrPC) ನಡೆದಿದ್ದಲ್ಲಿ ಪ್ರಥಮ ವರ್ತಮಾನ ವರದಿ ದಾಖಲಿಸಿ ನಂತರದಲ್ಲಿ ಬಿಡುಗಡೆ ಪ್ರಮಾಣ ಪತ್ರವನ್ನು ನೀಡಬೇಕು.

3.5) ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿಗಳು ರಕ್ಷಿಸಲ್ಪಟ್ಟ ಪ್ರತಿಯೊಬ್ಬ ಜೀತದಾಳಿಗೂ ಹಾಗೂ ಜೀತ ಬಾಲಕಾರ್ಮಿಕರಿಗೂ ತುರ್ತು ಪರಿಹಾರ ಅನುದಾನವನ್ನು (ರೂ.30,000/-) (w.e.f. 27.01.2022) ನೀಡಬೇಕು.

3.6) ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಗಳು ಬಿಡುಗಡೆಗೊಳಿಸಿದ ಜೀತದಾಳುಗಳ ವಯಸ್ಸನ್ನು ನಿರ್ಧರಿಸಲು ಮತ್ತು ಜೀತದ ಸಮಯದಲ್ಲಿ ಉಂಟಾದ ಗಾಯಗಳು ಅಥವಾ ಕಾಯಿಲೆಗಳನ್ನು ಗುಣಪಡಿಸಲು ಅವರನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆಗೊಳಪಡಿಸಬೇಕು.

## 4. ಪ್ರಥಮ ವರ್ತಮಾನ ವರದಿ (FIR) :

4.1 ರಕ್ಷಣಾ ಕಾರ್ಯಚರಣೆ ಜರುಗಿದ 24 ಗಂಟೆಯೊಳಗೆ ರಕ್ಷಣಾ ಸಮಯದಲ್ಲಿ ಜೀತ ಪದ್ಧತಿ(ರದ್ದತಿ) ಕಾಯ್ದೆಯನ್ನು ಹೊರತುಪಡಿಸಿ ಇನ್ನು ಇತರೆ ಅಪರಾಧಗಳು ಜರುಗಿದೆ ಎಂದು ಮೇಲ್ನೋಟಕ್ಕೆ ಕಂಡು ಬಂದಲ್ಲಿ ಸಂಬಂಧಿಸಿದ ಜಿಲ್ಲಾಧಿಕಾ- ರಿಗಳು/ಉಪ-ವಿಭಾಗಾಧಿಕಾರಿಗಳು ಸಂಬಂಧಪಟ್ಟ/ಅನ್ವಯಿಸುವ ಹಾಗೂ ಜಾರಿಯಲ್ಲಿರುವ ಕಾನೂನುಗಳನ್ವಯ ದೂರು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಪೋಲೀಸರು ದಾಖಲು ಮಾಡುವಂತೆ ಖಾತ್ರಿ ಮಾಡಿಕೊಳ್ಳಬೇಕು. ಹೀಗೆ ಇತರೆ ಅಪರಾಧಗಳನ್ನು ಪ್ರಥಮ ವರ್ತಮಾನ ವರದಿಯಲ್ಲಿ ದಾಖಲಿಸುವ ಸಂದರ್ಭದಲ್ಲಿ ಜೀತ ಪದ್ಧತಿ(ರದ್ಧತಿ) ಕಾಯ್ದೆಯಡಿ ಬರುವ ಕಲಂಗಳನ್ನು ಸಹಾ ದೂರಿನಲ್ಲಿ ಹಾಗೂ ಪ್ರಥಮ ವರ್ತಮಾನ ವರದಿಯಲ್ಲಿ ಸೇರ್ಪಡೆಯಾಗುವಂತೆ ಖಚಿತಪಡಿಸಿಕೊಳ್ಳಬೇಕು.

**4.2 ಜಿಲ್ಲಾಧಿಕಾರಿಗಳು/ಉಪ-ವಿಭಾಗಾಧಿಕಾರಿಗಳು, ಬಾಧಿತ ಜೀತದಾಳು ಅಥವಾ ಅವರ ಕುಟುಂಬಸ್ಥರು, ಸರ್ಕಾರೇತರ ಸಂಸ್ಥೆಗಳಲ್ಲದೆ, ಬೇರೆ ಯಾವುದಾದರೂ ವ್ಯಕ್ತಿಯೂ ಸಹಾ ಜೀತ ಅಪರಾಧ ಹಾಗೂ ಇದರೊಂದಿಗೆ ಜರುಗಿರುವ ಇನ್ನಿತರೆ ಅಪರಾಧಗಳ ಬಗ್ಗೆ ದೂರು ದಾಖಲಿಸುವ ಅಧಿಕಾರವಿದೆ. ಈ ಪ್ರಕಾರವಾದ ದೂರುಗಳು ಸ್ವೀಕೃತಿಯಾದ ಸಂದರ್ಭದಲ್ಲಿ, ಅಂತಹ ದೂರುಗಳಿಗೆ ಸಿ.ಆರ್.ಪಿ.ಸಿ. ಕಲಂ 154 ಅನ್ವಯವಾಗುತ್ತದೆ, ಅದರಂತೆ ಕ್ರಮವಹಿಸುವುದು.**

4.3 ತನಿಖೆ ಪರಿಣಾಮಾಕಾರಿಯಾಗಿ ಮುಂದುವರೆಯಬೇಕೆನ್ನುವ ಉದ್ದೇಶದಿಂದ ಜಿಲ್ಲಾಧಿಕಾರಿಗಳು/ಉಪ-ವಿಭಾಗಾಧಿಕಾ- ರಿಗಳು ಅವರುಗಳ ವಶದಲ್ಲಿರುವ- ವಿಚಾರಣಾ ವರದಿ, ಬಿಡುಗಡೆ ಪ್ರಮಾಣ ಪತ್ರಗಳ ಪ್ರತಿ ಹಾಗೂ ಜೀತದಾಳುಗಳ ಆರೋಗ್ಯ ತಪಾಸಣಾ ವರದಿಗಳನ್ನು ಪೋಲೀಸರಿಗೆ ಜರೂರಾಗಿ ಒದಗಿಸಬೇಕು.

4.4 ಜೀತ ಪದ್ಧತಿ(ರದ್ದತಿ) ಕಾಯ್ದೆ ಉಲ್ಲಂಘನೆ ಜೊತೆಗೆ ಇತರೆ ಅಪರಾಧಗಳು ಜರುಗಿದ್ದ ಪಕ್ಷದಲ್ಲಿ ಪೋಲೀಸರು ಸಿ.ಆರ್.ಪಿ.ಸಿ. ನಿಯಮ/ಕಲಂಗಳನ್ವಯ ಅವುಗಳ ವಿಚಾರಣೆ, ಬಾಧಿತ ಜೀತದಾಳನ ಹೇಳಿಕೆಗಳನ್ನು CrPC Sec 161ರನ್ವಯ ಅತೀ ಶೀಘ್ರವಾಗಿ ದಾಖಲಿಸಿಕೊಳ್ಳುವಂತೆ ಜಿಲ್ಲಾಧಿಕಾರಿಗಳು/ಉಪ-ವಿಭಾಗಾಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು. ಜೀತವಿಮುಕ್ತರನ್ನು ಅವರ ಸ್ವಂತ ಊರು/ಜಿಲ್ಲೆ/ರಾಜ್ಯಗಳಿಗೆ ಪ್ರತ್ಯಾವರ್ತನೆ (Repatriation) ಮಾಡುವ ಮುನ್ನ ಹಾಗೂ ಪ್ರಸ್ತುತ ವಿಚಾರಣೆ ನಡೆಸುತ್ತಿರುವ ಪೋಲೀಸ್ ಅಧಿಕಾರಿಯು ಸಂಬಂಧಿಸಿದ ಪೋಲೀಸ್ ಠಾಣಾ ವ್ಯಾಪ್ತಿ ದಾಟಿ ಹೋಗುವ ಮುನ್ನ ಈ ಎಲ್ಲಾ ಪ್ರಕ್ರಿಯೆಗಳನ್ನು ಮುಕ್ತಾಯ ಮಾಡಬೇಕು.

## 5. ಅಪರಾಧಗಳ ಅಭಿಯೋಜನೆ:

5.1 ಸಂಬಂಧಿಸಿದ ಜಿಲ್ಲಾಧಿಕಾರಿಗಳು/ಉಪ-ವಿಭಾಗಾಧಿಕಾರಿಗಳು ಅಂತಹ ಪ್ರಕರಣಗಳಲ್ಲಿ ಸಕ್ಷಮ ನ್ಯಾಯಾಲಯವು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ(ಜೆಎಂಎಫ್‌ಸಿ) ನೀಡಿರುವ ತೀರ್ಪುಗಳನ್ನು ಹಾಗೂ ರಕ್ಷಣೆ ಮಾಡಲಾದ ಹಾಗೂ ಪುನರ್ವಸತಿ ಕೈಗೊಳ್ಳಬೇಕಾದ ಜಿಲ್ಲಾಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಜಿಲ್ಲಾಡಳಿತಗಳ ಅಧಿಕಾರಿಗಳಿಗೆ ತಿಳಿಸುವುದರೊಂದಿಗೆ ಅವುಗಳ ದೃಢೀಕೃತ ಪ್ರತಿಗಳನ್ನು ಒದಗಿಸಬೇಕು.

## 6. ಸಂಕ್ಷಿಪ್ತ ವಿಚಾರಣೆ (Summary trial)

- ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಕಾಯ್ದೆ , 1976 ರ ಅಡಿಯಲ್ಲಿ ಸಂಕ್ಷಿಪ್ತ ವಿಚಾರಣೆ ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಕಾಯ್ದೆ, 1976 ರ ಅಧ್ಯಾಯ 6 ರಲ್ಲಿ ಕಾಯ್ದೆಯಡಿ ನಿಗದಿಪಡಿಸಿದ ಅಪರಾಧಗಳು ಮತ್ತು ಅಪರಾಧಗಳನ್ನು ಕುರಿತಂತೆ ವಿಚಾರಣಾ ಪ್ರಕ್ರಿಯೆಯ ಬಗ್ಗೆ ತಿಳಿಸಲಾಗಿದೆ.
- ಸರ್ಕಾರದ ಅಧಿಸೂಚನೆ ಸಂಖ್ಯೆ KPRC-ADM20RBL/26/2022 ದಿನಾಂಕ: 08.09.2023ರಲ್ಲಿ ಸರ್ಕಾರದ ಅಧಿಸೂಚನೆ ಸಂ-RDP/04/RBL/2010,dated-15.09.2010 ರಲ್ಲಿ ಉಪವಿಭಾಗಾಧಿಕಾರಿಗಳಿಗೆ (ಕಾರ್ಯನಿರ್ವಾಹಕ ದಂಡಾಧಿಕಾರಿಗಳಿಗೆ) ನೀಡಲಾಗಿದ್ದ ದ್ವಿತೀಯ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಅಧಿಕಾರವನ್ನು ಈ ಅಧಿಸೂಚನೆ ಮೂಲಕ ಹಿಂಪಡೆಯಲಾಗಿದೆ. ಬಾಕಿ ಪ್ರಕರಣಗಳನ್ನು ಸಂಪೂರ್ಣವಾಗಿ ಸಕ್ಷಮ ನ್ಯಾಯಾಲಯದ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಕ್ಕೆ (JMFC) ಗೆ ಈ ಕೂಡಲೇ ವರ್ಗಾಯಿಸುವಂತೆ ಸೂಚಿಸಲಾಗಿರುತ್ತದೆ.

ಕರ್ನಾಟಕ ಸರ್ಕಾರ

ಸಂಖ್ಯೆ– KPRC-ADM20RBL/26/2022

ಕರ್ನಾಟಕ ಸರ್ಕಾರದ ಸಚಿವಾಲಯ,
೩ನೇ ಹಂತ, ೩ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ– ೦೮.೦೯.೨೦೨೩

## ಅಧಿಸೂಚನೆ

ಜೀತ ಪದ್ಧತಿ(ರದ್ದತಿ) ಕಾಯ್ದೆ1976 ಕಲಂ 21 ರಡಿಯಲ್ಲಿ The State Government may confer, on an Executive Magistrate, the powers of a Judicial Magistrate of the 1st Class or of the 2nd Class for the trial of offences under this Act; and , on such conferment of powers, the Execuitve Magistrate on whom the powers are so conferred, shall be deemed, for the purposes of the Code of Criminal Procedure, 1973(2 of 1974), to be a Judicial Magistrate of the 1st Class, or of the 2nd Class, as the case may be ಎಂಬುದರ ಆಧಾರದ ಮೇರೆಗೆ ಸರ್ಕಾರವು ಅಧಿಸೂಚನೆ ಸಂ– RDP/04/RBL/2010, dated- 15.09.2010 ರಲ್ಲಿ ಸದರಿ ಕಾಯ್ದೆಯ ಕಲಂ 21 ರಡಿಯಲ್ಲಿ ವಿಚಾರಣೆ ನಡೆಸಿ, ಶಿಕ್ಷೆ ವಿಧಿಸುವ ಅಧಿಕಾರವನ್ನು ಉಪವಿಭಾಗಾಧಿಕಾರಿಗಳಿಗೆ ನೀಡಿದ್ದು, ಸದರಿ ಅಧಿಕಾರಿಗಳಿಗೆ ದ್ವಿತೀಯ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಅಧಿಕಾರವನ್ನು ನೀಡಲಾಗಿರುತ್ತದೆ.

ಮಾನ್ಯ ಮಧ್ಯಪ್ರದೇಶ ಉಚ್ಚ ನ್ಯಾಯಾಲಯ ಪ್ರಕರಣ ಸಂಖ್ಯೆ - Hanumanthsingh Kubersingh Vs State of Madhya Pradesh & another(Petition No 2522 of 1984 decided on 28.09.1995(Jabalpur) ಪೂರ್ಣ ಪೀಠದ ತೀರ್ಪು, ಮಾನ್ಯ ಬಾಂಬೆ ಉಚ್ಚ ನ್ಯಾಯಾಲಯ ಪ್ರಕರಣ ಸಂಖ್ಯೆ– Hon'ble Bombay High Court Judgement in Govind Shanwar Chatal Vs Dattatraya Waman Banushali & another(1192(2) Bom CR 569) ಮಾನ್ಯ ಮದ್ರಾಸ್ ಉಚ್ಚ ನ್ಯಾಯಾಲಯ ಪ್ರಕರಣ ಸಂಖ್ಯೆ– Union of India Vs Gajendran, 30.07.2018, RP No-698 of 2017 ತೀರ್ಪುಗಳಲ್ಲಿ ಜೀತ ಪದ್ಧತಿ (ರ) ಕಾಯ್ದೆ 1976 ಕಲಂ 21 ರಡಿ ಕಾರ್ಯನಿರ್ವಾಹಕ ದಂಡಾಧಿಕಾರಿಗಳಿಗೆ ಈ ಕಾಯ್ದೆಯಡಿ ವಿಚಾರಣೆ ನಡೆಸಿ, ಶಿಕ್ಷೆ ನೀಡುವ ಅಧಿಕಾರವು ಸಂವಿಧಾನದ ಅನುಚ್ಛೇದ 50, 14 & 21 ಗಳಿಗೆ ವಿರುದ್ಧವಾಗಿರುವ ಕಾರಣ ಜೀತಪದ್ಧತಿ(ರದ್ಧತಿ) ಕಾಯ್ದೆ 1976 ಕಲಂ 21 ನ್ನು ರದ್ದುಗೊಳಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಸರ್ಕಾರದ ಅದಿಸೂಚನೆ ಸಂ– RDP/04/RBL/2010, dated- 15.09.2010 ರಲ್ಲಿ ಉಪವಿಭಾಗಾಧಿಕಾರಿಗಳಿಗೆ (ಕಾರ್ಯನಿರ್ವಾಹಕ ದಂಡಾಧಿಕಾರಿಗಳಿಗೆ) ನೀಡಲಾಗಿದ್ದ ದ್ವಿತೀಯ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಅಧಿಕಾರವನ್ನು ಈ ಅಧಿಸೂಚನೆ ಮೂಲಕ ಹಿಂಪಡೆಯಲಾಗಿದೆ. ಮುಂದುವರೆದು, ರಾಜ್ಯದ ಎಲ್ಲಾ ಉಪವಿಭಾಗಾಧಿಕಾರಿಗಳು ತಮ್ಮ ಹಂತದಲ್ಲಿ ಜೀತ ಪದ್ಧತಿ (ರ) ಕಾಯ್ದೆ 1976 ಕಲಂ 16, 17,18 & 19 ರಡಿ FIR ಮಾಡಿ ದಾಖಲಿಸಿಕೊಂಡಿರುವ ಬಾಕಿ ಪ್ರಕರಣಗಳನ್ನು ಸಂಪೂರ್ಣವಾಗಿ ಸಕ್ಷಮ ನ್ಯಾಯಾಲಯದ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಕ್ಕೆ (JMFC) ಗೆ ಈ ಕೂಡಲೇ ವರ್ಗಾಯಿಸುವಂತೆ ಅಧಿಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಡಾ ॥ ಎನ್.ನೋಮೇಶ್ ಕುಮಾರ್)
ನಿರ್ದೇಶಕರು (ಪಂ. ರಾಜ್) ಹಾಗೂ
ಪದ ನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

(Gazzeted copy @ page No. 137 - 141 )

# 7. ಜೀತದಾಳುಗಳಿಗೆ ವಿತರಿಸಬೇಕಾದ ಸವಲತ್ತುಗಳು.

7.1 ಜೀತವಿಮುಕ್ತರಿಗೆ ತಲುಪಬೇಕಾದ ಸವಲತ್ತುಗಳು– (ಕಾರ್ಪಸ್ ನಿಧಿಯಿಂದ ರೂ.30,000/–) (w.e.f. 27.01.2022) ತುರ್ತು ಪರಿಹಾರ ಹಾಗೂ ಮಾರ್ಗಸೂಚಿಯಲ್ಲಿ ಪಟ್ಟಿ ಮಾಡಿರುವಂತಹ ಅನುದಾನೇತರ ಸೌಲಭ್ಯಗಳು.

7.2 ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳಡಿ ಜೀತ ವಿಮುಕ್ತರಿಗೆ ಸಲ್ಲುವಂತಹ ಸವಲತ್ತುಗಳನ್ನು ಜಿಲ್ಲಾಧಿಕಾರಿಗಳು/ ಉಪ–ವಿಭಾಗಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅತೀ ಶೀಘ್ರವಾಗಿ ಅವರುಗಳಿಗೆ ತಲುಪುವಂತೆ ಕ್ರಮವಹಿಸಬೇಕು. ಜಿಲ್ಲಾಧಿಕಾರಿಗಳು/ ಉಪ–ವಿಭಾಗಾಧಿಕಾರಿಗಳು ಜೀತ ವಿಮುಕ್ತರಿಗೆ ಕೆಳಗಿನ ದಾಖಲಾತಿಗಳನ್ನು ವಿತರಿಸಲು/ ಪಡೆಯಲು ಅನುವುಮಾಡಿಕೊಡುವುದು:

7.3 ಜೀತ ವಿಮುಕ್ತರ ಬಿಡುಗಡೆ ಪ್ರಮಾಣ ಪತ್ರಗಳನ್ನು ಗುರುತಿನ ಚೀಟಿಗಳೆಂದು ಪರಿಗಣಿಸತಕ್ಕದ್ದು ಹಾಗೂ ಛಾಯಾಚಿತ್ರವು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಧೃಡೀಕರಣ ಹೊಂದಿರತಕ್ಕದ್ದು.




7.4 ಜಿಲ್ಲಾಧಿಕಾರಿಗಳು / ಉಪ–ವಿಭಾಗಾಧಿಕಾರಿಗಳು ಜೀತ ವಿಮುಕ್ತರಿಂದ ಅಥವಾ ಅವರ ಪ್ರತಿನಿಧಿಗಳಿಂದ ಯಾವುದೇ ಅರ್ಜಿಗಳು ಸ್ವೀಕೃತಿಯಾದಲ್ಲಿ ಅವರುಗಳಿಗೆ ಸಲ್ಲಸಬೇಕಾಗಿರುವ ಎಲ್ಲಾ ಸೌಲಭ್ಯಗಳನ್ನು ತಲುಪಿಸುವ ಕುರಿತು ಕ್ರಮವಹಿಸುವುದು.

7.5 ಜಿಲ್ಲಾಧಿಕಾರಿಗಳು / ಉಪ–ವಿಭಾಗಾಧಿಕಾರಿಗಳು ಜೀತವಿಮುಕ್ತರನ್ನು ಪುನರ್ವಸತಿಗೊಂಡ ಸ್ಥಳೀಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು.

7.6 ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಾಲಯವು 18/5/2016ರಂದು ಹೊರಡಿಸಿರುವ ಪರಿಷ್ಕೃತ ಮಾರ್ಗ ಸೂಚಿಯಲ್ಲಿ (Ref: F.No.S-11012/0/2015-BL, dated-18/5/2016) ಅಂಶ 6.2ರಲ್ಲಿ ಕೇಂದ್ರ ಸರ್ಕಾರದಿಂದ ಜೀತವಿಮುಕ್ತರ ಪುನರ್ವಸತಿ ಅನುದಾನ ಪಡೆಯಲು – ರಾಜ್ಯ ಸರ್ಕಾರದಿಂದ ನೀಡಬೇಕಾಗಿರುವ ತುರ್ತು ಪರಿಹಾರ ಅನುದಾನ (ಕಾರ್ಪಸ್ ನಿಧಿ) ಮತ್ತು ಅನುದಾನೇತರ ಪುನರ್ವಸತಿ ಆಗಿರಬೇಕು ಮತ್ತು ಸಂಕ್ಷಿಪ್ತ ವಿಚಾರಣೆ ನಡೆಸಿ ದಂಡನೆ ವಿಧಿಸಿರುವ ಮಾಹಿತಿಯನ್ನು ನೀಡಿದ ನಂತರವೇ ಪುನರ್ವಸತಿ ಅನುದಾನ ನೀಡಲಾಗುವುದೆಂದು ತಿಳಿಸಿರುತ್ತಾರೆ. ಆದ್ದರಿಂದ, ಪರಿಷ್ಕೃತ ಮಾರ್ಗಸೂಚಿ ಅನುಬಂಧ–3 ರಲ್ಲಿರುವ ಅನುದಾನೇತರ ಹಾಗೂ ಅನುದಾನ(ಕಾರ್ಪಸ್ ನಿಧಿ) ಸೌಲಭ್ಯಗಳನ್ನು ಕಡ್ಡಾಯವಾಗಿ ಬಿಡುಗಡೆಹೊಂದಿದ ಜೀತವಿಮುಕ್ತರಿಗೆ ವಿತರಿಸಲು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳು ಕ್ರಮವಹಿಸಬೇಕು. ಅದಾದ ನಂತರದಲ್ಲೇ ಜೀತವಿಮುಕ್ತರಿಗೆ ಪುನರ್ವಸತಿ ಅನುದಾನವನ್ನು ಕೇಂದ್ರದಿಂದ ಪಡೆಯಲು ಸಾಧ್ಯವಾಗುತ್ತದೆ

## ೮. ಪ್ರತ್ಯಾವರ್ತನೆ: (Repatriation)– ಜೀತದಾಳುಗಳನ್ನು ಅವರ ಸ್ವಂತ ಸ್ಥಳಕ್ಕೆ ಮರಳಿ ಕಳುಹಿಸುವ ಪ್ರಕ್ರಿಯೆ.

೮.1 ಪ್ರತ್ಯಾವರ್ತನೆಯು ಜೀತವಿಮುಕ್ತರ ಇಚ್ಛೆಗನುಗುಣವಾಗಿ, ಜೀತವಿಮುಕ್ತಗೊಳಸುವ ಜಿಲ್ಲಾಧಿಕಾರಿಗಳು/ ಉಪ-ವಿಭಾಗಾಧಿಕಾರಿಗಳು ಜೀತವಿಮುಕ್ತರ ಪ್ರತ್ಯಾವರ್ತನೆಯ ಹೊಣೆ ಹೊಂದಿದ್ದು ಪ್ರತ್ಯಾವರ್ತನೆಯು ಅತಿ ಶೀಘ್ರವಾಗಿ ಅಥವಾ ಕಡ್ಡಾಯವಾಗಿ ಅವರುಗಳನ್ನು ವಿಮುಕ್ತಗೊಳಸಿದ 24 ಘಂಟೆಗಳ ಒಳಗಾಗಿಯೇ ಮಾಡತಕ್ಕದ್ದು..

೮.2 ಜಿಲ್ಲಾಧಿಕಾರಿಗಳು/ಉಪ-ವಿಭಾಗಾಧಿಕಾರಿಗಳು ಜೀತವಿಮುಕ್ತರ ಶೀಘ್ರ ಮತ್ತು ಸುರಕ್ಷಿತ ಸ್ಥಳಾಂತರ, ರಕ್ಷಣೆ ಮತ್ತು ಪುರ್ನವಸತಿಗಾಗಿ ಜೀತ ವಿಮುಕ್ತಿಗೊಳಸಿದ ಹಾಗೂ ಪುನರ್ವವಸತಿಗೊಳ್ಳುವ ಸ್ಥಳಗಳ ಪೋಲೀಸ್ ಮತ್ತು ಜಿಲ್ಲಾಡಳತದೊಂದಿಗೆ ಸಮನ್ವಯ ಸಾಧಿಸುವುದು. ಮುಂದುವರೆದು:

೮.2.1 ಜೀತವಿಮುಕ್ತರ ಊಟ, ವಸತಿ, ಸಾರಿಗೆ ಮತ್ತು ಸುರಕ್ಷತೆಯ ಬಗ್ಗೆ ಕ್ರಮವಹಿಸುವುದು.

೮.2.2 ಜೀತವಿಮುಕ್ತರಿಗೆ ಅವರುಗಳು ಪುನರ್ವಸತಿಗೊಂಡಂತಹ ಸ್ಥಳಗಳಲ್ಲಿ ಅಪರಾಧಿ ಅಥವಾ ಅವರ ಸಹವರ್ತಿಗಳಂದ ಸಂಭವಿಸಬಹುದಾದಂತಹ ಕಿರುಕುಳ ಮತ್ತು ಬೆದರಿಕೆಗಳಂದ ಕಾಪಾಡುವ/ ರಕ್ಷಿಸುವ ನಿಟ್ಟಿನಲ್ಲಿ ಆ ಸ್ಥಳದ ಪೊಲೀಸ್ ಅಧಿಕಾರಿಗಳಗೆ ಲಖಿತ ಮನವಿ ಮೂಲಕ ಪರಿಸ್ಥಿತಿಯನ್ನು ತಿಳಸುವುದು.

೮.2.3 ಜೀತವಿಮುಕ್ತರ ಪುನರ್ವಸತಿ ನಿಮಿತ್ತ ಪುನರ್ವಸತಿಗೊಂಡಂತಹ ಸ್ಥಳದ ಜಿಲ್ಲಾಡಳತದ ಅಧಿಕಾರಿಗಳಗೆ ಲಖಿತ ಮನವಿಯಲ್ಲಿ ಈ ಕೆಳಕಂಡ ಅಂಶಗಳನ್ನು ಅಳವಡಿಸಬೇಕು:

೮.2.3.1 ಜೀತವಿಮುಕ್ತರ ಹೆಸರು, ಖಾಯಂ ವಿಳಾಸ, ಸಂಪರ್ಕ ಮಾಹಿತಿ ಹೊಂದಿರಬೇಕು.

೮.2.3.2 ಅಪರಾದಿಗಳ ಹೆಸರುಗಳು(ಲಭ್ಯವಿದ್ದಲ್ಲಿ).

೮.2.3.3 ಗುರುತಿನ ಚೀಟಿಗಳು ಮತ್ತು ಬಿಡುಗಡೆ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳು.

೮.2.3.4 ಜೀತವಿಮುಕ್ತರ ಗುರುತಿನ ಚೀಟಿಗಳು.

೮.2.3.5 ಜೀತವಿಮುಕ್ತರಿಗೆ ಒದಗಿಸಲಾದ ಇತರೆ ಸೌಲಭ್ಯಗಳು.

೮.3 ಜಿಲ್ಲಾಧಿಕಾರಿಗಳು/ಉಪ ವಿಭಾಗಾಧಿಕಾರಿಗಳು ಜೀತವಿಮುಕ್ತರನ್ನು ಪ್ರತ್ಯಾವರ್ತನೆ (Repatriation ಮಾಡುವಂತಹ ಸಂದರ್ಭದಲ್ಲಿ ತಮ್ಮನ್ನು ಪ್ರತಿನಿಧಿಸುವ ಅಧಿಕಾರಿಯು ಪೋಲೀಸರೊಂದಿಗೆ ಕಡ್ಡಾಯವಾಗಿ ನಿಯೋಜಿಸಬೇಕು ಹಾಗೂ ಅಪರಾಧಿಗಳು ಯಾವುದೇ ಸಮಯದಲ್ಲೂ ಜೀತವಿಮುಕ್ತರ ಸಂಪರ್ಕಕ್ಕೆ ಬಾರದಂತೆ ಕ್ರಮವಹಿಸುವುದು.





೮.4 ಜೀತ ಕಾರ್ಮಿಕ ಪದ್ಧತಿ(ರದ್ದತಿ) ಕಾಯ್ದೆಯಡಿ ನಡೆದ ಅಪರಾಧದ ತನಿಖೆಯು ಅಥವಾ ವಿಚಾರಣೆಯು ಬಾಕಿ ಇರುವುದೆಂಬ ಕಾರಣವು ಯಾವುದೇ ಸಂದರ್ಭದಲ್ಲಿಯೂ ಜೀತವಿಮುಕ್ತರ ಅಥವಾ ಅವರ ಕುಟುಂಬದವರ ಪ್ರತ್ಯಾವರ್ತನೆಗೆ ಅಡ್ಡಿಯಾಗಕೂಡದು.

೮.5 ಜೀತ ಕಾರ್ಮಿಕ ಪದ್ಧತಿ(ರದ್ದತಿ) ಕಾಯ್ದೆಯಡಿ ನಡೆದ ಅಪರಾಧಗಳಲ್ಲದೇ ಇತರೇ ಕಾಯ್ದೆ ಗಳಡಿ ನಡೆದ ಅಪರಾಧಗಳಗೆ ಸಂಬಂಧಿಸಿದಂತೆ ಸಿಆರ್‌ಪಿಸಿ ಕಲಂ 161 ರಡಿ ಹೇಳಕೆಗಳನ್ನು ಪಡೆಯಬೇಕಾಗಿದ್ದಲ್ಲಿ ಜಿಲ್ಲಾಧಿಕಾರಿಗಳು/ ಉಪ-ವಿಭಾಗಾಧಿಕಾರಿಗಳು ಆದಷ್ಟು ಬೇಗ ಅಥವಾ ಜೀತವಿಮುಕ್ತರನ್ನು ಪ್ರತ್ಯಾವರ್ತನೆ ಮಾಡುವ ಮುನ್ನ ಪಡೆಯಲು ಸೂಕ್ತ ಕ್ರಮವಹಿಸಬೇಕು *(GoI SoP Enclosed in pg.no.98-104)*



ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಟ್ಟಡ ನಿರ್ಮಾಣ ಕೆಲಸದಲ್ಲಿ ಭಾಗಿಯಾಗಿದ್ದ ಜೀತ ಕಾರ್ಮಿಕರು

# ೩. ಜೀತಕಾರ್ಮಿಕರ ರಕ್ಷಣೆ ಮತ್ತು ಪುನರ್ವಸತಿ ಕುರಿತ ಸರಳ Flow Chart

## 3. ಜೀತಕಾರ್ಮಿಕರ ರಕ್ಷಣೆ ಮತ್ತು ಪುನರ್ವಸತಿ ಕುರಿತ ಸರಳ Flow Chart

| ಹಂತಗಳು | ಜಿಲ್ಲಾಡಳಿತದ ಪಾತ್ರ | ಜಿಲ್ಲಾ ಪೊಲೀಸ್ | ಕಾರ್ಮಿಕ ಮತ್ತು ಜಿಲ್ಲಾ ಪಂಚಾಯಿತಿ |
|---|---|---|---|
| ರಕ್ಷಣಾ ಪೂರ್ವ ಸಿದ್ಧತೆ | ◊ ಕಾರ್ಮಿಕರು ಜೀತಕ್ಕಿರುವ ಕುರಿತು ಮಾಹಿತಿ ಬಂದ ಕೂಡಲೇ (24 ಗಂಟೆ) ರಕ್ಷಣಾ ತಂಡದೊಂದಿಗೆ ಸ್ಥಳಕ್ಕೆ ತೆರಳಬೇಕು (ರಕ್ಷಣಾ ತಂಡದ ವಿವರ ಅಂಶ 2.2 ನಲ್ಲಿ ವಿವರಿಸಿದೆ) ಹಾಗೂ ಈ ವಿಷಯವನ್ನು ಗೌಪ್ಯವಾಗಿಡಬೇಕು | ◊ ಕಾರ್ಮಿಕರು ಜೀತಕ್ಕಿರುವ ಕುರಿತು ಮಾಹಿತಿ ಬಂದ ಕೂಡಲೇ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿ ಅವಶ್ಯಾನುಸಾರ ಘಟನಾ ಸ್ಥಳಕ್ಕೆ ತೆರಳಬೇಕು ಹಾಗೂ ಈ ವಿಷಯವನ್ನು ಗೌಪ್ಯವಾಗಿಡಬೇಕು. | ◊ ಜೀತದಾಳುಗಳ ಮಾಹಿತಿಯು ಒಂದು ವೇಳೆ ತಪಾಸಣೆ ವೇಳೆ ಅಥವಾ ದೂರಿನ ಮೂಲಕ ಕಾರ್ಮಿಕ ಇಲಾಖೆಯ ಅಧಿಕಾರಿಗೆ ಸ್ವೀಕೃತಿಯಾದ ಕೂಡಲೇ ಆ ಮಾಹಿತಿಯನ್ನು ಜಿಲ್ಲಾಡಳಿತಕ್ಕೆ ತಲುಪಿಸಿ, ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳಬೇಕು ಹಾಗೂ ಈ ವಿಷಯವನ್ನು ಗೌಪ್ಯವಾಗಿಡಬೇಕು |
| ರಕ್ಷಣಾ ಕಾರ್ಯಾಚರಣೆ | ◊ ಮೊದಲನೆಯದಾಗಿ ಕಾರ್ಮಿಕರನ್ನು ಮಾಲೀಕರಿಂದ ಬೇರ್ಪಡಿಸಿ ಪ್ರತ್ಯೇಕ ಸ್ಥಳಕ್ಕ ಕರೆದೊಯ್ಯಬೇಕು | ◊ ರಕ್ಷಣಾ ಜಾಗಕ್ಕೆ ಸುರಕ್ಷತೆ ಒದಗಿಸಬೇಕು. | ◊ ಪ್ರಾಥಮಿಕ ತನಿಖೆಯಲ್ಲಿ ಕಾರ್ಮಿಕರಿಗೆ ವೇತನವನ್ನು ನಿಗಧಿತ ವೇತನ ಕಾಯ್ದೆ ಅನುಗುಣವಾಗಿ ನೀಡಲಾಗುತ್ತಿದೆಯೇ ಎಂದು ಮಾಹಿತಿ ಪಡೆಯಬೇಕು. |
| | ◊ ಸಂಕ್ಷಿಪ್ತವಾಗಿ ಕೆಲವು ಪ್ರಶ್ನೆಗಳ ಮೂಲಕ (ವೇತನ, ಸ್ವಾತಂತ್ರ್ಯ, ಮೂಲಭೂತ ಸೌಲಭ್ಯ) ಜೀತಕ್ಕಿರುವ ಕುರಿತು ಖಾತ್ರಿ ಪಡಿಸಿಕೊಳ್ಳಬೇಕು | ◊ ತನಿಖೆ ನಡೆಸಲು ಜಿಲ್ಲಾಡಳಿತದೊಂದಿಗೆ ಸಹಕರಿಸಬೇಕು ಹಾಗೂ ಜಿಲ್ಲಾಡಳಿತ ಸ್ಥಳ ಮಹಜರ್ ಮಾಡದ ಪಕ್ಷ ಪೊಲೀಸ್ ಇಲಾಖೆ ಸ್ಥಳ ಮಹಜರ್ ಕೈಗೊಳ್ಳಬೇಕು. | ◊ ಕಾರ್ಮಿಕ ಕಾಯ್ದೆ ಉಲ್ಲಂಘನೆಯಾಗಿದ್ದಲ್ಲಿ ಅದಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಕಲೆಹಾಕಬೇಕು (ರೆಜಿಸ್ಟರ್, ಅಕೌಂಟ್ ಪುಸ್ತಕ, ಪರವಾನಗಿ ಇತರೆ) |
| | ◊ ಜೀತ ಕಾರ್ಮಿಕರನ್ನು ಅವರ ಅಧಿಕೃತ ದಾಖಲಾತಿ/ಗುರುತಿನ ಚೀಟಿಗಳೊಂದಿಗೆ ಸುರಕ್ಷಿತ ಸ್ಥಳಕ್ಕೆ ಸಾಗಿಸುವ ವ್ಯವಸ್ಥೆ ಮಾಡಬೇಕು. | ◊ ಜಪ್ತಿ ಟಿಪ್ಪಣಿ ತಯಾರಿಸಿ– ಎಲ್ಲಾ ಸಾಕ್ಷ್ಯಾಧಾರಗಳನ್ನು ಪಟ್ಟಿ ಮಾಡಿ, ಜಪ್ತಿ ಮಾಡಬೇಕು ಹಾಗೂ ರಕ್ಷಣಾ ಟಿಪ್ಪಣಿ **(Rescue memo)** ತಯಾರಿಸಬೇಕು. | |
| | ◊ ಸ್ಥಳ ಮಹಜರ್ ಮಾಡಬೇಕು. | | |
| ರಕ್ಷಣೋತ್ತರ ಚಟುವಟಿಕೆ | ◊ ಸುರಕ್ಷಿತ ಸ್ಥಳದಲ್ಲಿ ಸುದೀರ್ಘ ತನಿಖೆಯನ್ನು ನಡೆಯಿಸಿಬೇಕು (ಕೇಂದ್ರ ಸರ್ಕಾರದ ಅನುಬಂಧ–1ರಲ್ಲಿ ನೀಡಿರುವ ಪ್ರಶ್ನಾವಳಿಗಳನ್ವಯ ಮಾಹಿತಿ ದಾಖಲಿಸಬೇಕು). ನಡೆದಿದೆ ಎನ್ನಬಹುದಾದ ಅಪರಾಧಗಳ ಪಟ್ಟಿಯನ್ನು ಮಾಡಬೇಕು– ಜೀತ ಅಪರಾಧದ ಜೊತೆಗೆ ಇತರೆ ಶೋಷಣೆಗಳು ನಡೆದಿದ್ದರೆ ಅದನ್ನು ಅವಶ್ಯವಾಗಿ ಪಟ್ಟಿಮಾಡಬೇಕು. ಎಲ್ಲಾ ಜೀತ ಕಾರ್ಮಿಕರನ್ನು ಕಡ್ಡಾಯವಾಗಿ ಆರೋಗ್ಯ ತಪಾಸಣೆಗೆ ಒಳಪಡಿಸಬೇಕು. | ◊ ಯಾವುದೇ ಅಧಿಕಾರಿ/ವ್ಯಕ್ತಿಯಿಂದ ದೂರು ಸ್ವೀಕೃತಿಯಾದಾಗ ಜೀತ ಪದ್ಧತಿ(ರ) ಕಾಯ್ದೆ, 1976 ಹಾಗೂ ಇತರೆ ಕಾಯ್ದೆಯಡಿ- **IPC, CrPC, Atrocity** ಅಪರಾಧಗಳು ನಡೆದಿದ್ದ ಪಕ್ಷ ಸಂಬಂಧಿಸಿದ ಸೆಕ್ಷನ್ ಗಳನ್ವಯ ಪ್ರಥಮ ವರ್ತಮಾನ ವರದಿಯನ್ನು ಸಿದ್ಧಪಡಿಸಬೇಕು. (ಗಮನಿಸಿ: ಉಪವಿಭಾಗಾಧಿಕಾರಿಯನ್ನು ಹೊರತು ಪಡಿಸಿ ಬೇರೆ ಅಧಿಕಾರಿ ದೂರು ನೀಡಬೇಕು) | ◊ ವೇತನ ಕುರಿತಂತೆ ವಿಸ್ತಾರವಾದ ತಪಾಸಣೆ ನಡೆಸಬೇಕು. ವೇತನ ಕಾಯ್ದೆಯನ್ವಯ ವೇತನ ಪಾವತಿಸದ ಪಕ್ಷದಲ್ಲಿ ಸಂಬಂಧಿಸಿದ ಮಾಲೀಕರು/ ಸಂಸ್ಥೆಯಿಂದ ವೇತನವನ್ನು ವಸೂಲಿ ಮಾಡಲು ಕ್ರಮವಹಿಸಬೇಕು. ಆದಷ್ಟು ಕಾರ್ಮಿಕರು ಪ್ರತ್ಯಾವರ್ತನೆಗೊಳ್ಳುವ ಮೊದಲು ಬಾಕಿ ವೇತನ ವಸೂಲಿಗೆ ಕ್ರಮವಹಿಸಬೇಕು. |
| | ◊ ಕಾರ್ಮಿಕರನ್ನು ಜೀತಕ್ಕಿಟ್ಟುಕೊಳ್ಳುವುದು ಕ್ರಿಮಿನಲ್ ಅಪರಾಧವಾದ್ದರಿಂದ ಸಂಬಂಧಿಸಿದ ವ್ಯಕ್ತಿಗಳ ಮೇಲೆ ನಿಗದಿತ ಕಾಯ್ದೆಗಳಡಿ ದೂರುದಾಖಲಿಸಬೇಕು. ಉಪವಿಭಾಗಾಧಿಕಾರಿ ಹೊರತು ಪಡಿಸಿ ಯಾವ ವ್ಯಕ್ತಿಯಾದರೂ ದೂರು ನೀಡಬಹುದಾಗಿದೆ. | ◊ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ದೂರುದಾರರಿಗೆ ಮತ್ತು ಜಿಲ್ಲಾಡಳಿತಕ್ಕೆ ಒದಗಿಸಬೇಕು. | ◊ ತನಿಖೆ ವೇಳೆ ಬಾಲ ಕಾರ್ಮಿಕರು ಕಂಡುಬಂದಲ್ಲಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡು, ಕಾಯ್ದೆಯನ್ವಯ ಮಾಲೀಕರಿಗೆ ಶಿಕ್ಷ ಹಾಗೂ ಜುಲ್ಮಾನೆ ವಿಧಿಸಬೇಕು. ಜುಲ್ಮಾನೆಯನ್ನು ಕಾರ್ಪಸ್ ನಿಧಿಗೆ ಜಮೆ ಮಾಡಿಸಿಬೇಕು. |
| | ◊ ಪೊಲೀಸ್ ಪ್ರಥಮ ವರ್ತಮಾನ ಮಾಹಿತಿ ದಾಖಲಿಸಿದ ನಂತರ ಜೀತಕಾರ್ಮಿಕರಿಗೆ ಬಿಡುಗಡೆ ಪ್ರಮಾಣ ಪತ್ರಗಳನ್ನು ನಿಗಧಿತ ನಮೂನೆಯನ್ವಯ ನೀಡಬೇಕು, ಮಕ್ಕಳನ್ನು ದುಡಿಸಿಕೊಂಡಿದ್ದಲ್ಲಿ (5 ರಿಂದ 14 ವಯೋಮಿತಿಯೊಳಗೆ) ಅವರಿಗೂ ಸಹಾ ಬಿಡುಗಡೆ ಪ್ರಮಾಣ ಪತ್ರ ಹಾಗೂ ತುರ್ತು ಪರಿಹಾರವನ್ನು ನೀಡಬೇಕು. | ◊ ಪ್ರತ್ಯಾವರ್ತನೆಯಾಗುವ ಮೊದಲೇ ಸಂಬಂಧಿಸಿದ ಜೀತ ಕಾರ್ಮಿಕರ ಹೇಳಿಕೆಗಳನ್ನು ಪಡೆದುಕೊಳ್ಳಬೇಕು. | ◊ ಬಾಲ ಜೀತ ಕಾರ್ಮಿಕರಿಗೆ ವಯೋಮಿತಿ ಮತ್ತು ಆರೋಗ್ಯದ ತಪಾಸಣೆಯನ್ನು ಸರ್ಕಾರಿ ವೈದ್ಯರಿಂದ ಮಾಡಿಸಬೇಕು. |
| | ◊ ತುರ್ತ ಪರಿಹಾರ ಅನುದಾನ ತಲಾ (ರೂ.30,000/–) (w.e.f. 27.01.2022) ಗಳನ್ನು ಕಾರ್ಪಸ್ ನಿಧಿ ಮೂಲಕ ಜೀತವಿಮುಕ್ತರ ಖಾತೆಗೆ ಚೆಕ್/ **RTGS** ಮುಖೇನ ವಿತರಿಸಬೇಕು. | ◊ ಬಿಡುಗಡೆಗೊಳಿಸಲಾದ ಜೀತವಿಮುಕ್ತರಿಗೆ ಸೂಕ್ತ ಭದ್ರತೆಯನ್ನು ಒದಗಿಸಬೇಕು. | ◊ ವೇತನ ಕುರಿತಂತೆ ವಿಸ್ತಾರವಾದ ತಪಾಸಣೆ ನಡೆಸಬೇಕು. ವೇತನ ಕಾಯ್ದೆಯನ್ವಯ ವೇತನ ಪಾವತಿಸದ ಪಕ್ಷದಲ್ಲಿ ಸಂಬಂಧಿಸಿದ ಮಾಲೀಕರು/ಸಂಸ್ಥೆಯಿಂದ ವೇತನವನ್ನು ವಸೂಲಿ ಮಾಡಲು ಕ್ರಮವಹಿಸಬೇಕು. ಆದಷ್ಟು ಕಾರ್ಮಿಕರು ಪ್ರತ್ಯಾವರ್ತನೆಗೊ–ಳ್ಳುವ ಮೊದಲು ಬಾಕಿ ವೇತನ ವಸೂಲಿ |

| | | | |
|---|---|---|---|
| | ◈ ಪ್ರತ್ಯಾವರ್ತನೆವಾಗುವವರೆಗೂ (Repatriation) ಹಾಗೂ ಅವರುಗಳು ಪೊಲೀಸ್ ಗೆ ಹೇಳಿಕೆ ನೀಡುವವರೆಗೂ ತಾತ್ಕಾಲಿಕವಾಗಿ ಊಟ, ವಸತಿ ಹಾಗೂ ಭದ್ರತೆ ಒದಗಿಸಬೇಕು. | ◈ ಜೀತದಾಳುಗಳು ಪ್ರತ್ಯಾವರ್ತನೆಯಾಗುವ ಜಿಲ್ಲೆ(ಸ್ವಂತ/ಹೊರ ರಾಜ್ಯ)ಯ ಪೊಲೀಸ್ ಅಧಿಕಾರಿಯವರಿಗೆ ಪತ್ರ ಬರೆದು ಪ್ರತ್ಯಾವರ್ತನೆಯಾಗಿರುವ ಜೀತದಾಳುಗಳಿಗೆ ಸೂಕ್ತ ಭದ್ರತೆ ಒದಗಿಸುವಂತೆ ಪತ್ರ ಬರೆಯಬೇಕು. | ◈ ಕ್ಲೈಮುಗಳನ್ನು ಪ್ರಥಮ ವರ್ತಮಾನ ವರದಿ ಹಾಗೂ ಬಿಡುಗಡೆ ಪತ್ರದ ಪ್ರತಿಗಳೊಂದಿಗೆ ಲೇಬರ್ ಕೋರ್ಟ್ ಗೆ ಸಲ್ಲಿಸತಕ್ಕದ್ದು. |
| | ◈ ಯಾವುದೇ ದಾಖಲಾತಿಗಳಿಲ್ಲದ ವ್ಯಕ್ತಿಗಳಿಗೆ ಬ್ಯಾಂಕ್ ಖಾತೆ ತೆರೆಯಲು ಹಾಗೂ ಆಧಾರ್ ಗುರುತಿನ ಚೀಟಿ ಮಾಡಿಸಲು ಕ್ರಮವಹಿಸಬೇಕು. | | |
| | ◈ ಬಿಡುಗಡೆಗೊಳಲಾದ ಜೀತ ಕಾರ್ಮಿಕರನ್ನು ಅವರ ಸ್ವಂತ ಊರುಗಳಿಗೆ ಪ್ರತ್ಯಾವರ್ತನೆ (Repatriation) ಮಾಡುವಂತಹ ಸಂದರ್ಭದಲ್ಲಿ ಅವರುಗಳ ಸ್ವಂತ ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾಧಿಕಾರಿಯವರಿಗೆ ಬಿಡುಗಡೆ ಪತ್ರದ ಪ್ರತಿಗಳು, ನೀಡಲಾಗಿರುವ ಪರಿಹಾರ ಹಾಗೂ ಮುಂದೆ ಸಂಬಂಧಿಸಿದ ಜಿಲ್ಲೆಯು ನೀಡಬೇಕಿರುವ ಪುನರ್ವಸತಿ ಕುರಿತ ಮಾಹಿತಿಯುಳ್ಳ ಪತ್ರವನ್ನು ಬರೆಯಬೇಕು, ಪತ್ರದ ಪ್ರತಿಯನ್ನು ನಮ್ಮ ಸರ್ಕಾರಕ್ಕೆ, ಹಾಗೂ ಬೇರೆ ರಾಜ್ಯದ ಕಾರ್ಮಿಕರಿದ್ದಲ್ಲಿ ಆ ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಕಳುಹಿಸಬೇಕು. | | |
| | ◈ ಎಲ್ಲಾ ಜಿಲ್ಲಾಡಳಿತ ಕಛೇರಿಗಳಲ್ಲೂ ವರ್ಷವಾರು ಜೀತವಿಮುಕ್ತರ ದಾಖಲಾತಿ ಇರುವ ವಹಿಯನ್ನು ನಿರ್ವಹಿಸಬೇಕು. ಅದರಲ್ಲಿ ಜೀತ ವಿಮುಕ್ತರ ಹೆಸರು, ವಿಳಾಸ, ದೂರವಾಣಿ/ಮೊಬೈಲ್ ಸಂಖ್ಯೆ, ಗುರುತಿನ ಚೀಟಿ, ಬಿಡುಗಡೆ ಪತ್ರ ವಿವರಗಳು ಇರಬೇಕು. | | |
| | ◈ ನಿಯತಕಾಲಿಕವಾಗಿ ಸರ್ಕಾರಕ್ಕೆ ಪ್ರಕರಣಗಳ ವಿವರಗಳನ್ನು ಕಳುಹಿಸಬೇಕು. | | |
| **ಪುನರ್ವಸತಿ** | ◈ ಅನುದಾನೇತರ ಪುನರ್ವಸತಿಗೆ ಸಂಬಂಧಿಸಿದಂತೆ ಕಾರ್ಮಿಕರ ಸ್ವಂತ ರಾಜ್ಯ ಅಥವಾ ಜಿಲ್ಲಾ ಪಂಚಾಯಿತಿಗಳಿಗೆ ಕಾರ್ಮಿಕರ ಬಿಡುಗಡೆ ಪತ್ರಗಳ ಪ್ರತಿಯನ್ನು ಒಳಗೊಂಡ ವರದಿಯನ್ನು ಕಳುಹಿಸಿ ಅನುದಾನೇತರ ಪುನರ್ವಸತಿ ಸೌಲಭ್ಯಗಳಾದ– ನಿವೇಶನ, ಮನೆ, ನರೇಗಾ ಉದ್ಯೋಗ ಚೀಟಿ, ಪಡಿತರ ಚೀಟಿ, ಸ್ಥಳೀಯ ಸ್ವಸಹಾಯ ಸಂಘಗಳಿಗೆ ಸೇರ್ಪಡೆ, ಕೌಶಲ್ಯ ತರಬೇತಿ ಇತ್ಯಾದಿಗಳನ್ನು ಒದಗಿಸುವಂತೆ ಪತ್ರ ಬರೆಯಬೇಕು. | ◈ ಅಪರಾಧಗಳು ನಡೆದಂತಹ ಸಂದರ್ಭದಲ್ಲಿ ಜೀತ ಪದ್ಧತಿ ಕಾಯ್ದೆಯಡಿ ಬರತಕ್ಕ ಅಪರಾಧವಲ್ಲದೇ Prevention of Atrocities act, 1989 ರಡಿ ಅಪರಾಧಗಳು ಜರುಗಿದ್ದ ಪಕ್ಷ ನೊಂದವರಿಗೆ ಕಾಯ್ದೆಯಡಿ ಪರಿಹಾರವನ್ನು ನೀಡಬೇಕು. | ◈ ರಾಜ್ಯದ ಯಾವುದೇ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲ ವಾಸಿಸತಕ್ಕ ಜೀತವಿಮುಕ್ತರಿಗೆ ಚಾಲ್ತಿ ಮಾರ್ಗಸೂಚಿಯನ್ವಯ ಪರಿಹಾರ ಅನುದಾನ ತಲುಪಿರುವ ಕುರಿತು ಜಿಲ್ಲಾ ಪಂಚಾಯಿತಿ ಖಾತ್ರಿ ಪಡಿಸಿಕೊಳ್ಳಬೇಕು. ಮುಂದುವರೆದು ಅನುದಾನೇತರ ಸೌಲಭ್ಯಗಳಾದ ನಿವೇಶನ, ಮನೆ, ನರೇಗಾ ಉದ್ಯೋಗ ಚೀಟಿ, ಪಡಿತರ ಚೀಟಿ, ಸ್ಥಳೀಯ ಸ್ವಸಹಾಯ ಸಂಘಗಳಿಗೆ ಸೇರ್ಪಡೆ, ಕೌಶಲ್ಯ ತರಬೇತಿ ಇತ್ಯಾದಿಗಳನ್ನು ಕಾಲಮಿತಿಯೊಳಗೆ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಿಸುವ ಕಾರ್ಯವನ್ನು ಮಾಡಬೇಕು. ಇದಾದ ನಂತರವಷ್ಟೇ ಫಲಾನುಭವಿಗಳಿಗೆ ಕೇಂದ್ರ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡುತ್ತದೆ. |
| | | | ◈ ನಮ್ಮ ರಾಜ್ಯಕ್ಕೆ ಸೇರಿದಂತಹ ಜೀತವಿಮುಕ್ತರಿಗೆ ತಿಂಗಳಿಗೆ ತಲಾ ರೂ.1000/– ದಂತೆ 24 ತಿಂಗಳಿಗೆ ರೂ.24,000/–ಗಳನ್ನು ಜೀತವಿಮುಕ್ತರ ಸಹಾಯಧನವೆಂದು ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತದೆ. ಇದನ್ನು ಆಯಾ ಜಿಲ್ಲಾ ಪಂಚಾಯಿತಿಗಳು ಜೀತವಿಮುಕ್ತರಿಗೆ ತಲುಪಿಸುವ ಕಾರ್ಯವನ್ನು ಮಾಡಬೇಕು. |

| | | | |
|---|---|---|---|
| **ಅಪರಾಧಗಳ ಅಭಿಯೋಜನೆ (Prosecution)** | ◆ ಜೀತ ಪದ್ಧತಿ(ರ) ಕಾಯ್ದೆ, 1976ರಡಿ ಬರುವ ಅಪರಾಧಗಳಲ್ಲದೇ, ಇದರ ಜೊತೆಗೆ ಇತರೆ ಅಪರಾಧಗಳು ನಡೆದಿದ್ದ ಪಕ್ಷ (ಉದಾ: IPC, CrPC, Atrocity Crimes, Sexual Harrasment on Ladies and Children, Forced Confinement), ಈ ಅಪರಾಧಗಳನ್ನು ಸೇರಿಸಿ FIR ದಾಖಲಿಸಲು ಕ್ರಮವಹಿಸಬೇಕು. ಮುಂದುವರೆದು, ಪೂರಕ ದಾಖಲಾತಿಗಳೊಂದಿಗೆ ಪ್ರಕರಣವನ್ನು ಸಕ್ಷಮ ನ್ಯಾಯಾಲಯ (JMFC) ಕ್ಕೆ ಒಪ್ಪಿಸತಕ್ಕದ್ದು. | ◆ ಜೀತದಾಳುಗಳನ್ನು ರಕ್ಷಿಸಿದ ಸ್ಥಳ ಹಾಗೂ ಅವರ ಸ್ವಂತ ಊರು ಯಾವ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರುವುದು, ಆ ಪೊಲೀಸ್ ಠಾಣೆಯವರು ಪರಿಸ್ಥಿತಿಗನುಗುಣವಾಗಿ ಜೀತವಿಮುಕ್ತರಿಗೆ ಸೂಕ್ತ ಭದ್ರತೆ ಒದಗಿಸಬೇಕು. | ◆ ಸಾಕ್ಷಿದಾರರೆಂದು Charge sheet ನಲ್ಲಿ ನಮೂದಾಗಿರುವ ಕಾರ್ಮಿಕ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿ ಅಭಿಯೋಜನೆಯ ಸಮಯದಲ್ಲಿ ಸಂಪೂರ್ಣ ಸಹಕಾರ ನೀಡಬೇಕು. |
| | | ◆ ಪ್ರಕರಣದ ಪಾಟಿ ಸವಾಲು ನಡೆಯುವ ಸಂದರ್ಭದಲ್ಲಿ ಚಾರ್ಜ್ ಶೀಟ್‌ನಲ್ಲಿ ನಮೂದಿಸಲಾದ ಸಾಕ್ಷಿದಾರರಿಗೆ ಸೂಕ್ತ ಭದ್ರತೆಯನ್ನು ನೀಡಬೇಕು. ಹಾಗೆಯೇ ಜೀತದಾಳುಗಳು ಸಾಕ್ಷಿ ಹೇಳುವ ಸಂದರ್ಭದಲ್ಲಿಯೂ ಸಹಾ ಅವರಿಗೆ ಸೂಕ್ತ ಭದ್ರತೆ ನೀಡಬೇಕು. | |
| | ◆ ಸಾಕ್ಷಿದಾರರೆಂದು Charge sheet ನಲ್ಲಿ ನಮೂದಾಗಿರುವ ಜಿಲ್ಲಾಡಳಿತದ ಸಿಬ್ಬಂದಿಯು ಅಭಿಯೋಜನೆಯ ಸಮಯದಲ್ಲಿ ಸಂಪೂರ್ಣ ಸಹಕಾರ ನೀಡಬೇಕು. | ◆ ಸಾಕ್ಷಿದಾರರೆಂದು ಚಾರ್ಜ್ ಶೀಟ್‌ನಲ್ಲಿ ನಮೂದಾದ ತನಿಖಾಧಿಕಾರಿ ಹಾಗೂ ಪೊಲೀಸ್ ಇವರುಗಳು ವಿಚಾರಣೆ/ ಅಭಿಯೋಜನೆ ಸಮಯದಲ್ಲಿ ಸಹಕರಿಸಬೇಕು. | |
| **ಕನಿಷ್ಠ ವೇತನ ಕ್ಲೈಮುಗಳು** | | ◆ ಸಂಸ್ಥೆಯ ಮಾಲೀಕ ತಪ್ಪಿಸಿಕೊಂಡಂತಹ ಸಂದರ್ಭದಲ್ಲಿ ಅವರನ್ನು ಪತ್ತೆ ಮಾಡುವ ಕಾರ್ಯ ಮಾಡಬೇಕು | ◆ ಸಂಸ್ಥೆಯ ಮಾಲೀಕ ತಪ್ಪಿಸಿಕೊಂಡಂತಹ ಸಂದರ್ಭದಲ್ಲಿ ಅವರನ್ನು ಪತ್ತೆ ಮಾಡುವ ಕಾರ್ಯದಲ್ಲಿ ಸಹಕರಿಸಬೇಕು. |
| | | | ◆ ಕನಿಷ್ಠ ವೇತನ ಕಾಯ್ದೆಯನ್ವಯ ವೇತನದಲ್ಲಿ ವ್ಯತ್ಯಯವಿದ್ದ ಪಕ್ಷ, ಜೀತ ಕಾರ್ಮಿಕರು ಬಾಕಿ ವೇತನವನ್ನು ಪಡೆಯಲು ಕ್ರಮಕೈಗೊಳ್ಳಬೇಕು. |
| **ಜೀತ ಪದ್ಧತಿ ತಡೆಗಟ್ಟುವಿಕೆ ಹಾಗೂ ನಿರ್ಮೂಲನೆ** | ◆ ನಿಯತಕಾಲಿಕ ಸಮೀಕ್ಷೆ ಕೈಗೊಳ್ಳಬೇಕು. ಆಯಾ ಜಿಲ್ಲೆಗಳಲ್ಲಿ ಯಾವ ಕ್ಷೇತ್ರದಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗಿರುತ್ತದೆ -ಯೋ ಅಂತಹ ಕ್ಷೇತ್ರ(ಉದಾ: ಇಟ್ಟಿಗೆ ಕಾರ್ಖಾನೆ)ಕ್ಕೆ ಹೆಚ್ಚು ಒತ್ತು ನೀಡಿ ಸಮೀಕ್ಷೆ ನಡೆಸಬೇಕು. | ◆ ಜಲ್ಲಾಡಳಿತ, ಜಿಲ್ಲಾಪಂಚಾಯಿತಿ ಇವರ ಸಹಯೋಗದಲ್ಲಿ ಜೀತ ಪದ್ದತಿ ತಡೆಗಟ್ಟುವ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಬೇಕು. | ◆ ಪಂಚಾಯಿತಿ ಮಟ್ಟದಲ್ಲಿ ಜೀತ ಪ್ರಕರಣಗಳನ್ನು ತಹಸೀಲ್ದಾರ್/ಉಪವಿಭಾಗಾಧಿಕಾರಿಗೆ ತಾಲ್ಲೂಕು ಪಂಚಾಯಿತಿ ಕಾರ್ಯನಿವಾಹಕಾಧಿಕಾರಿಗಳ ಮುಖೇನ ವರದಿ ಸಲ್ಲಿಸಲಬೇಕೆಂದು ನಿಯಮ 58ಎ ತಿಳಿಸಿದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇದನ್ನು ಅವಶ್ಯವಾಗಿ ಪಾಲಿಸಬೇಕು. |
| | ◆ ಜೀತ ಪದ್ಧತಿ ಕುರಿತಂತೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ನಡೆಸಬೇಕು. ಕಾರ್ಯಕ್ರಮದಲ್ಲಿ ಹೆಚ್ಚಾಗಿ ಜನಪ್ರತಿನಿಧಿಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಭಾಗವಹಿಸುವಿಕೆ ಇರುವಂತೆ ಆಯೋಜಿಸಬೇಕು. | | |
| | ◆ ಜಿಲ್ಲಾ ಹಾಗೂ ಉಪವಿಭಾಗೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಜಾಗೃತಿ ಸಮಿತಿಗಳು ಜೀತ ಪದ್ಧತಿ ತಡೆಗಟ್ಟುವಿಕೆ ಮತ್ತು ಜೀತದಾಳುಗಳ ಪುನರ್ವಸತಿ ಬಗ್ಗೆ ಸಂಪೂರ್ಣ ಗಮನ ಹರಿಸಬೇಕು ಹಾಗೂ ಜಾಗೃತಿ ಸಮಿತಿಗಳ ಸಭೆಗಳು ಜಿಲ್ಲಾ ಹಾಗೂ ಉಪವಿಭಾಗದ ಮಟ್ಟದಲ್ಲಿ ನಿಯತಕಾಲಿಕವಾಗಿ ನಡೆಯುವಂತೆ ಅಧಿಕಾರಿಗಳು ಕ್ರಮವಹಿಸಬೇಕು. | | |



ಗದಗ ಜಿಲ್ಲೆಯಲ್ಲಿ ಬಿಡುಗಡೆಗೊಂಡ ಜೀತಕಾರ್ಮಿಕರಿಗೆ ಬಿಡುಗಡೆ ಪ್ರಮಾಣ ಪತ್ರ ವಿತರಣೆ

# 4. ಜೀತ ಕಾರ್ಮಿಕ ಪದ್ಧತಿ (ರದ್ದತಿ) ಕಾಯ್ದೆ, 1976 ಕನ್ನಡ ಭಾಷೆಯಲ್ಲಿ

# ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976

# BONDED LABOUR SYSTEM ABOLITION ACT, 1976

# ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976
# BONDED LABOUR SYSTEM ABOLITION ACT, 1976

## ಪರಿವಿಡಿ


| ಕ್ರ.ಸಂ. | | ಪು.ಸಂ. |
|---|---|---|
| | **ಪ್ರಾರಂಭಿಕ Preliminary** | |
| 1. | ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ<br>Short title, Extent and Commencement | 6 |
| 2. | ಪರಿಭಾಷೆಗಳು<br>Definitions | 6 |
| 3. | ಈ ಅಧಿನಿಯಮವು ಮೇಲುಗೈ ಪರಿಣಾಮವನ್ನು ಹೊಂದಿರತಕ್ಕದ್ದು<br>Act to have over-riding effect | 10 |
| | **ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲನ**<br>**Abolition of Bonded Labour System** | |
| 4. | ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲನ<br>Abolition of Bonded Labour System | 10 |
| 5. | ಒಪ್ಪಂದ, ರೂಢಿಗಳು ಮುಂತಾದವು ಅಸಿಂಧುವಾಗುತ್ತವೆ<br>Agreement, Custom, etc. to be void | 11 |
| | **ಜೀತದ ಋಣವನ್ನು ಮರು ಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಸಮಾಪ್ತಿಯಾಗತಕ್ಕದ್ದು**<br>**Liability to repay bonded Debt to stand extinguished** | |
| 6. | ಜೀತದ ಋಣವನ್ನು ಮರು ಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಸಮಾಪ್ತಿಯಾಗತಕ್ಕದ್ದು<br>Liability to repay Bonded debt to stand extinguished | 11 |
| 7. | ಜೀತ ಕಾರ್ಮಿಕನ ಸ್ವತ್ತನ್ನು ಅಡಮಾನ ಇತ್ಯಾದಿಗಳಿಂದ ಮುಕ್ತಗೊಳಿಸತಕ್ಕದ್ದು<br>Property of Bonded Labourer to be freed from mortgage, etc | 13 |
| 8. | ಜೀತಮುಕ್ತನಾದ ಜೀತ ಕಾರ್ಮಿಕನನ್ನು ಹೊಲಮನೆ, ಮುಂತಾದವುಗಳಿಂದ ಹೊರದೂಡತಕ್ಕದ್ದಲ್ಲ<br>Freed Bonded Labourer not to be evicted from homestead, etc | 14 |
| 9. | ಅಳಿದುಹೋದ ಋಣದ ಬಗ್ಗೆ ಸಾಲದಾತನು ಯಾವ ಹಣವನ್ನೂ ಸ್ವೀಕರಿಸತಕ್ಕದ್ದಲ್ಲ<br>Creditor not to accept payment against extinguished debt | 14 |
| 10. | ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿರ್ದಿಷ್ಟವಾಗಿ ನಿಗದಿಪಡಿಸಬಹುದಾದ ಪ್ರಾಧಿಕಾರಿಗಳು<br>Authorities who may be specified for implementing the Provisions of this Act | 15 |
| 11. | ಸಾಲ ಸೌಲಭ್ಯವು ದೊರಕುವಂತೆ ನೋಡಿಕೊಳ್ಳಲು ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತಿತರ ಅಧಿಕಾರಿಗಳ ಕರ್ತವ್ಯ | |

Duty of District Magistrate and other Officers to ensure Credit 15
12. ಜಿಲ್ಲಾ ಮ್ಯಾಜಿಸ್ಟ್ರೇಟನ ಮತ್ತು ಅವನಿಂದ ಪ್ರಾಧಿಕಾರ ಪಡೆದ ಅಧಿಕಾರಿಗಳ ಕರ್ತವ್ಯ
Duty of District Magistrate and Officers authorised by him 16
13. ಜಾಗೃತಾ ಸಮಿತಿಗಳು
Vigilance Committees 16
14. ಜಾಗೃತ ಸಮಿತಿಯ ಪ್ರಕಾರ್ಯಗಳು
Functions of Vigilance Committees 18
15. ರುಜುವಾತಿನ ಹೊಣೆ
Burden of Proof 19
16. ಜೀತ ಕಾರ್ಮಿಕ ಪದ್ಧತಿಯ ಆಚರಣೆ ಮಾಡಿದ್ದಕ್ಕಾಗಿ ದಂಡನೆ
Punishment for Enforcement of Bonded Labour 19
17. ಜೀತ ಸಾಲವನ್ನು ಕೊಟ್ಟರೆ ದಂಡನೆ
Punishment for Advancement of Bonded Debt 19
18. ಜೀತ ಕಾರ್ಮಿಕ ಪದ್ಧತಿಯ ಅಡಿಯಲ್ಲಿ ಜೀತ ದುಡಿಮೆಯನ್ನು ಒತ್ತಾಯದಿಂದ ಪಡೆದುಕೊಳ್ಳುವುದಕ್ಕೆ ದಂಡನೆ
Punishment for Extracting Bonded Labour under the Bonded Labour System 19
19. ಜೀತ ಕಾರ್ಮಿಕರಿಗೆ ಅವರ ಆಸ್ತಿಯ ಸ್ವಾಧೀನವನ್ನು ವಾಪಸು ಮಾಡಲು ತಪ್ಪಿದ್ದಕ್ಕಾಗಿ ಅಥವಾ ವಿಫಲನಾದುದಕ್ಕಾಗಿ ದಂಡನೆ
Punishment for Ommission or Failure to restore Possession of Property to Bonded Labourers 20
20. ದುಷ್ಪ್ರೇರಣೆಯು ಅಪರಾಧವಾಗಿರತಕ್ಕದ್ದು
Abetment to bean offence 20
21. ಕಾರ್ಯ ನಿರ್ವಾಹಕ ದಂಡಾಧಿಕಾರಿಯಿಂದ ವಿಚಾರಣೆಗೊಳಪಡಿಸಬಹುದಾದ ಅಪರಾಧಗಳು
Offences to be tried by Executive Magistrates 21
22. ಅಪರಾಧಗಳ ಸಂಜ್ಞೇಯತೆ
Cognizance of Offences 21
23. ಕಂಪನಿಗಳಿಂದ ಅಪರಾಧಗಳು
Offences by Companies 21
24. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
Protection of action taken in Good Faith 22
25. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಬಂಧ
Jurisdiction of Civil Courts barred 22
26. ನಿಯಮ ರಚನಾಧಿಕಾರ
Power to make Rules 22
27. ನಿರಸನ ಮತ್ತು ಉಳಿಸುವಿಕೆ
Repeal and Saving 23

# ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976

(1976ರ 19ನೇ ಅಧಿನಿಯಮ)

# BONDED LABOUR SYSTEM ABOLITION ACT, 1976

(Act No. 19 of 1976)

[9ನೇ ಫೆಬ್ರವರಿ, 1967]

ದುರ್ಬಲ ವರ್ಗಗಳ ಜನತೆಯ ಆರ್ಥಿಕ ಮತ್ತು ದೈಹಿಕ ಶೋಷಣೆಯನ್ನು ತಡೆಗಟ್ಟುವ ಉದ್ದೇಶದಿಂದ ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸುವುದಕ್ಕಾಗಿ ರಚಿಸಿದ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಇದು ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

## ಅಧ್ಯಾಯ-I - Chapter-I

## ಪ್ರಾರಂಭಿಕ
## Preliminary

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ**
**Short Title, Extent and Commencement:**

(1) ಈ ಅಧಿನಿಯಮವನ್ನು ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ಅನ್ವಯಿಸುತ್ತದೆ.

(3) ಇದು 1975ರ ಅಕ್ಟೋಬರ್ 25ನೇ ದಿನಾಂಕದಂದು ಜಾರಿಗೆ ಬಂದಿದೆ ಎಂಬುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು**
**Definitions:**

ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,-

(ಎ) **"ಸಾಲ ನೀಡಿಕೆ" "Advance"** ಎಂದರೆ (ಇದರಲ್ಲಿ ಇನ್ನು ಮುಂದೆ ಸಾಲದಾತ ಎಂದು ಕರೆಯಲಾಗುವ) ಒಬ್ಬ ವ್ಯಕ್ತಿಯು (ಇದರಲ್ಲಿ ಇನ್ನು ಮುಂದೆ

ಸಾಲಗಾರನೆಂದು ಕರೆಯಲಾಗುವ) ಇನ್ನೊಬ್ಬ ವ್ಯಕ್ತಿಗೆ ನಗದಿನ ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಅಥವಾ ಭಾಗಶಃ ನಗದು ರೂಪದಲ್ಲಿ ಅಥವಾ ಭಾಗಶಃ ವಸ್ತು ರೂಪದಲ್ಲಿ ಕೊಡಮಾಡಿದ ಸಾಲ ನೀಡಿಕೆ;

(ಬಿ) **"ಒಪ್ಪಂದ" "Agreement"** ಎಂದರೆ, ಸಾಲಗಾರ ಮತ್ತು ಸಾಲದಾತನ ನಡುವಿನ (ಲಿಖಿತ ಅಥವಾ ಬಾಯಿಮಾತಿನ ಅಥವಾ ಭಾಗಶಃ ಬರಹದಲ್ಲಿರುವ ಮತ್ತು ಭಾಗಶಃ ಬಾಯಿಮಾತಿನ) ಒಪ್ಪಂದವೆಂದು ಅರ್ಥ ಮತ್ತು ಇದು ಸಂಬಂಧಪಟ್ಟ ಸ್ಥಳೀಯ ಪ್ರದೇಶದಲ್ಲಿ ಪ್ರಚಲಿತ ಸಾಮಾಜಿಕ ಪದ್ಧತಿಯ ಪ್ರಕಾರ ಅಸ್ತಿತ್ವದಲ್ಲಿ ಇದೆ ಎಂದು ಪೂರ್ವಭಾವನೆ ಮಾಡಲಾದ ಬಲವಂತದ ದುಡಿಮೆಗೆ ಅವಕಾಶ ಕಲ್ಪಿಸುವಂತಹ ಒಪ್ಪಂದವನ್ನು ಒಳಗೊಳ್ಳುತ್ತದೆ.

**ವಿವರಣೆ Explanation:** ಈ ಮುಂದೆ ತಿಳಿಸಿರುವ ಬಲವಂತದ ದುಡಿಮೆಗಳ ಸಂಬಂಧದಲ್ಲಿ ಸಾಮಾಜಿಕ ಸಂಪ್ರದಾಯಗಳ ಅಡಿಯಲ್ಲಿ ಸಾಲಗಾರ ಮತ್ತು ಸಾಲದಾತನ ನಡುವೆ ಒಂದು ಒಪ್ಪಂದ ಅಸ್ತಿತ್ವದಲ್ಲಿದೆ ಎಂದು ಸಾಮಾನ್ಯವಾಗಿ ಪೂರ್ವಭಾವನೆ ಮಾಡಲಾಗುತ್ತದೆ, ಎಂದರೆ :-

ಆಡಿಯಾಮಾರ್, ಬಾರಾಮಾಸಿಯ, ಬಸಹಯಾ, ಬೇಥೂ, ಭಗೇಲಾ, ಚೇರೂಮಾರ್, ಗಾರುಗಲ್ಲು, ಹಾಲಿ, ಹರಿ, ಹಾರವಯಿ, ಹೊಲ್ಯ, ಜಾನಾ, ಜೀತ, ಕಾಮಿಯಾ, ಖುಂದಿತ್-ಮುಂಡಿತ್, ಕುತಿಯಾ, ಲೇಖೇರಿ, ಮುಂಝೊ, ಮೇಟ್, ಮುನೀಷ್ ಪಥಿತ್, ನಿತ್ ಮಜೂರ್, ಪಲೇರು, ಪಡಿಯಾಲ್, ಪನ್ನಾಯಿಲಾಲ್, ಸಾಗಡಿ, ಸಂಜಿ, ಸಂಜಾವತ್, ಸೇವಕ್, ಸೇವಕಿಯಾ, ಸೆರಿ, ವೆಟ್ಟಿ;

(ಸಿ) ಮಾತೃ ಪ್ರಧಾನ ಸಮಾಜಕ್ಕೆ ಸೇರಿದ ಒಬ್ಬ ವ್ಯಕ್ತಿಯ ಸಂಬಂಧದಲ್ಲಿ **"ಪೂರ್ವಜ" ಅಥವಾ "ವಂಶಜ" "Ascendant or Descendant"** ಎಂದರೆ ಅಂಥ ಸಮಾಜದಲ್ಲಿ ಜಾರಿಯಲ್ಲಿರುವ ಉತ್ತರಾಧಿಕಾರ ಕಾನೂನಿಗೆ ಅನುಸಾರವಾಗಿ ಅಂಥ ಪದಗಳು ಯಾರಿಗೆ ಅನ್ವಯಿಸುತ್ತದೋ ಆ ವ್ಯಕ್ತಿ;

(ಡಿ) **"ಜೀತದ ಋಣ" "Bonded Deft** ಎಂದರೆ, ಒಬ್ಬ ಜೀತ ಕಾರ್ಮಿಕನು, ಜೀತ ಕಾರ್ಮಿಕ ಪದ್ಧತಿಯ ಪ್ರಕಾರ ಅಥವಾ ಅದಕ್ಕನುಸಾರವಾಗಿ ಪಡೆದುಕೊಂಡ ಅಥವಾ ಪಡೆದಿರುವನೆಂದು ಪೂರ್ವಭಾವನೆ ಮಾಡಲಾದ ಸಾಲ;

(ಇ) **"ಜೀತ ದುಡಿಮೆ" "Bonded Labour"** ಎಂದರೆ ಜೀತ ಕಾರ್ಮಿಕ ಪದ್ಧತಿಯ ಅಡಿಯಲ್ಲಿ ಸಲ್ಲಿಸಿದ ಯಾವುದೇ ದುಡಿಮೆ ಅಥವಾ ಸೇವೆ;

(ಎಫ್) **"ಜೀತ ಕಾರ್ಮಿಕ" "Bonded Labourer"** ಎಂದರೆ ಜೀತ ಋಣವನ್ನು ಮಾಡಿರುವ ಮಾಡುವ ಅಥವಾ ಮಾಡಿರುವನೆಂದು ಪೂರ್ವಭಾವನೆ ಮಾಡಲಾದ ಒಬ್ಬ ಕಾರ್ಮಿಕ;

(ಜಿ) "ಜೀತ ಕಾರ್ಮಿಕ ಪದ್ಧತಿ" "Bonded Labour System" ಎಂದರೆ ಯಾವ ಪದ್ಧತಿಯ ಪ್ರಕಾರ ಒಬ್ಬ ಸಾಲಗಾರನು, ಈ ಮುಂದಿನ ವಿಷಯಗಳಿಗಾಗಿ ಸಾಲದಾತನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುತ್ತಾನೋ, ಮಾಡಿಕೊಂಡಿರುವನೋ ಅಥವಾ ಮಾಡಿಕೊಂಡಿರುವನೆಂದು ಪೂರ್ವಭಾವನೆ ಮಾಡಲಾಗಿದೆಯೋ ಆ ಬಲವಂತದ ದುಡಿಮೆ ಅಥವಾ ಭಾಗಶಃ ಬಲವಂತದ ದುಡಿಮೆ ಪದ್ಧತಿ,-

(i) ತಾನು ಅಥವಾ ತನ್ನ ಪಾರಂಪರಿಕ ಪೂರ್ವಜರಲ್ಲಿ ಅಥವಾ ವಂಶಜರಲ್ಲಿ ಯಾರಾದರೂ ತೆಗೆದುಕೊಂಡಿದ್ದ ಸಾಲದ (ಅಂಥ ಸಾಲವನ್ನು ಕುರಿತು ಯಾವುದೇ ದಸ್ತಾವೇಜಿನ ಸಾಕ್ಷ್ಯ ಇರಲಿ ಅಥವಾ ಇಲ್ಲದಿರಲಿ) ಪ್ರತಿಫಲವಾಗಿ ಮತ್ತು ಅಂಥ ಸಾಲದ ಮೇಲೆ ಯಾವುದಾದರೂ ಬಡ್ಡಿಯು ಬಾಕಿ ಇದ್ದರೆ ಅದಕ್ಕೆ ಪ್ರತಿಫಲವಾಗಿ ದುಡಿಯಲು; ಅಥವಾ

(ii) ಯಾವುದೋ ರೂಢಿಗತ ಅಥವಾ ಸಾಮಾಜಿಕ ಬಾಧ್ಯತೆಗೆ ಅನುಸಾರವಾಗಿ; ಅಥವಾ.

(iii) ಉತ್ತರಾಧಿಕಾರದ ಮೂಲಕ ತನಗೆ ಪ್ರಾಪ್ತವಾದ ಬಾಧ್ಯತೆಗೆ ಅನುಸಾರವಾಗಿ; ಅಥವಾ

(iv) ತಾನು ಅಥವಾ ತನ್ನ ಪಾರಂಪರಿಕ ಪೂರ್ವಜರಲ್ಲಿ ಅಥವಾ ವಂಶಜರಲ್ಲಿ ಯಾರಾದರೂ ಪಡೆದಿದ್ದ ಯಾವುದೇ ಹಣಕಾಸಿನ ಪ್ರತಿಫಲಕ್ಕಾಗಿ; ಅಥವಾ

(v) ತಾನು ಯಾವುದೇ ನಿರ್ದಿಷ್ಟ ಜಾತಿ ಅಥವಾ ಬುಡಕಟ್ಟಿನಲ್ಲಿ ಹುಟ್ಟಿದ ಕಾರಣದಿಂದಾಗಿ, ಅವನು,-

(1) ತಾನಾಗಿಯೇ ಅಥವಾ ತನ್ನ ಕುಟುಂಬದ ಯಾವನೇ ವ್ಯಕ್ತಿಯ ಅಥವಾ ತನ್ನನ್ನು ಅವಲಂಬಿಸಿರುವ ಯಾವನೇ ವ್ಯಕ್ತಿಯ ಮೂಲಕ ಸಾಲದಾತನಿಗೆ ಅಥವಾ ಸಾಲದಾತನ ಪ್ರಯೋಜನಕ್ಕಾಗಿ ಒಂದು ನಿರ್ದಿಷ್ಟ ಅವಧಿಗಾಗಿ ಅಥವಾ ಅನಿರ್ದಿಷ್ಟ ಅವಧಿಗಾಗಿ ಯಾವುದೇ ಮಜೂರಿಯನ್ನು ಪಡೆಯದೇ ಅಥವಾ ನಾಮ ಮಾತ್ರದ ಮಜೂರಿ ಪಡೆಯಲು ದುಡಿಮೆ ಅಥವಾ ಸೇವೆಯನ್ನು ಸಲ್ಲಿಸಬೇಕಾಗುವುದು, ಅಥವಾ

(2) ಒಂದು ನಿರ್ದಿಷ್ಟ ಅವಧಿಗಾಗಿ ಅಥವಾ ಅನಿರ್ದಿಷ್ಟ ಅವಧಿಗಾಗಿ ಉದ್ಯೋಗ ಸ್ವಾತಂತ್ರ್ಯವನ್ನು ಅಥವಾ ಜೀವನೋಪಾಯದ ಇತರ ಮಾರ್ಗವನ್ನು ಕಳೆದುಕೊಳ್ಳುವುದು, ಅಥವಾ

(3) ಭಾರತ ರಾಜ್ಯ ಕ್ಷೇತ್ರದಾದ್ಯಂತ ಸ್ವತಂತ್ರವಾಗಿ ಸಂಚರಿಸಲು ಇರುವ ಅಧಿಕಾರವನ್ನು ಕಳೆದುಕೊಳ್ಳುವುದು, ಅಥವಾ

(4) ತನ್ನ ಯಾವುದೇ ಆಸ್ತಿಯನ್ನು ಅಥವಾ ತನ್ನ ದುಡಿಮೆಯ ಅಥವಾ ತನ್ನ ಕುಟುಂಬದ ವ್ಯಕ್ತಿಯ ಅಥವಾ ತನ್ನನ್ನು ಅವಲಂಬಿಸಿರುವ ಯಾವನೇ ವ್ಯಕ್ತಿಯಿಂದ

ಗಳಿಸಿದ ಯಾವುದೇ ಉತ್ಪನ್ನವನ್ನು ವಿನಿಯೋಗಿಸಿಕೊಳ್ಳಲು ಅಥವಾ ಮಾರುಕಟ್ಟೆ ಮೌಲ್ಯದಲ್ಲಿ ಮಾರಾಟ ಮಾಡಲು ಇರುವ ಅಧಿಕಾರವನ್ನು ಕಳೆದುಕೊಳ್ಳುವುದು, ಮತ್ತು ಯಾವುದರ ಪ್ರಕಾರ ಸಾಲಗಾರನಿಗೆ ಜಾಮೀನು ನೀಡುವಂತಹ ಒಬ್ಬ ವ್ಯಕ್ತಿಯು ಸಾಲಗಾರನು ತನ್ನ ಋಣವನ್ನು ತೀರಿಸಲು ತಪ್ಪಿದಂತಹ ಸಂದರ್ಭದಲ್ಲಿ ಸಾಲಗಾರನಿಗೆ ಬದಲಾಗಿ ತಾನು ಜೀತ ದುಡಿಮೆಯನ್ನು ಮಾಡುವುದಾಗಿ ಸಾಲದಾತನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವಂತಹ ಅಥವಾ ಮಾಡಿಕೊಂಡಿರುವಂತಹ ಅಥವಾ ಮಾಡಿಕೊಂಡಿರುತ್ತಾನೆ ಎಂದು ಪೂರ್ವಭಾವನೆ ಮಾಡಲಾಗುವಂತಹ ಒಂದು ಬಲವಂತದ ಅಥವಾ ಭಾಗಶಃ ಬಲವಂತದ ದುಡಿಮೆಯ ಪದ್ಧತಿಯನ್ನು ಇದು ಒಳಗೊಳ್ಳುತ್ತದೆ.

[1][**ವಿವರಣೆ Explanation:** ಸಂದೇಹಗಳ ನಿವಾರಣೆಗಾಗಿ, ಕರಾರು ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನ) ಅಧಿನಿಯಮ, 1970 (1970ರ 37)ರ 2ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಪರಿಭಾಷಿಸಲಾದಂತೆ ಕರಾರು ಕಾರ್ಮಿಕನಾಗಿರುವ ಯಾವನೇ ಕೆಲಸಗಾರನು, ಅಥವಾ ಅಂತರ ರಾಜ್ಯ ಮನೆ ಕೆಲಸಗಾರರ (ನೇಮಕಾತಿ ಮತ್ತು ಸೇವಾ ಷರತ್ತುಗಳ ನಿಯಂತ್ರಣ) ಅಧಿನಿಯಮ, 1979 (1979ರ 30) ಇದರ 2ನೇ ಪ್ರಕರಣದ (1)ನೇ ಉಪಪ್ರಕರಣದ (ಇ) ಖಂಡದಲ್ಲಿ ಪರಿಭಾಷಿಸಲಾದ ಒಬ್ಬ ಅಂತರ ರಾಜ್ಯ ವಲಸೆ ಕೆಲಸಗಾರನು ಈ ಖಂಡದ (1)ನೇ ಉಪಖಂಡದಲ್ಲಿ ಹೇಳಲಾದಂತಹ ಸ್ವರೂಪದ ಸನ್ನಿವೇಶಗಳಲ್ಲಿ ದುಡಿಮೆ ಅಥವಾ ಸೇವೆಯನ್ನು ಸಲ್ಲಿಸಲು ಅಗತ್ಯಪಡಿಸುವಂತಹ ಅಥವಾ (2) ರಿಂದ (4)ರ ವರೆಗಿನ ಉಪಖಂಡಗಳಲ್ಲಿ ಹೇಳಲಾದ ಎಲ್ಲಾ ಅಥವಾ ಯಾವುದೇ ಅಸಮರ್ಥತೆಗಳಿಗೆ ಒಳಪಡಿಸಿದಂತಹ ಯಾವುದೇ ಬಲವಂತದ ದುಡಿಮೆಯು ಅಥವಾ ಭಾಗಶಃ ಬಲವಂತದ ದುಡಿಮೆಯ ಯಾವುದೇ ಪದ್ಧತಿಯನ್ನು ಈ ಖಂಡದ ಅರ್ಥ ವ್ಯಾಪ್ತಿಯಲ್ಲಿ "ಜೀತ ಕಾರ್ಮಿಕ ಪದ್ಧತಿ" ಎಂದು ಈ ಮೂಲಕ ಘೋಷಿಸಲಾಗಿದೆ].

(ಎಚ್) ಒಬ್ಬ ವ್ಯಕ್ತಿಯ ಸಂಬಂಧದಲ್ಲಿ **"ಕುಟುಂಬ" "Family"** ಎಂದರೆ ಅಂತಹ ವ್ಯಕ್ತಿಯ ಪೂರ್ವಜ ಅಥವಾ ವಂಶಜ ಒಳಗೊಳ್ಳುತ್ತಾರೆ;

(ಐ) ಯಾವುದೇ ದುಡಿಮೆಗೆ ಸಂಬಂಧಪಟ್ಟಂತೆ **"ನಾಮಮಾತ್ರ ಮಜೂರಿ" "Nominal Wages"** ಎಂದರೆ,–

(ಎ) ಅದೇ ಅಥವಾ ಅಂಥದ್ದೇ ದುಡಿಮೆಯ ಸಂಬಂಧದಲ್ಲಿ ಸರ್ಕಾರವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನಿಗದಿಪಡಿಸಿದ ಕನಿಷ್ಠ ಮಜೂರಿಗಿಂತ ಕಡಿಮೆ ಇರುವ ಮಜೂರಿ, ಮತ್ತು

(ಬಿ) ಅಂತಹ ಯಾವುದೇ ತರಹದ ದುಡಿಮೆಯ ಸಂಬಂಧದಲ್ಲಿ ಹಾಗೆ ಕನಿಷ್ಠ

1. 1985ರ ಅಧಿನಿಯಮ ಸಂಖ್ಯೆ 73ರ ಕಲಂ 2ರ ಮೇರೆಗೆ ಸೇರಿಸಲಾಗಿದೆ.

ಮಜೂರಿಯನ್ನು ನಿಗದಿಪಡಿಸಿದಲ್ಲಿ ಇರುವ ಅದೇ ಸ್ಥಳೀಯ ಪ್ರದೇಶದಲ್ಲಿ ಕಾರ್ಮಿಕರಿಗೆ ಅದೇ ಕೆಲಸ ಅಥವಾ ಅಂಥದ್ದೇ ದುಡಿಮೆಗೆ ಸಾಮಾನ್ಯವಾಗಿ ಸಂದಾಯ ಮಾಡಲಾಗುವ ಮಜೂರಿ;

(ಜೆ) "ನಿಯಮಿಸಲಾದುದು" "Prescribed" ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳಿಂದ ನಿಯಮಿಸಲಾದುದು.

**3. ಈ ಅಧಿನಿಯಮವು ಮೇಲುಗೈ ಪರಿಣಾಮವನ್ನು ಹೊಂದಿರತಕ್ಕದ್ದು**
**Act to have over-riding effect:**

ಈ ಅಧಿನಿಯಮದ ಉಪಬಂಧಗಳು ಈ ಅಧಿನಿಯಮವಲ್ಲದ ಯಾವುದೇ ಇತರ ಅಧಿನಿಯಮದ ಅಥವಾ ಈ ಅಧಿನಿಯಮವಲ್ಲದ ಯಾವುದೇ ಇತರ ಅಧಿನಿಯಮದ ಕಾರಣದಿಂದಾಗಿ ಪರಿಣಾಮಕಾರಿಯಾಗಿ ಜಾರಿಗೆ ಬಂದಿರುವ ಯಾವುದೇ ಲಿಖಿತ ಕಾಗದ ಪತ್ರದಲ್ಲಿ ಅವುಗಳಿಗೆ ಸರಿಹೊಂದದ ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

* * *

### ಅಧ್ಯಾಯ-II - Chapter-II

## ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲನ
## Abolition of Bonded Labour System

**4. ಜೀತ ಕಾರ್ಮಿಕ ಪದ್ಧತಿಯ ನಿರ್ಮೂಲನ**
**Abolition of Bonded Labour System:**

(1) ಈ ಅಧಿನಿಯಮವು ಪ್ರಾರಂಭವಾದ ಲಾಗಾಯತು ಜೀತ ಕಾರ್ಮಿಕ ಪದ್ಧತಿಯು ನಿರ್ಮೂಲವಾಗತಕ್ಕದ್ದು. ಮತ್ತು ಪ್ರತಿಯೊಬ್ಬ ಜೀತ ಕಾರ್ಮಿಕನೂ ಹಾಗೆ ಪ್ರಾರಂಭವಾದಂದಿನಿಂದ ಜೀತ ಮುಕ್ತನಾಗತಕ್ಕದ್ದು ಮತ್ತು ಯಾವುದೇ ಜೀತ ದುಡಿಮೆ ಮಾಡಲು ಯಾವುದೇ ಬಾಧ್ಯತೆಯಿಂದ ವಿಮೋಚನೆಯನ್ನು ಹೊಂದತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಯಾವ ವ್ಯಕ್ತಿಯೂ,–

(ಎ) ಜೀತ ಕಾರ್ಮಿಕ ಪದ್ಧತಿಯ ಅನುಸಾರವಾಗಿ ಅಥವಾ ಅದರ ಅಡಿಯಲ್ಲಿ ಯಾರಿಗೂ ಯಾವುದೇ ಸಾಲವನ್ನು ನೀಡತಕ್ಕದ್ದಲ್ಲ; ಅಥವಾ

(ಬಿ) ಯಾವುದೇ ಜೀತ ದುಡಿಮೆಯನ್ನು ಅಥವಾ ಇತರ ಪ್ರಕಾರದ ಬಲವಂತದ ದುಡಿಮೆಯನ್ನು ಮಾಡಬೇಕೆಂದು ಯಾವ ವ್ಯಕ್ತಿಯನ್ನು ಒತ್ತಾಯಿಸತಕ್ಕದ್ದಲ್ಲ.

## 5. ಒಪ್ಪಂದ, ರೂಢಿಗಳು ಮುಂತಾದವು ಅಸಿಂಧುವಾಗುತ್ತವೆ
**Agreement, Custom, etc. to be void:**

ಈ ಅಧಿನಿಯಮವು ಪ್ರಾರಂಭವಾದ ಲಾಗಾಯತು (ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಅಥವಾ ಅದರ ಪ್ರಾರಂಭದ ಅನಂತರ ಮಾಡಿಕೊಂಡ ಅಥವಾ ನಿರ್ವಹಿಸಿಕೊಂಡು ಬರಲಾದ) ಯಾವುದೇ ಕಾರಣದಿಂದ ಯಾವನೇ ವ್ಯಕ್ತಿಯು ಅಥವಾ ಅವನ ಕುಟುಂಬದ ಯಾವನೇ ವ್ಯಕ್ತಿಯು ಅಥವಾ ಅವನ ಅವಲಂಬಿತನು ಜೀತ ಕಾರ್ಮಿಕನಂತೆ ಯಾವುದೇ ಕೆಲಸವನ್ನು ಮಾಡಲು ಅಥವಾ ಯಾವುದೇ ಸೇವೆಯನ್ನು ಸಲ್ಲಿಸಲು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ರೂಢಿ ಅಥವಾ ಸಂಪ್ರದಾಯ ಅಥವಾ ಯಾವುದೇ ಕರಾರು, ಒಪ್ಪಂದ ಅಥವಾ ಇತರ ಲಿಖಿತ ಕಾಗದ ಪತ್ರವು ಶೂನ್ಯವಾಗತಕ್ಕದ್ದು ಮತ್ತು ಜಾರಿಗೆ ಬರತಕ್ಕದ್ದಲ್ಲ.

* * *

ಅಧ್ಯಾಯ-III - Chapter-III

# ಜೀತದ ಋಣವನ್ನು ಮರುಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಸಮಾಪ್ತಿಯಾಗತಕ್ಕದ್ದು
# Liability to Repay Bonded Debt to stand extinguished

## 6. ಜೀತದ ಋಣವನ್ನು ಮರು ಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಸಮಾಪ್ತಿಯಾಗತಕ್ಕದ್ದು.
**Liability to Repay Bonded Debt to stand extinguished:**

(1) ಈ ಅಧಿನಿಯಮದ ಪ್ರಾರಂಭದಂದು ಯಾವುದೇ ಜೀತ ಋಣವನ್ನು ಅಥವಾ ಅಂಥ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಅಂಥ ಜೀತ ಋಣವನ್ನು ತೀರಿಸದೇ ಉಳಿದಿರುವ ಭಾಗವನ್ನು ವಾಪಸು ಸಂದಾಯ ಮಾಡಲು ಜೀತ ಕಾರ್ಮಿಕನಿಗೆ ಇರುವ ಪ್ರತಿಯೊಂದು ಬಾಧ್ಯತೆಯೂ ಅಳಿದುಹೋಗಿದೆಯೆಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ಅನಂತರ ಯಾವುದೇ ಜೀತ ಋಣ ಅಥವಾ ಅದರ ಯಾವುದೇ ಭಾಗದ ವಸೂಲಿಗಾಗಿ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಅಥವಾ ಯಾವುದೇ ಇತರ ಪ್ರಾಧಿಕಾರದ ಮುಂದೆ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(3) ಜೀತ ಋಣದ ವಸೂಲಿಗಾಗಿ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಮಾಡಿದ ಮತ್ತು ಅಂತಹ ಪ್ರಾರಂಭಕ್ಕೆ ಮೊದಲು ಪೂರ್ಣವಾಗಿ ತೀರಿಸದೇ ಇರುವ

ಪ್ರತಿಯೊಂದು ಡಿಕ್ರಿ ಅಥವಾ ಆದೇಶವನ್ನು ಹಾಗೆ ಪ್ರಾರಂಭವಾದ ತರುವಾಯ ಪೂರ್ಣವಾಗಿ ತೀರಿಸಲಾಗಿದೆ ಎಂದು ಭಾವಿಸತಕ್ಕದ್ದು.

(4) ಯಾವುದೇ ಜೀತ ಋಣದ ವಸೂಲಿಗಾಗಿ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿದ ಪ್ರತಿಯೊಂದು ಜಪ್ತಿಯು, ಈ ಅಧಿನಿಯಮವು ಪ್ರಾರಂಭವಾದ ಕೂಡಲೇ ತೆರವಾಗತಕ್ಕದ್ದು ಮತ್ತು ಅಂಥ ಜಪ್ತಿಯ ಅನುಸರಣೆಯಲ್ಲಿ ಜೀತ ಕಾರ್ಮಿಕನ ಯಾವುದೇ ಚರ ಸ್ವತ್ತನ್ನು ಅಧಿವಶಕ್ಕೆ ತೆಗೆದುಕೊಂಡಿರುವಲ್ಲಿ ಮತ್ತು ತಮ್ಮ ಅಭಿರಕ್ಷೆಗೆ ತೆಗೆದುಕೊಂಡಿರುವಲ್ಲಿ ಮತ್ತು ಅದನ್ನು ಮಾರಾಟ ಮಾಡುವುದಕ್ಕೆ ಮುನ್ನ ಅದನ್ನು ಯಾವುದೇ ನ್ಯಾಯಾಲಯದ ಅಥವಾ ಪ್ರಾಧಿಕಾರದ ಅಭಿರಕ್ಷೆಯಲ್ಲಿ ಇಟ್ಟಿರುವಲ್ಲಿ ಅಂಥ ಚರಸ್ವತ್ತಿನ ಸ್ವಾಧೀನವನ್ನು ಈ ಅಧಿನಿಯಮದ ಪ್ರಾರಂಭದ ತರುವಾಯ ಸಾಧ್ಯವಾದಷ್ಟು ಬೇಗನೆ ಜೀತ ಕಾರ್ಮಿಕನಿಗೆ ವಾಪಸು ಮಾಡತಕ್ಕದ್ದು.

(5) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಜೀತ ಕಾರ್ಮಿಕನಿಗೆ ಅಥವಾ ಅವನ ಕುಟುಂಬದ ಯಾವನೇ ವ್ಯಕ್ತಿಗೆ ಅಥವಾ ಅವನ ಇತರ ಅವಲಂಬಿತನಿಗೆ ಸೇರಿದ ಯಾವುದೇ ಸ್ವತ್ತಿನ ಸ್ವಾಧೀನವನ್ನು ಯಾವುದೇ ಜೀತ ಋಣದ ವಸೂಲಿಗಾಗಿ ಯಾವನೇ ಸಾಲದಾತನು ಬಲವಂತದಿಂದ ತನ್ನ ವಶಕ್ಕೆ ತೆಗೆದುಕೊಂಡಿರುವಲ್ಲಿ, ಅಂತಹ ಸ್ವತ್ತನ್ನು ಈ ಅಧಿನಿಯಮವು ಪ್ರಾರಂಭವಾದ ಅನಂತರ ಸಾಧ್ಯವಾದಷ್ಟು ಬೇಗನೆ ಯಾರಿಂದ ಅದನ್ನು ಅಧಿವಶಕ್ಕೆ ತೆಗೆದುಕೊಳ್ಳಲಾಗಿತ್ತೋ ಆ ವ್ಯಕ್ತಿಗೆ ವಾಪಸು ಮಾಡಿ ಅವನ ಸ್ವಾಧೀನಕ್ಕೆ ಒಪ್ಪಿಸತಕ್ಕದ್ದು.

(6) (4)ನೇ ಅಥವಾ (5)ನೇ ಉಪಪ್ರಕರಣದಲ್ಲಿ ನಿರ್ದೇಶಿತವಾದ ಯಾವುದೇ ಸ್ವತ್ತಿನ ಸ್ವಾಧೀನವನ್ನು, ಈ ಅಧಿನಿಯಮವು ಪ್ರಾರಂಭವಾದ ಮೂವತ್ತು ದಿನಗಳ ಒಳಗೆ ವಾಪಸು ಮಾಡದಿದ್ದರೆ, ಬಾಧಿತನಾದ ವ್ಯಕ್ತಿಯು ನಿಯಮಿಸಬಹುದಾದಂತಹ ಕಾಲದೊಳಗೆ ಅಂತಹ ಸ್ವತ್ತಿನ ಸ್ವಾಧೀನದ ವಾಪಸಾತಿಗಾಗಿ ನಿಯಮಿಸಲಾದ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಆ ನಿಯಮಿಸಲಾದ ಪ್ರಾಧಿಕಾರವು ಸಾಲದಾತನಿಗೆ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ಅನಂತರ, ಸಂಬಂಧಪಟ್ಟ ಸ್ವತ್ತನ್ನು ಆದೇಶದಲ್ಲಿ ನಿರ್ದಿಷ್ಟವಾಗಿ ಹೇಳಲಾದ ಕಾಲದೊಳಗೆ ಅರ್ಜಿದಾರನಿಗೆ ವಾಪಸು ಮಾಡಬೇಕೆಂದು ಸಾಲದಾತನಿಗೆ ನಿರ್ದೇಶನ ನೀಡಬಹುದು.

(7) ನಿಯಮಿಸಲಾದ ಯಾವುದೇ ಪ್ರಾಧಿಕಾರವು (6)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಆದೇಶವನ್ನು ಒಂದು ಸಿವಿಲ್ ನ್ಯಾಯಾಲಯವು ಮಾಡಿದ ಆದೇಶವೆಂಬುದಾಗಿ ಭಾವಿಸತಕ್ಕದ್ದು ಮತ್ತು ಸಾಲದಾತನಿಗೆ ಸ್ವಯಿಚ್ಛೆಯಿಂದ ವಾಸಿಸುವ ಅಥವಾ ವ್ಯವಹಾರವನ್ನು ನಡೆಸುವ ಅಥವಾ ಲಾಭಕ್ಕಾಗಿ ಖುದ್ದಾಗಿ ಕೆಲಸ ಮಾಡುವ ಸ್ಥಳೀಯ ಪರಿಮಿತಿಗಳ ಮೇಲೆ ಅತ್ಯಂತ ಕಡಿಮೆ ಮೌಲ್ಯಾಧಾರಿತ ಅಧಿಕಾರ ವ್ಯಾಪ್ತಿಯನ್ನುಳ್ಳ ನ್ಯಾಯಾಲಯವು ಅದನ್ನು ಜಾರಿಗೆ ತರಬಹುದು.

(8) ಜೀತ ಋಣದ ವಸೂಲಿಗಾಗಿ ಡಿಕ್ರಿ ಅಥವಾ ಆದೇಶವನ್ನು ಜಾರಿಗೊಳಿಸುವಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾವುದೇ ಜಪ್ತಿಯಾದ ಸ್ವತ್ತನ್ನು ಮಾರಾಟ ಮಾಡಿದ್ದಲ್ಲಿ ಅಂಥ ಮಾರಾಟವು ಈ ಅಧಿನಿಯಮದ ಯಾವುದೇ ಉಪಬಂಧದಿಂದ ಬಾಧಿತವಾಗತಕ್ಕದ್ದಲ್ಲವೆಂದು ಸಂದೇಹಗಳ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

ಆದರೆ, ಜೀತ ಕಾರ್ಮಿಕನು ಅಥವಾ ಈ ಬಗ್ಗೆ ಅವನು ಪ್ರಾಧಿಕಾರ ನೀಡಿದ ಒಬ್ಬ ವಾರಂಟನು ಈ ಅಧಿನಿಯಮವು ಪ್ರಾರಂಭವಾದ ಐದು ವರ್ಷಗಳ ಒಳಗೆ ಯಾವುದೇ ಕಾಲದಲ್ಲಿ ಮಾರಾಟದ ಜಾಹಿರಾತಿನಲ್ಲಿ ನಿರ್ದಿಷ್ಟವಾಗಿ ಹೇಳಲಾದ ಯಾವ ಮೊಬಲಗಿನ ವಸೂಲಿಗಾಗಿ ಮಾರಾಟವನ್ನು ಮಾಡಲು ಆದೇಶಿಸಲಾಗಿತ್ತೋ ಆ ಮೊಬಲಗನ್ನು ಡಿಕ್ರಿದಾರನು ಈ ಜಾಹೀರಾತಿನ ಹಾಗೂ ಮಧ್ಯಕಾಲೀನ ಲಾಭವನ್ನು ಅದರಿಂದ ವಜಾ ಮಾಡಿ ಉಳಿದುದನ್ನು ಡಿಕ್ರಿದಾರನಿಗೆ ಸಂದಾಯ ಮಾಡಲು ನ್ಯಾಯಾಲಯದಲ್ಲಿ ಜಮೆ ಮಾಡಿ, ಮಾರಾಟವನ್ನು ತಳ್ಳಿ ಹಾಕಲು ಅರ್ಜಿಯನ್ನು ಸಲ್ಲಿಸಬಹುದು.

(9) ಜೀತ ಕಾರ್ಮಿಕನಿಗೆ ಕೊಟ್ಟ ಯಾವುದೇ ಸಾಲದ ವಸೂಲಿಯ ಬಗ್ಗೆ ಹೂಡಲಾದ ದಾವೆ ಅಥವಾ ವ್ಯವಹರಣೆಯನ್ನು ಒಳಗೊಂಡು ಜೀತ ಕಾರ್ಮಿಕ ಪದ್ಧತಿಯ ಪ್ರಕಾರ ಯಾವುದೇ ಹೊಣೆಗಾರಿಕೆಯನ್ನು ಜಾರಿಗೊಳಿಸಬೇಕೆಂದು ಒತ್ತಾಯಪಡಿಸಲು ಹೂಡಿದ ಯಾವುದೇ ದಾವೆ ಅಥವಾ ವ್ಯವಹರಣೆಯು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಇತ್ಯರ್ಥವಾಗದೇ ಉಳಿದಾದಲ್ಲಿ ಅಂತಹ ದಾವೆ ಅಥವಾ ಇತರ ವ್ಯವಹರಣೆಯು ಈ ಅಧಿನಿಯಮವು ಪ್ರಾರಂಭವಾದ ಕೂಡಲೇ ವಜಾ ಆಗತಕ್ಕದ್ದು.

(10) ಈ ಅಧಿನಿಯಮವು ಪ್ರಾರಂಭವಾಗುವ ದಿನದಂದು ತೀರ್ಪಿಗಿಂತ ಮೊದಲು ಅಥವಾ ತೀರ್ಪಿನ ಅನಂತರ ಸಿವಿಲ್ ಕಾರಾಗೃಹದಲ್ಲಿ ಬಂಧಿಸಿಟ್ಟಿರುವಂತಹ ಪ್ರತಿಯೊಬ್ಬ ಜೀತ ಕಾರ್ಮಿಕನನ್ನು ಕೂಡಲೇ ಬಂಧನದಿಂದ ಬಿಡುಗಡೆ ಮಾಡತಕ್ಕದ್ದು.

**7. ಜೀತ ಕಾರ್ಮಿಕನ ಸ್ವತ್ತನ್ನು ಅಡಮಾನ ಇತ್ಯಾದಿಗಳಿಂದ ಮುಕ್ತಗೊಳಿಸತಕ್ಕದ್ದು Property of Bonded Labourer to be freed from mortgage, etc.:**

(1) ಈ ಅಧಿನಿಯಮವು ಪ್ರಾರಂಭವಾಗುವ ನಿಕಟಪೂರ್ವದಲ್ಲಿ ಯಾವುದೇ ಜೀತ ಋಣದ ಸಂಬಂಧದಲ್ಲಿ ಯಾವುದೇ ಅಡಮಾನ, ಋಣಭಾರ, ಧಾರಣಾಧಿಕಾರ ಅಥವಾ ಇತರ ಪೂರ್ವಾಧಿಗಳಿಗೆ ಒಳಪಟ್ಟಿದ್ದು, ಜೀತ ಕಾರ್ಮಿಕನಿಗೆ ಸೇರಿರುವ ಎಲ್ಲ ಆಸ್ತಿಯು ಅದು ಜೀತ ಋಣಕ್ಕೆ ಸಂಬಂಧಪಟ್ಟಿರುವಷ್ಟರ ಮಟ್ಟಿಗೆ, ಅಂತಹ ಅಡಮಾನ, ಋಣಭಾರ, ಧಾರಣಾಧಿಕಾರ ಅಥವಾ ಇತರ ಪೂರ್ವಾಧಿಗಳಿಂದ ಮುಕ್ತವಾಗಿರತಕ್ಕದ್ದು ಮತ್ತು ವಿಮೋಚಿತವಾಗಿರತಕ್ಕದ್ದು ಮತ್ತು ಅಂತಹ ಯಾವುದೇ ಸ್ವತ್ತು ಈ ಅಧಿನಿಯಮವು ಪ್ರಾರಂಭವಾಗುವ ನಿಕಟಪೂರ್ವದಲ್ಲಿ ಅಡಮಾನದಾರನ ಅಥವಾ ಋಣಭಾರ, ಧಾರಣಾಧಿಕಾರ ಅಥವಾ ಪೂರ್ವಾಧಿಯನ್ನು ಹೊಂದಿರುವವನ ಸ್ವಾಧೀನದಲ್ಲಿರುವಲ್ಲಿ

ಅಂತಹ ಸ್ವತ್ತಿನ ಸ್ವಾಧೀನವನ್ನು (ಅದು ಯಾವುದೇ ಇತರ ಋಣಭಾರಕ್ಕೆ ಒಳಪಟ್ಟಿದ್ದ ಹೊರತು) ಈ ಅಧಿನಿಯಮವು ಪ್ರಾರಂಭವಾದ ಕೂಡಲೇ ಜೀತ ಕಾರ್ಮಿಕನಿಗೆ ವಾಪಸು ಮಾಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ನಿರ್ದೇಶಿಸಿದ ಯಾವುದೇ ಸ್ವತ್ತಿನ ಸ್ವಾಧೀನವನ್ನು ಜೀತ ಕಾರ್ಮಿಕನಿಗೆ ವಾಪಸು ಕೊಡುವಲ್ಲಿ ಏನಾದರೂ ವಿಳಂಬವಾಗಿದ್ದರೆ, ಅಂತಹ ಜೀತ ಕಾರ್ಮಿಕನು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಆ ದಿನಾಂಕದಿಂದ ಅಡಮಾನದಾರನಿಂದ ಅಥವಾ ಧಾರಣಾಧಿಕಾರ, ಋಣಭಾರ ಅಥವಾ ಪೂರ್ವಾಧಿಯನ್ನು ಹೊಂದಿರುವವನಿಂದ ಅಂಥ ಸ್ವತ್ತು ಇರುವ ಸ್ಥಳೀಯ ಪರಿಮಿತಿಗಳ ಮೇಲೆ ಅತ್ಯಂತ ಕಡಿಮೆ ಮೌಲ್ಯಾಧಾರಿತ ಅಧಿಕಾರ ವ್ಯಾಪ್ತಿಯನ್ನುಳ್ಳ ಸಿವಿಲ್ ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂತಹ ಮಧ್ಯಕಾಲೀನ ಲಾಭಗಳನ್ನು ವಸೂಲು ಮಾಡಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**8. ಜೀತ ಮುಕ್ತನಾದ ಜೀತ ಕಾರ್ಮಿಕನನ್ನು ಹೊಲಮನೆ, ಮುಂತಾದವುಗಳಿಂದ ಹೊರದೂಡತಕ್ಕದ್ದಲ್ಲ**
**Freed Bonded Labourer not to be evicted from Homestead, etc.:**

(1) ಈ ಅಧಿನಿಯಮದ ಕಾರಣದಿಂದ ಯಾವುದೇ ಜೀತ ದುಡಿಮೆಯನ್ನು ಮಾಡಬೇಕಾದ ಹೊಣೆಗಾರಿಕೆಯಿಂದ ಮುಕ್ತನಾದ ಮತ್ತು ವಿಮೋಚನೆಯನ್ನು ಪಡೆದ ಯಾವನೇ ವ್ಯಕ್ತಿಯನ್ನೂ ಜೀತ ದುಡಿಮೆಯ ಪ್ರತಿಫಲದ ಭಾಗವಾಗಿ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಅವನ ಅಧಿಭೋಗದಲ್ಲಿದ್ದ ಯಾವುದೇ ಹೊಲಮನೆ ಅಥವಾ ಇತರ ನಿವಾಸದ ಆವರಣಗಳಿಂದ ಅವನನ್ನು ಹೊರದೂಡತಕ್ಕದ್ದಲ್ಲ.

(2) ಈ ಅಧಿನಿಯಮವು ಪ್ರಾರಂಭವಾದ ಅನಂತರ, ಅಂಥ ಯಾವನೇ ವ್ಯಕ್ತಿಯನ್ನು ಸಾಲದಾತನು (1)ನೇ ಉಪಪ್ರಕರಣದಲ್ಲಿ ಹೇಳಿರುವಂತಹ ಯಾವುದೇ ಹೊಲಮನೆ ಅಥವಾ ಇತರ ನಿವಾಸದ ಆವರಣಗಳಿಂದ ಅವನನ್ನು ಹೊರದೂಡಿದರೆ, ಅಂಥ ಹೊಲಮನೆ ಅಥವಾ ನಿವಾಸದ ಆವರಣವು ಇರುವ ಉಪ ವಿಭಾಗದ ಆಡಳಿತವನ್ನು ಹೊಂದಿರುವ ಕಾರ್ಯಕಾರಿ ಮ್ಯಾಜಿಸ್ಟ್ರೇಟನು ಆದಷ್ಟು ಬೇಗನೆ, ಅಂತಹ ಹೊಲಮನೆ ಅಥವಾ ಇತರ ನಿವಾಸದ ಆವರಣದ ಸ್ವಾಧೀನವನ್ನು ಜೀತ ಕಾರ್ಮಿಕನಿಗೆ ವಾಪಸು ಕೊಡಿಸತಕ್ಕದ್ದು.

**9. ಅಳಿದುಹೋದ ಋಣದ ಬಗ್ಗೆ ಸಾಲದಾತನು ಯಾವ ಹಣವನ್ನೂ ಸ್ವೀಕರಿಸತಕ್ಕದ್ದಲ್ಲ**
**Creditor not to accept Payment against extinguished Debt.:**

(1) ಈ ಅಧಿನಿಯಮದ ಉಪಬಂಧಗಳ ಮೂಲಕ ಅಳಿದುಹೋದ ಅಥವಾ ಅಳಿದುಹೋಗಿದೆ ಎಂದು ಭಾವಿಸಲಾದ ಅಥವಾ ಪೂರ್ಣವಾಗಿ ತೀರಿಸಲಾಗಿದೆ ಎಂದು ಭಾವಿಸಿದ ಯಾವುದೇ ಜೀತ ಋಣಕ್ಕೆ ಸಂಬಂಧಪಟ್ಟಂತೆ ಯಾವ ಸಾಲದಾತನೂ

ಯಾವುದೇ ಹಣ ಸಂದಾಯವನ್ನು ಸ್ವೀಕರಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಲಾದ ಯಾವನೇ ವ್ಯಕ್ತಿಯೂ ಮೂರು ವರ್ಷಗಳವರೆಗಿನ ಕಾರಾವಾಸ ದಂಡನೆಯಿಂದ ಮತ್ತು ಜುಲ್ಮಾನೆಯಿಂದಲೂ ದಂಡನೆಗೆ ಗುರಿಯಾಗತಕ್ಕದ್ದು.

(3) (2)ನೇ ಉಪಪ್ರಕರಣದ ಪ್ರಕಾರ ಯಾವನೇ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯವು ಈ ಉಪಪ್ರಕರಣದ ಪ್ರಕಾರ ವಿಧಿಸಬಹುದಾದ ದಂಡಗಳ ಜೊತೆಗೆ (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಪಡೆದುಕೊಂಡಿದ್ದ ಮೊಬಲಗನ್ನು ಜೀತ ಕಾರ್ಮಿಕನಿಗೆ ವಾಪಸು ಮಾಡುವ ಸಲುವಾಗಿ ಆದೇಶದಲ್ಲಿ ನಿರ್ದಿಷ್ಟವಾಗಿ ಹೇಳಬಹುದಾದ ಅವಧಿಯ ಒಳಗೆ ನ್ಯಾಯಾಲಯದಲ್ಲಿ ಜಮೇ ಮಾಡಬೇಕೆಂದು ಆ ವ್ಯಕ್ತಿಗೆ ಆದೇಶಿಸಬಹುದು.

**10. ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿರ್ದಿಷ್ಟವಾಗಿ ನಿಗದಿಪಡಿಸಬಹುದಾದ ಪ್ರಾಧಿಕಾರಿಗಳು**
**Authorities who may be specified for Implementing the Provisions of this Act:**

ಈ ಅಧಿನಿಯುಮದ ಉಪಬಂಧಗಳನ್ನು ಸರಿಯಾದ ರೀತಿಯಲ್ಲಿ ಜಾರಿಗೊಳಿಸಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಗತ್ಯವಿರಬಹುದಾದಂತಹ ಅಧಿಕಾರಗಳನ್ನು ರಾಜ್ಯ ಸರ್ಕಾರವು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಪ್ರದಾನ ಮಾಡಬಹುದು ಮತ್ತು ಅಂತಹ ಕರ್ತವ್ಯಗಳನ್ನು ಅವನಿಗೆ ವಿಧಿಸಬಹುದು ಮತ್ತು ಹಾಗೆ ಪ್ರದಾನ ಮಾಡಿದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸಲು ಮತ್ತು ವಿಧಿಸಲಾದ ಎಲ್ಲ ಅಥವಾ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಲು ತನಗೆ ಅಧೀನನಾದ ಅಧಿಕಾರಿಯನ್ನು ಮತ್ತು ಹಾಗೆ ನಿರ್ದಿಷ್ಟವಾಗಿ ಹೇಳಲಾದ ಅಧಿಕಾರಿಯು, ಅಂಥ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಚಲಾಯಿಸಬೇಕಾದ ಅಥವಾ ನಿರ್ವಹಿಸಬೇಕಾದ ಸ್ಥಳೀಯ ಪರಿಮಿತಿಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟನು ನಿರ್ದಿಷ್ಟಪಡಿಸಬಹುದು.

**11. ಸಾಲ ಸೌಲಭ್ಯವು ದೊರಕುವಂತೆ ನೋಡಿಕೊಳ್ಳಲು ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತಿತರ ಅಧಿಕಾರಿಗಳ ಕರ್ತವ್ಯ**
**Duty of District Magistrate and other Officers to ensure Credit:**

10ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಪ್ರಾಧಿಕಾರ ನೀಡಿದ ಜಿಲ್ಲಾ ಮ್ಯಾಜಿಸ್ಟ್ರೇಟನು ಮತ್ತು ಈ ಪ್ರಕರಣದ ಪ್ರಕಾರ ಜಿಲ್ಲಾ ಮ್ಯಾಜಿಸ್ಟ್ರೇಟನು ನಿರ್ದಿಷ್ಟಪಡಿಸಿದಂತಹ ಅಧಿಕಾರಿಯು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಜೀತ ವಿಮುಕ್ತಿ ಪಡೆದ ಜೀತ ಕಾರ್ಮಿಕನು ಮುಂದೆ ಯಾವುದೇ ಜೀತದ ಋಣವನ್ನು ಮಾಡಿಕೊಳ್ಳದಂತೆ

ಮತ್ತು ಆ ಬಗ್ಗೆ ಕರಾರು ಮಾಡಿಕೊಳ್ಳುವ ಯಾವುದೇ ಪ್ರಸಂಗ ಅಥವಾ ಕಾರಣ ಉಂಟಾಗದ ಹಾಗೆ ಅವನ ಆರ್ಥಿಕ ಹಿತಾಸಕ್ತಿಗಳನ್ನು ಭದ್ರಪಡಿಸುವ ಮತ್ತು ಸಂರಕ್ಷಿಸುವ ಮೂಲಕ ಅವನ ಕ್ಷೇಮಾಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸತಕ್ಕದ್ದು.

**12. ಜಿಲ್ಲಾ ಮ್ಯಾಜಿಸ್ಟ್ರೇಟನ ಮತ್ತು ಅವನಿಂದ ಪ್ರಾಧಿಕಾರ ಪಡೆದ ಅಧಿಕಾರಿಗಳ ಕರ್ತವ್ಯ**

**Duty of District Magistrate and Officers authorised by Him:**

ಜಿಲ್ಲಾ ಮ್ಯಾಜಿಸ್ಟ್ರೇಟನ ಮತ್ತು ಅವನು 10ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟವಾಗಿ ಹೇಳಿದ ಅಧಿಕಾರಿಯ ಸ್ಥಳೀಯ ಪರಿಮಿತಿಗಳ ಒಳಗೆ ವಾಸಿಸುವಂತಹ ಯಾವನೇ ವ್ಯಕ್ತಿಯು ಅಥವಾ ಅವನ ಪರವಾಗಿ ಯಾರಾದರೂ ಯಾವುದೇ ಜೀತ ಕಾರ್ಮಿಕ ಪದ್ಧತಿಯನ್ನು ಅಥವಾ ಯಾವುದೇ ಇತರ ಪ್ರಕಾರದ ಬಲಾತ್ಕಾರದ ದುಡಿಮೆಯನ್ನು ಈ ಅಧಿನಿಯಮದ ಪ್ರಾರಂಭದ ತರುವಾಯ ಯಾವನಾದರೂ ಆಚರಿಸುತ್ತಿದ್ದಾನೆಯೇ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ವಿಚಾರಿಸುವುದು. ಅಂಥ ಪ್ರತಿಯೊಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟನ ಮತ್ತು ಅವನು ನಿರ್ದಿಷ್ಟವಾಗಿ ಹೇಳಿದ ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು ಮತ್ತು ಅಂತಹ ವಿಚಾರಣೆಯ ಪರಿಣಾಮವಾಗಿ ಯಾವನೇ ವ್ಯಕ್ತಿಯು ಜೀತ ಕಾರ್ಮಿಕ ಪದ್ಧತಿಯನ್ನು, ಅಥವಾ ಬಲಾತ್ಕಾರದ ದುಡಿಮೆಯ ಇತರ ಯಾವುದೇ ಪದ್ಧತಿಯನ್ನು ಆಚರಿಸುತ್ತಿರುವುದು ಕಂಡುಬಂದರೆ, ಅವನು ಕೂಡಲೇ ಅಂತಹ ಬಲತ್ಕಾರದ ದುಡಿಮೆಯ ಆಚರಣೆಯನ್ನು ನಿರ್ಮೂಲ ಮಾಡಲು ಅವಶ್ಯಕವಾಗಬಹುದಾದಂತಹ ಕ್ರಮವನ್ನು ಕೈಗೊಳ್ಳತಕ್ಕದ್ದು.

**13. ಜಾಗೃತಾ ಸಮಿತಿಗಳು**

**Vigilance Committees:**

(1) ಪ್ರತಿಯೊಂದು ರಾಜ್ಯ ಸರ್ಕಾರವೂ ಸರ್ಕಾರಿ ರಾಜ್ಯ ಪತ್ರದಲ್ಲಿ ಒಂದು ಅಧಿಸೂಚನೆಯನ್ನು ಹೊರಡಿಸುವ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ಪ್ರತಿಯೊಂದು ಉಪವಿಭಾಗದಲ್ಲಿ ತಾನು ಸೂಕ್ತವೆಂದು ಆಲೋಚಿಸಬಹುದಾದ ಸಂಖ್ಯೆಯ ಜಾಗೃತಾ ಸಮಿತಿಗಳನ್ನು ರಚಿಸತಕ್ಕದ್ದು.

(2) ಜಿಲ್ಲೆಗಾಗಿ ರಚಿಸಲಾದ ಪ್ರತಿಯೊಂದು ಜಾಗೃತ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರು ಇರತಕ್ಕದ್ದು ಎಂದರೆ,–

(ಎ) ಜಿಲ್ಲಾ ಮ್ಯಾಜಿಸ್ಟ್ರೇಟ್, ಅಥವಾ ಅವರು ನಾಮ ನಿರ್ದೇಶನ ಮಾಡುವ ಒಬ್ಬ ವ್ಯಕ್ತಿಯು ಅಂತಹ ಜಾಗೃತ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು;

(ಬಿ) ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಮತ್ತು ಆ ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಾಗೂ ಆ ಜಿಲ್ಲಾ ಮ್ಯಾಜಿಸ್ಟ್ರೇಟ್, ಅವರಿಂದ ನಾಮ ನಿರ್ದೇಶಿತರಾದ ಮೂವರು ವ್ಯಕ್ತಿಗಳು;

(ಸಿ) ಅದೇ ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟ್, ಅವರಿಂದ ನಾಮ ನಿರ್ದೇಶಿತರಾದ ಇಬ್ಬರು ಸಮಾಜ ಸೇವಕರು;

(ಡಿ) ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಜಿಲ್ಲೆಯಲ್ಲಿನ ಸರ್ಕಾರಿ ಅಥವಾ ಸರ್ಕಾರೇತರ ಏಜನ್ಸಿಗಳನ್ನು ಪ್ರತಿನಿಧಿಸಲು ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಮೂವರನ್ನು ಮೀರದ ವ್ಯಕ್ತಿಗಳು;

(ಇ) ಜಿಲ್ಲೆಯಲ್ಲಿನ ಹಣಕಾಸು ಮತ್ತು ಸಾಲ ನೀಡಿಕೆ ಸಂಸ್ಥೆಗಳನ್ನು ಪ್ರತಿನಿಧಿಸುವ ಒಬ್ಬ ವ್ಯಕ್ತಿ ಇವರನ್ನು ಜಿಲ್ಲಾ ಮ್ಯಾಜಿಸ್ಟ್ರೇಟನು ನಾಮ ನಿರ್ದೇಶನ ಮಾಡಬೇಕು.

(3) ಉಪ-ವಿಭಾಗಕ್ಕಾಗಿ ರಚಿಸಿದ ಪ್ರತಿಯೊಂದು ಜಾಗೃತಾ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರು ಇರತಕ್ಕದ್ದು, ಎಂದರೆ,-

(ಎ) ಉಪವಿಭಾಗದ ಮ್ಯಾಜಿಸ್ಟ್ರೇಟ್ ಅಥವಾ ಅವರು ನಾಮ ನಿರ್ದೇಶನ ಮಾಡುವಂತಹ ಒಬ್ಬ ವ್ಯಕ್ತಿಯು ಅಧ್ಯಕ್ಷರಾಗಿರತಕ್ಕದ್ದು.

(ಬಿ) ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಮತ್ತು ಆ ಉಪವಿಭಾಗದಲ್ಲಿ ವಾಸಿಸುತ್ತಿರುವ ಹಾಗೂ ಉಪವಿಭಾಗ ಮ್ಯಾಜಿಸ್ಟ್ರೇಟ್‌ರಿಂದ ನಾಮ ನಿರ್ದೇಶನ ಮಾಡಿದಂತಹ ಮೂವರು ವ್ಯಕ್ತಿಗಳು;

(ಸಿ) ಅದೇ ಉಪವಿಭಾಗದಲ್ಲಿ ವಾಸಿಸುತ್ತಿರುವ ಹಾಗೂ ಉಪವಿಭಾಗದ ಮ್ಯಾಜಿಸ್ಟ್ರೇಟ್ ಅವರು ನಾಮ ನಿರ್ದೇಶನ ಮಾಡತಕ್ಕ ಇಬ್ಬರು ಸಮಾಜ ಸೇವಕರು;

(ಡಿ) ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಅದೇ ಉಪವಿಭಾಗದಲ್ಲಿ ಇರುವ ಸರ್ಕಾರಿ ಅಥವಾ ಸರ್ಕಾರೇತರ ಏಜನ್ಸಿಗಳನ್ನು ಪ್ರತಿನಿಧಿಸಲು ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು ನಾಮ ನಿರ್ದೇಶನ ಮಾಡತಕ್ಕ ಮೂವರನ್ನು ಮೀರದಂತಹ ವ್ಯಕ್ತಿಗಳು;

(ಇ) ಅದೇ ಉಪವಿಭಾಗದಲ್ಲಿರುವ ಹಣಕಾಸು ಮತ್ತು ಸಾಲ ನೀಡಿಕೆ ಸಂಸ್ಥೆಗಳನ್ನು ಪ್ರತಿನಿಧಿಸಲು ಉಪವಿಭಾಗ ಮ್ಯಾಜಿಸ್ಟ್ರೇಟ್ ಅವರು ನಾಮ ನಿರ್ದೇಶನ ಮಾಡತಕ್ಕ ಒಬ್ಬ ವ್ಯಕ್ತಿ;

(ಎಫ್) 10ನೇ ಪ್ರಕರಣದಲ್ಲಿ ನಿರ್ದಿಷ್ಟವಾಗಿ ಹೇಳಿರುವ ಮತ್ತು ಅದೇ ಉಪವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಬ್ಬ ಅಧಿಕಾರಿ.

(4) ಪ್ರತಿಯೊಂದು ಜಾಗೃತ ಸಮಿತಿಯು ತನ್ನ ಕಾರ್ಯ ವಿಧಾನವನ್ನು ತಾನೇ ವಿನಿಯಮಿಸಿಕೊಳ್ಳತಕ್ಕದ್ದು ಮತ್ತು ತನಗೆ ಅವಶ್ಯವಾದ ಲಿಪಿಕ ಸಿಬ್ಬಂದಿ ನೆರವನ್ನು,-

(ಎ) ಜಿಲ್ಲೆಗಾಗಿ ರಚಿಸಲಾದ ಜಾಗೃತ ಸಮಿತಿಗಳ ಸಂಬಂಧದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು;

(ಬಿ) ಉಪವಿಭಾಗಕ್ಕಾಗಿ ರಚಿಸಲಾದ ಜಾಗೃತ ಸಮಿತಿಯ ಸಂದರ್ಭದಲ್ಲಿ ಉಪವಿಭಾಗ

ಮ್ಯಾಜಿಸ್ಟ್ರೇಟ್ ಅವರು ಒದಗಿಸತಕ್ಕದ್ದು.

(5) ಜಾಗೃತ ಸಮಿತಿಯ ಯಾವ ವ್ಯವಹರಣೆಯು ಜಾಗೃತ ಸಮಿತಿಯ ರಚನೆಯಲ್ಲಿ ಅಥವಾ ಅದರ ನಡವಳಿಕೆಯಲ್ಲಿ ಇರಬಹುದಾದ ಯಾವುದೇ ದೋಷದ ಕಾರಣ ಮಾತ್ರದಿಂದಲೇ ಅನೂರ್ಜಿತವಾಗತಕ್ಕದ್ದಲ್ಲ.

**14. ಜಾಗೃತ ಸಮಿತಿಯ ಪ್ರಕಾರ್ಯಗಳು**
**Functions of Vigilance Committees:**

(1) ಪ್ರತಿಯೊಂದು ಜಾಗೃತ ಸಮಿತಿಯ ಪ್ರಕಾರ್ಯಗಳು ಈ ಮುಂದೆ ಹೇಳಿರುವಂತೆ ಇರತಕ್ಕದ್ದು,-

(ಎ) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಉಪಬಂಧಗಳನ್ನು ಸೂಕ್ತ ರೀತಿಯಲ್ಲಿ ಜಾರಿಗೆ ತರಲಾಗುತ್ತಿದೆ ಎಂದು ಖಚಿತಪಡಿಸಿ ನೋಡಿಕೊಳ್ಳುವ ಬಗ್ಗೆ ಮಾಡಬೇಕಾದ ಪ್ರಯತ್ನಗಳ ಬಗ್ಗೆ ಮತ್ತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಅವರು ಈ ಬಗ್ಗೆ ಪ್ರಾಧಿಕಾರವನ್ನು ನೀಡಿರುವಂತಹ ಯಾವುದೇ ಅಧಿಕಾರಿಗೆ ಸಲಹೆಗಳನ್ನು ನೀಡುವುದು;

(ಬಿ) ಜೀತ ವಿಮುಕ್ತರಾದ ಜೀತ ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಮರು ಸ್ಥಾಪನೆಗಾಗಿ ಅವಕಾಶಗಳನ್ನು ಕಲ್ಪಿಸುವುದು;

(ಸಿ) ಜೀತ ವಿಮುಕ್ತರಾದ ಜೀತ ಕಾರ್ಮಿಕರಿಗೆ ಸಾಕಷ್ಟು ಸಾಲ ಸೌಲಭ್ಯಗಳು ದೊರಕುವಂತೆ ಮಾಡುವ ದೃಷ್ಟಿಯಿಂದ ಗ್ರಾಮೀಣ ಬ್ಯಾಂಕುಗಳ ಮತ್ತು ಸಹಕಾರ ಸಂಘಗಳ ಕೆಲಸ ಕಾರ್ಯಗಳನ್ನು ಸಮನ್ವಯಗೊಳಿಸುವುದು;

(ಡಿ) ಈ ಅಧಿನಿಯಮದ ಅಡಿಯಲ್ಲಿ ಸಂಜ್ಞಾನಕ್ಕೆ ತೆಗೆದುಕೊಳ್ಳಲಾದ ಯಾವುದೇ ಅಪರಾಧಗಳ ಸಂಖ್ಯೆಯ ಮೇಲೆ ನಿಗಾ ಇಡುವುದು;

(ಇ) ಈ ಅಧಿನಿಯಮದ ಅಡಿಯಲ್ಲಿ ಸಂಜ್ಞಾನಕ್ಕೆ ತೆಗೆದುಕೊಳ್ಳಬೇಕಾದ ಅಪರಾಧಗಳು ಯಾವುದಾದರೂ ಇವೆಯೇ ಎಂಬುದರ ಸಮೀಕ್ಷೆಯನ್ನು ನಡೆಸುವುದು;

(ಎಫ್) ಜೀತ ವಿಮುಕ್ತನಾದ ಜೀತ ಕಾರ್ಮಿಕನ ಅಥವಾ ಅವನ ಕುಟುಂಬದ ಯಾವನೇ ವ್ಯಕ್ತಿಯ ವಿರುದ್ಧ ಅಥವಾ ಅವನ ಮೇಲೆ ಅವಲಂಬಿತನಾದ ಇತರ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ಜೀತದ ಪೂರ್ತಿ ಸಾಲವನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಜೀತದ ಸಾಲವೆಂದು ಅಂಥ ವ್ಯಕ್ತಿಯು ಕ್ಲೇಮು ಮಾಡಿದ ಇತರ ಯಾವುದೇ ಸಾಲವನ್ನು ವಸೂಲು ಮಾಡಲು ಹೂಡಿದ ಯಾವುದೇ ದಾವೆಯಲ್ಲಿ ಅವನ ಪರವಾಗಿ ಪ್ರತಿವಾದವನ್ನು ಹೂಡುವುದು.

(2) ಜೀತ ವಿಮುಕ್ತನಾದ ಜೀತ ಕಾರ್ಮಿಕನ ವಿರುದ್ಧ ಹೂಡಿದ ದಾವೆಯಲ್ಲಿ ಅವನ ಪರವಾಗಿ ಪ್ರತಿರಕ್ಷಣೆಯ ವಾದವನ್ನು ನಡೆಸಲು ಜಾಗೃತ ಸಮಿತಿಯು ತನ್ನ ಸದಸ್ಯರಲ್ಲಿ ಯಾರಿಗಾದರೂ ಒಬ್ಬರಿಗೆ ಪ್ರಾಧಿಕಾರವನ್ನು ನೀಡಬಹುದು ಮತ್ತು ಹಾಗೆ ಪ್ರಾಧಿಕಾರವನ್ನು ಹೊಂದಿದ ಸದಸ್ಯನನ್ನು ಅಂಥ ದಾವೆಯ ಉದ್ದೇಶಕ್ಕಾಗಿ ಹಾಗೆ ಜೀತ ವಿಮುಕ್ತನಾದ ಜೀತ ಕಾರ್ಮಿಕನ ಅಧಿಕೃತ ಏಜಂಟನೆಂದು ಭಾವಿಸತಕ್ಕದ್ದು.

**15. ರುಜುವಾತಿನ ಹೊಣೆ**
**Burden of Proof:**

ಜೀತ ಕಾರ್ಮಿಕ ಅಥವಾ ಜಾಗೃತ ಸಮಿತಿಯು ಯಾವುದೇ ಸಾಲವನ್ನು ಜೀತ ಸಾಲವೆಂದು ಕ್ಲೇಮು ಮಾಡಿದಾಗ ಅಂತಹ ಸಾಲವು ಜೀತ ಸಾಲವಲ್ಲವೆಂದು ರುಜುವಾತುಪಡಿಸುವ ಹೊಣೆಯು ಸಾಲದಾತನ ಮೇಲೆ ಇರತಕ್ಕದ್ದು.

**16. ಜೀತ ಕಾರ್ಮಿಕ ಪದ್ಧತಿಯ ಆಚರಣೆ ಮಾಡಿದ್ದಕ್ಕಾಗಿ ದಂಡನೆ**
**Punishment for Enforcement of Bonded Labour:**

ಈ ಅಧಿನಿಯಮವು ಪ್ರಾರಂಭವಾದ ಅನಂತರ ಜೀತ ಕಾರ್ಮಿಕನಾಗಿ ದುಡಿಯುವಂತೆ ಯಾವನೇ ವ್ಯಕ್ತಿಯನ್ನು ಯಾರಾದರೂ ಒತ್ತಾಯಪಡಿಸಿದರೆ, ಒತ್ತಾಯಪಡಿಸಿದ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡನೀಯನಾಗತಕ್ಕದ್ದು.

**17. ಜೀತ ಸಾಲವನ್ನು ಕೊಟ್ಟರೆ ದಂಡನೆ**
**Punishment for Advancement of Bonded Debt:**

ಈ ಅಧಿನಿಯಮವು ಪ್ರಾರಂಭವಾದ ಅನಂತರ ಯಾವನೇ ವ್ಯಕ್ತಿಯು ಜೀತ ಸಾಲವನ್ನು ಕೊಟ್ಟರೆ ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೆಗೆ ಗುರಿಯಾಗತಕ್ಕದ್ದು.

**18. ಜೀತ ಕಾರ್ಮಿಕ ಪದ್ಧತಿಯ ಅಡಿಯಲ್ಲಿ ಜೀತ ದುಡಿಮೆಯನ್ನು ಒತ್ತಾಯದಿಂದ ಪಡೆದುಕೊಳ್ಳುವುದಕ್ಕೆ ದಂಡನೆ**
**Punishment for Extracting Bonded Labour under the Bonded Labour System:**

ಈ ಅಧಿನಿಯಮವು ಪ್ರಾರಂಭವಾದ ಅನಂತರ ಯಾವನೇ ವ್ಯಕ್ತಿಯು ಯಾವುದೇ ರೂಢಿ, ಸಂಪ್ರದಾಯ, ಕರಾರು, ಒಪ್ಪಂದ ಅಥವಾ ಇತರ ಕಾಗದ ಪತ್ರದ ಆಧಾರದ ಮೇಲೆ ಸೇವೆ ಸಲ್ಲಿಸಲು ಯಾವನೇ ವ್ಯಕ್ತಿಯನ್ನು ಅಥವಾ ಅವನ ಕುಟುಂಬದ ಯಾವನೇ ಸದಸ್ಯನನ್ನು ಅಥವಾ ಅವನನ್ನು ಅವಲಂಬಿಸಿರುವ ಯಾವನೇ ಇತರ

ವ್ಯಕ್ತಿಯನ್ನು ಜೀತ ಕಾರ್ಮಿಕ ಪದ್ಧತಿಯ ಪ್ರಕಾರ ಯಾವುದೇ ಸೇವೆಯನ್ನು ಸಲ್ಲಿಸಲು ಅಗತ್ಯಪಡಿಸಿದರೆ ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡನೀಯನಾಗತಕ್ಕದ್ದು ಮತ್ತು ಜುಲ್ಮಾನೆಯು ವಸೂಲಾದರೆ ಜೀತದಾಳಿನಿಂದ ಒತ್ತಾಯಪೂರ್ವಕವಾಗಿ ಪಡೆದ ಜೀತ ದುಡಿಮೆಯ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗಳ ಸಂದಾಯದ ದರದಂತೆ ಅವನಿಗೆ ಅದರಿಂದ ಸಂದಾಯ ಮಾಡತಕ್ಕದ್ದು.

## 19. ಜೀತ ಕಾರ್ಮಿಕರಿಗೆ ಅವರ ಆಸ್ತಿಯ ಸ್ವಾಧೀನವನ್ನು ವಾಪಸು ಮಾಡಲು ತಪ್ಪಿದ್ದಕ್ಕಾಗಿ ಅಥವಾ ವಿಫಲನಾದುದಕ್ಕಾಗಿ ದಂಡನೆ
**Punishment for Ommission or Failure to Restore Possession of Property to Bonded Labourers:**

ಈ ಅಧಿನಿಯಮದ ಅಡಿಯಲ್ಲಿ ಯಾವನೇ ಜೀತ ಕಾರ್ಮಿಕನಿಗೆ ಅವನ ಆಸ್ತಿಯನ್ನು ವಾಪಸ್ಸು ಮಾಡಬೇಕಾದದ್ದು ಅಗತ್ಯವಾಗಿದ್ದು, ಯಾವನೇ ವ್ಯಕ್ತಿಯು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯ ಒಳಗೆ ಹಾಗೆ ವಾಪಸು ಮಾಡಲು ವಿಫಲನಾದರೆ ಅಥವಾ ತಪ್ಪಿದರೆ ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದ ಶಿಕ್ಷೆಯಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೆಗೆ ಗುರಿಯಾಗತಕ್ಕದ್ದು. ಮತ್ತು ಜುಲ್ಮಾನೆಯು ವಸೂಲಾದ ಜೀತ ಕಾರ್ಮಿಕನಿಗೆ ಸ್ವತ್ತಿನ ಸ್ವಾಧೀನವನ್ನು ವಾಪಸು ಮಾಡದೇ ಇದ್ದ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗಳ ಸಂದಾಯದ ದರದಂತೆ ಆ ಹಣದಿಂದ ಅವನಿಗೆ ಪರಿಹಾರ ಹಣವನ್ನು ಸಂದಾಯ ಮಾಡತಕ್ಕದ್ದು.

## 20. ದುಷ್ಪ್ರೇರಣೆಯು ಅಪರಾಧವಾಗಿರತಕ್ಕದ್ದು
**Abetment to bean Offence:**

ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡುವಂತೆ ದುಷ್ಪ್ರೇರಣೆ ನೀಡುವ ಯಾವನೇ ವ್ಯಕ್ತಿಯು ಹಾಗೆ ದುಷ್ಪ್ರೇರಣೆಯನ್ನು ಮಾಡಿರುವಂತಹ ಅಪರಾಧವನ್ನು ಮಾಡಿರಲಿ ಅಥವಾ ಇಲ್ಲದೇ ಇರಲಿ ದುಷ್ಪ್ರೇರಣೆ ಮಾಡಿದ ಅಪರಾಧಕ್ಕಾಗಿ ಉಪಬಂಧ ಕಲ್ಪಿಸಿರುವ ದಂಡನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

**ವಿವರಣೆ Explanation:** ಈ ಅಧಿನಿಯಮದ ಉದ್ದೇಶಕ್ಕಾಗಿ 'ದುಷ್ಪ್ರೇರಣೆ' ಎಂಬುದಕ್ಕೆ ಭಾರತ ದಂಡ ಸಂಹಿತೆ (1860ರ 45) ಯಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

## 21. ಕಾರ್ಯ ನಿರ್ವಾಹಕ ದಂಡಾಧಿಕಾರಿಯಿಂದ ವಿಚಾರಣೆಗೊಳಪಡಿಸಬಹುದಾದ ಅಪರಾಧಗಳು
## Offences to be tried by Executive Magistrates:

(1) ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳನ್ನು ವಿಚಾರಣೆ ಮಾಡುವುದಕ್ಕಾಗಿ ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟ್ ಅವರಿಗೆ ಮೊದಲನೇ ದರ್ಜೆಯ ಅಥವಾ ಎರಡನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ಇರುವಂತಹ ಅಧಿಕಾರಗಳನ್ನು ರಾಜ್ಯ ಸರ್ಕಾರವು ಕೊಡಬಹುದು. ಮತ್ತು ಆ ರೀತಿಯಲ್ಲಿ ಅಧಿಕಾರವನ್ನು ಕೊಟ್ಟಿರುವಂತಹ ಕಾರಣದಿಂದ ಹಾಗೆ ಅಧಿಕಾರವನ್ನು ಪಡೆದ ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟನನ್ನು ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ 2) ಉದ್ದೇಶಕ್ಕಾಗಿ ಸಂದರ್ಭಾನುಸಾರ ಮೊದಲನೇ ದರ್ಜೆಯ ಅಥವಾ ಎರಡನೇ ದರ್ಜೆಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಎಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಮ್ಯಾಜಿಸ್ಟ್ರೇಟನು ಕ್ಷಿಪ್ರವಾಗಿ ಅಧಿವಿಚಾರಣೆ ನಡೆಸತಕ್ಕದ್ದು.

## 22. ಅಪರಾಧಗಳ ಸಂಜ್ಞೇಯತೆ
## Cognizance of Offences:

ಈ ಅಧಿನಿಯಮದ ಅಡಿಯಲ್ಲಿನ ಪ್ರತಿಯೊಂದು ಅಪರಾಧವೂ ಸಂಜ್ಞೇಯ ಅಪರಾಧವಾಗಿರತಕ್ಕದ್ದು ಮತ್ತು ಅದು ಜಾಮೀನು ಪಡೆಯಬಹುದಾದದ್ದಾಗಿರತಕ್ಕದ್ದು.

## 23. ಕಂಪನಿಗಳಿಂದ ಅಪರಾಧಗಳು
## Offences by Companies:

(1) ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಆಡಳಿತ ನಿರ್ವಹಣೆಯ ಹೊಣೆಯನ್ನು ಹೊಂದಿದ್ದ ಮತ್ತು ಆ ಕಂಪನಿಯ ವ್ಯವಹಾರವನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯೂ ಹಾಗೂ ಕಂಪನಿಯು ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅದಕ್ಕೆ ಅನುಸಾರವಾಗಿ ಅವರು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

(2) (1) ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ಯಾವುದೇ ನಿರ್ಲಕ್ಷತೆಯಿಂದಾಗಿ ನಡೆಯಿತೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ಆ

ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವರು ಕಾನೂನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ Explanation:** ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) **"ಕಂಪನಿ"** ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘಟನೆಯನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿಗೆ ಸಂಬಂಧಿಸಿದಂತೆ ಹಾಗೆ "ಆದೇಶ" ವಾದರೆ ಫರ್ಮಿನ ಪಾಲುದಾರ.

## 24. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
## Protection of Action taken in Good Faith:

ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಯಾವುದೇ ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದ ಯಾವನೇ ಅಧಿಕಾರಿ ಅಥವಾ ಜಾಗೃತ ಸಮಿತಿಯ ಯಾವನೇ ಸದಸ್ಯನ ವಿರುದ್ಧ ಹೂಡಲು ಅವಕಾಶವಿರತಕ್ಕದ್ದಲ್ಲ.

## 25. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಬಂಧ
## Jurisdiction of Civil Courts barred:

ಈ ಅಧಿನಿಯಮದ ಯಾವುದೇ ಉಪಬಂಧವು ಅನ್ವಯಿಸುವಂಥ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ. ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಯಾವುದೇ ಸಿವಿಲ್ ನ್ಯಾಯಾಲಯವು ಯಾವುದೇ ನಿರ್ಬಂಧಕಾಜ್ಞೆಯನ್ನು ಕೊಡತಕ್ಕದ್ದಲ್ಲ.

## 26. ನಿಯಮ ರಚನಾಧಿಕಾರ
## Power to make Rules:

(1) ಕೇಂದ್ರ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಮೊದಲು ಹೇಳಿದ ಅಧಿಕಾರಕ್ಕೆ ಧಕ್ಕೆ ಬಾರದಂತೆ ಅಂಥ ನಿಯಮಗಳು ಈ ಕೆಳಗಿನ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸಬಹುದು, ಎಂದರೆ,-

(ಎ) 6ನೇ ಪ್ರಕರಣದ (4)ನೇ ಅಥವಾ (5)ನೇ ಉಪಪ್ರಕರಣದಲ್ಲಿ ಹೇಳಲಾದ ಸ್ವತ್ತನ್ನು ವಾಪಸ್ಸು ಕೊಡುವ ಬಗ್ಗೆ ಆ ಪ್ರಕರಣದ (6)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಯಾವ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬೇಕಾಗಿದೆಯೋ ಆ ಪ್ರಾಧಿಕಾರ;

(ಬಿ) ನೇಮಿಸಲಾದ ಪ್ರಾಧಿಕಾರಕ್ಕೆ 6ನೇ ಪ್ರಕರಣ (6)ನೇ ಉಪಪ್ರಕರಣದ ಮೇರೆಗೆ ಸ್ವತ್ತಿನ ಸ್ವಾಧೀನವನ್ನು ವಾಪಸು ಕೊಡಿಸುವುದಕ್ಕಾಗಿ ಅರ್ಜಿಯನ್ನು ಯಾವ ಕಾಲದೊಳಗಾಗಿ ಸಲ್ಲಿಸಬೇಕಾಗಿದೆಯೋ ಆ ಕಾಲ;

(ಸಿ) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದರ ಬಗ್ಗೆ ಖಾತರಿ ಮಾಡಿಕೊಳ್ಳಲು 14ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಅಡಿಯಲ್ಲಿ ಜಾಗೃತ ಸಮಿತಿಯು ಕೈಗೊಳ್ಳಬೇಕಾದ ಕ್ರಮಗಳು;

(ಡಿ) ನಿಯಮಿಸಬಹುದಾದ ಅಥವಾ ನಿಯಮಿಸಬೇಕಾದ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು, ಮತ್ತು ಆ ಅವಧಿಯು ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕೂ ಹೆಚ್ಚು ಅಧಿವೇಶನಗಳನ್ನು ಒಳಗೊಳ್ಳಬಹುದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದರೊಂದರ ಮೇಲೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನದ ಮುಕ್ತಾಯದ ಮೊದಲು ಈ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರ ಪರಿಣಾಮಕ್ಕೆ ಬರತಕ್ಕದ್ದು ಅಥವಾ ಪರಿಣಾಮಕ್ಕೆ ಬರತಕ್ಕದ್ದಲ್ಲ. ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಈ ನಿಯಮದ ಪ್ರಕಾರ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**27. ನಿರಸನ ಮತ್ತು ಉಳಿಸುವಿಕೆ**
**Repeal and Saving:**

(1) ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನ) ಅಧ್ಯಾದೇಶ, 1975 (1975ರ 17) ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸನವಾಗಿದ್ದಾಗ್ಯೂ, ಈ ಅಧ್ಯಾದೇಶದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಕೈಗೊಂಡ ಯಾವುದೇ ಕ್ರಮ (ಪ್ರಕಟಿಸಿರುವ ಯಾವುದೇ ನಿರ್ದೇಶನ ಅಥವಾ ನಾಮ ನಿರ್ದೇಶನ, ಕೊಡಲಾದ ಯಾವುದೇ ಅಧಿಕಾರ, ವಿಧಿಸಲಾದ ಯಾವುದೇ ಕರ್ತವ್ಯ ಅಥವಾ ನಿರ್ದಿಷ್ಟಪಡಿಸಲಾದ ಯಾವನೇ ಅಧಿಕಾರಿ ಇವನ್ನೆಲ್ಲಾ ಒಳಗೊಂಡತೆ) ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಅದನ್ನು ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂಬಂತೆ ಭಾವಿಸತಕ್ಕದ್ದು.

* * *

# ಜೀತ ಕಾರ್ಮಿಕ ಪದ್ಧತಿ (ನಿರ್ಮೂಲನಾ) ನಿಯಮಗಳು, 1976

# BONDED LABOUR SYSTEM (ABOLITION) RULES, 1976



ಇಟ್ಟಿಗೆ ಗೂಡು
ಕೊಪ್ಪಳ ಜಿಲ್ಲೆಯ ಗಿಣಿಗೆರಾ ಇಟ್ಟಿಗೆ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ
ಜೀತ ಕಾರ್ಮಿಕರು

# 5. ಜೀತಕಾರ್ಮಿಕರ ರಕ್ಷಣೆ

## ಒಂದು ಕೇಸ್ ಸ್ಟಡಿ

# 5. ಜೀತಕಾರ್ಮಿಕರ ರಕ್ಷಣೆ ಒಂದು ಕೇಸ್ ಸ್ಟಡಿ

ಮಾರ್ಚ್ 2019ರಲ್ಲಿ , ಕರ್ನಾಟಕ ರಾಜ್ಯದ ಕೊಪ್ಪಳ ಜಿಲ್ಲೆಯಲ್ಲಿ ವರದಿಯಾದ ನೈಜ ಪ್ರಕರಣದ ಮೂಲಕ ಮಾನವ ಕಳ್ಳ ಸಾಗಾಣಿಕೆ ಅಪರಾಧ ಮತ್ತು ಜೀತ ಪದ್ಧತಿ ಕುರಿತ ಒಂದು ಕೇಸ್ ಸ್ಟಡಿ–ಕರ್ನಾಟಕದ ಕೊಪ್ಪಳ ಜಿಲ್ಲೆಯ ಗಿಣಿಗೆರಾ ಗ್ರಾಮದ ಇಟ್ಟಿಗೆ ಕಾರ್ಖಾನೆಯೊಂದರಲ್ಲಿ ಒರಿಸ್ಸಾ ಮೂಲದ ಓರ್ವ ಕಾರ್ಮಿಕ ತಪ್ಪಿಸಿಕೊಂಡು ಒರಿಸ್ಸಾಗೆ ಹೋದಾಗ ಈ ಪ್ರಕರಣ ಮೊದಲಿಗೆ ಬೆಳಕಿಗೆ ಬಂತು. ಆ ಕಾರ್ಮಿಕನು ತನಗೆ ಗೊತ್ತಿರುವ ಓರ್ವ ವಕೀಲನ ಸಹಾಯದಿಂದ ಕೊಪ್ಪಳದ ಜಿಲ್ಲಾಧಿಕಾರಿ ಶ್ರೀ ಪಿ.ಸುನೀಲ್ ಕುಮಾರ್ ರವರನ್ನು ಸಂಪರ್ಕಿಸಿ ಆ ಯುವಕನಂತೆ ಇನ್ನು 58 ಮಂದಿ ಸದರಿ ಇಟ್ಟಿಗೆ ಕಾರ್ಖಾನೆಯಲ್ಲಿ ಒತ್ತಾಯದ ಮೇರೆಗೆ ಕೂಲಿ ಸರಿಯಾಗಿ ಸಿಗದೇ ಇದ್ದರೂ ಕೆಲಸ ಮಾಡುತ್ತಿರುವುದನ್ನು ವಕೀಲರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.


ಇಟ್ಟಂಗಿ ಬಟ್ಟಿ ಮಾಲೀಕರಿಂದ ದಬ್ಬಾಳಿಕೆ । ಲೈಂಗಿಕ ದೌರ್ಜನ್ಯ, ಕಿರುಕುಳ ಆರೋಪ

ಚಿತ್ರಹಿಂಸೆಗೆ ತತ್ತರಿಸಿದ ಕಾರ್ಮಿಕರು

ಏಜೆಂಟ್‌ಗಾಗಿ ಹುಡುಕಾಟ

ಮಾಹಿತಿ ಬಂದ ನಂತರ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಅಧಿಕಾರಿ– ಸಿಬ್ಬಂದಿ, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, National Child Labour Project ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿದಾಗ ಸದರಿ ಪ್ರಕರಣವು ಗಂಭೀರ ಸ್ವರೂಪದ್ದೆಂದು ತಿಳಿದುಬಂದಿತು. ಕಾರಣ, ಮಧ್ಯವರ್ತಿಯೊಬ್ಬ ರೂ. 15,000/– ದಿಂದ ರೂ.30,000/– ಗಳನ್ನು ಪ್ರತೀ ಮಾಹೇ ನೀಡುವುದಾಗಿ ಕಾರ್ಮಿಕರನ್ನು ಓಲೈಸಿ, ಜೊತೆಗೆ ಉಳಿಯಲು ಸುರಕ್ಷಿತ ವಸತಿ, ಮೂರು ಹೊತ್ತು ಆಹಾರ ಇವುಗಳನ್ನು ನೀಡುವುದಾಗಿ ಆಮಿಷ ತೋರಿಸಿ ಒರಿಸ್ಸಾ ರಾಜ್ಯದ ಬೊಲಂಗೀರ್, ಕಾಲಾಹಂಡಿ, ಭರ್ಗಡ ಮತ್ತು ನವರಂಗ್ ಪುರ್ ಜಿಲ್ಲೆಗಳಿಂದ ಕಾರ್ಮಿಕರನ್ನು ಕರೆತಂದಿರುತ್ತಾನೆ. ಇದು ಮೂಲತಃ ಮಾನವ ಅಕ್ರಮ ಸಾಗಾಣಿಕೆ IPC Section 370 ಕೆಳಗೆ ಬರುತ್ತದೆ ಹಾಗೂ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

ಈ ಕಾರ್ಮಿಕರ ಪೈಕಿ 12 ಜನ ಪುರುಷರು, 17 ಮಹಿಳೆಯರು, 25 ಚಿಕ್ಕ ಮಕ್ಕಳಿದ್ದು. ಈ ಮಕ್ಕಳಲ್ಲೂ ಕೆಲವರನ್ನು ದುಡಿಸಿಕೊಳ್ಳುತ್ತಿರುವುದು ತನಿಖೆ ವೇಳೆ ತಿಳಿದುಬರುತ್ತದೆ. ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ದುಡಿಸಿಕೊಳ್ಳುವುದು ಬಾಲ ನ್ಯಾಯ ಕಾಯ್ದೆ, 1986ರಡಿ ಅಪರಾಧವಾಗಿರುತ್ತದೆ. ಈ ಕಾರ್ಮಿಕರಿಗೆ ಸರ್ಕಾರದ ಚಾಲ್ತಿ ಮಾರ್ಗಸೂಚಿಗಳನ್ವಯ ದಿನಕ್ಕೆ 8 ಗಂಟೆ ಇಟ್ಟಿಗೆ ತಯಾರಿಸುವವರಿಗೆ ರೂ.455/– ನೀಡಬೇಕಿತ್ತು, ಆದರೆ, ಕಾರ್ಖಾನೆಯ ಮಾಲೀಕರು ವಾರಕ್ಕೆ ಕೇವಲ ರೂ. 300/– ಗಳನ್ನು ನೀಡಿ 12 ಗಂಟೆಗಳ ಕಾಲ ಕೆಲಸ ಮಾಡಿಸುತ್ತಿದ್ದರು. ಇಟ್ಟಿಗೆಗಳಿಂದ ತಾತ್ಕಾಲಿಕ ಶೆಡ್ ನಿರ್ಮಿಸಿ ಶುದ್ಧ ಕುಡಿಯುವ ನೀರು, ಶೌಚಾಲಯಗಳಿಲ್ಲದೆ ಕೆಲಸ ಮಾಡಿಸುತ್ತಿರುವುದು, ಕಾರ್ಮಿಕ ನೀತಿ, ಮಾನವ ಹಕ್ಕುಗಳ ಉಲ್ಲಂಘನೆಯೆಂದು ತನಿಖೆ ವೇಳೆ ದೃಢ ಪಟ್ಟ ಹಿನ್ನೆಲೆಯಲ್ಲಿ ತಕ್ಷಣವೇ ಈ ಕಾರ್ಮಿಕರನ್ನು ಬಿಡಿಸಲಾಯಿತು.

ತನಿಖೆ ವೇಳೆ ತಿಳಿದು ಬಂದ ಇನ್ನು ಕೆಲವು ಅಂಶಗಳೆಂದರೆ, ಮೇಲ್ವಿಚಾರಕರ ಮೂಲಕ ಈ ಕಾರ್ಮಿಕರನ್ನು ಎಲ್ಲೂ ಹೋಗದಂತೆ ಕಾರ್ಖಾನೆ ಆವರಣದಲ್ಲೇ ಬಂಧಿಸಿಡಲಾಗಿತ್ತು, ಕೇವಲ ಒಬ್ಬ ವ್ಯಕ್ತಿಯನ್ನು ಮಾತ್ರ ಮಾರುಕಟ್ಟೆಗೆ ದಿನಸಿ ತರಲು ಅವಕಾಶ ನೀಡಲಾಗುತ್ತಿತ್ತು. ಈ ರೀತಿಯಾದ ಒತ್ತಾಯ ಪೂರ್ವಕ ಜೀತ, ಕಡಿಮೆ ವೇತನ ನೀಡುವುದು, ಚಾಲನೆ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಎಲ್ಲಾ ಜೀತ ಪದ್ಧತಿ(ರ) ಕಾಯ್ದೆಯನ್ವಯ ಅಪರಾಧವಾಗಿರುತ್ತದೆ.

ದಿನಾಂಕ – 23.3.2019ರಂದು ಜಿಲ್ಲಾಧಿಕಾರಿಗಳು ಸದರಿ ಪ್ರಕರಣದಲ್ಲಿ ಮಾಲೀಕ ಹಾಗೂ ಮಧ್ಯವರ್ತಿಗಳ ಮೇಲೆ ಮಾನವ ಕಳ್ಳ ಸಾಗಾಣಿ ಕಲಂ– 370, 374, 344 ಕೇಸ್, ಜೀತ ಪದ್ಧತಿ(ರ) ಕಾಯ್ದೆ ಸೆಕ್ಷನ್– 16, 17, 18 ರಡಿ, ಬಾಲ ಕಾರ್ಮಿಕ ಪದ್ಧತಿ(ನಿರ್ಮೂಲನೆ) ಕಾಯ್ದೆ ಕಲಂ –79, 84ರಡಿ ಕೇಸ್ ಗಳನ್ನು ಮಾಡಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದರು. ತದನಂತರದಲ್ಲಿ , ದಿನಾಂಕ–24.3.2019ರಂದು ಈ ಎಲ್ಲಾ ಕಾರ್ಮಿಕರಿಗೂ ಹಾಗೂ 10 ವರ್ಷದ ಮೇಲ್ಪಟ್ಟ ಮಕ್ಕಳಿಗೆ ಸೇರಿದಂತೆ ಎಲ್ಲರಿಗೂ ಕೇಂದ್ರ ಮಾರ್ಗಸೂಚಿಯಲ್ಲಿರುವಂತೆ ಬಿಡುಗಡೆ ಪ್ರಮಾಣ ಪತ್ರಗಳನ್ನು ವಿತರಿಸಿ, ಪ್ರತಿಯೊಬ್ಬ ಜೀತವಿಮುಕ್ತರಿಗೂ ತಲಾ ರೂ.20,000/– ತುರ್ತು ಪರಿಹಾರವನ್ನು ಚೆಕ್ ಮೂಲಕ ವಿತರಿಸಲಾಯಿತು. ನಾಲ್ವರು ಸರ್ಕಾರದ ಅಧಿಕಾರಿಗಳು, ಇಬ್ಬರು ಪೊಲೀಸ್ ಪೇದೆಗಳ ಜೊತೆಗೆ ಅವರನ್ನು ಸ್ವಂತ ರಾಜ್ಯಕ್ಕೆ ಕಳುಹಿಸಿಕೊಡಲಾಯಿತು.

ಈ ಪ್ರಕರಣದಲ್ಲಿ ಜಿಲ್ಲಾಧಿಕಾರಿಯವರ ಪೂರ್ವ ಸಿದ್ದತೆ, ವಿವಿಧ ಅಪರಾಧಗಳನ್ನು ಗಮನಿಸಿರುವ ರೀತಿ, ಅವುಗಳನ್ನು ಕಾನೂನಿನ್ವಯ ಪ್ರಥಮ ವರ್ತಮಾನ ವರದಿಯಲ್ಲಿ ದಾಖಲಿಸಿರುವುದು, ತಕ್ಷಣ ಬಿಡುಗಡೆ ಮಾಡಿ ತುರ್ತು ಪರಿಹಾರ ನೀಡಿರುವ ಬಗ್ಗೆ ಎಲ್ಲಾಅಧಿಕಾರಿಗಳು ಗಮನಿಸಬೇಕು. ಈ ರೀತಿ ಕಾಲಮಿತಿಯೊಳಗೆ ಪ್ರಕರಣದಲ್ಲಿ ಸಿಲುಕಿರುವ ಬಾಧಿತರನ್ನು, ಪ್ರಕರಣದಲ್ಲಿ ಅಪರಾಧ ಎಸಗಿರುವ ಅಪರಾಧಿಗಳ ಬಂಧನಕ್ಕೆ ಕ್ರಮವಹಿಸಬೇಕು. ಆಗ ಮಾತ್ರ ಪ್ರಕರಣವು ತಾರ್ಕಿಕ ಹಂತ ತಲುಪಲು ಸಾಧ್ಯವಾಗುವುದು. ಸದರಿ ಅಪರಾಧದಲ್ಲಿ ಜೀತ ಅಪರಾಧದೊಂದಿಗೆ ಇತರೆ ಅಪರಾಧಗಳು ಜರುಗಿರುವುದರಿಂದ ಈ ಪ್ರಕರಣದ ವಿಚಾರಣೆಯನ್ನು ಉಪ–ವಿಭಾಗೀಯ ಅಧಿಕಾರಿಗಳು ಮಾಡಲು ಬರುವುದಿಲ್ಲ, ಇದನ್ನು ಸಕ್ಷಮ ನ್ಯಾಯಾಲಯವೇ ಮಾಡಬೇಕಾಗುತ್ತದೆ.


ಮಾದೇಶ್
ಜೀತಮುಕ್ತ, ಆನೆಕಲ್ ತಾಲೂಕು, ಜಿಗಣಿ ಗ್ರಾಮ, ಕರ್ನಾಟಕ

# 6. ಜೀತ ಪದ್ಧತಿಯಿಂದ ಮುಕ್ತರಾದ ಮಾದೇಶ್ ಮತ್ತು ಕುಟುಂಬದವರ ಯಶೋಗಾಥೆ

## 6. ಜೀತ ಪದ್ಧತಿಯಿಂದ ಮುಕ್ತರಾದ ಮಾದೇಶ್ ಮತ್ತು ಕುಟುಂಬದವರ ಯಶೋಗಾಥೆ

ಈಗ ಓದುವಂತಹ ಕಥೆ ಸಮಾಜದಲ್ಲಿ ಬಡ ಅಸಹಾಯಕ ಕುಟುಂಬವೊಂದು ಜೀತದಿಂದ ಮುಕ್ತಿಹೊಂದಿ ಉತ್ತಮ ಸ್ವತಂತ್ರ ಜೀವನವನ್ನು ಕಂಡುಕೊಂಡ ಯಶೋಗಾಥೆಯಾಗಿದೆ. ಜೀತ ಪದ್ಧತಿ ಅಸ್ತಿತ್ವದ ಬಗ್ಗೆ ಸಂಶಯ ವ್ಯಕ್ತ ಪಡಿಸುವಂತಹ ವರ್ಗಗಳಿಗೆ ಈ ಕಥೆ ಉತ್ತರವಾಗಿದೆ. ಕಥೆ ಎಂದರೆ ಕಾಲ್ಪನಿಕವಾದ ಕಥೆ ಇದಲ್ಲ ನೈಜ ಘಟನೆಯನ್ನು ಕಥೆಯ ಸ್ವರೂಪದಲ್ಲಿ ವಿವರಿಸಲಾಗಿದೆ.

ಈ ಕಥೆಯು ಸಮಾಜದಲ್ಲಿನ ಜವಾಬ್ದಾರಿ ಪ್ರಜೆಯ, ಅಧಿಕಾರದಲ್ಲಿರುವ ವ್ಯಕ್ತಿಯ ಕಣ್ಣು ತೆರೆಸುವಂತಹ ಕಥೆಯಾಗಿದೆ. ಸಮಾಜದಲ್ಲಿ ನಡೆಯುವಂತಹ ನೂರಾರು ನಿಯಮ ಬಾಹಿರ, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಹೇಗೆ ವ್ಯಕ್ತಿಗಳು ಸಿಲುಕಿ ಸಂಕಟ ಪಡುತ್ತಿದ್ದಾರೆ ಎನ್ನುವುದಕ್ಕೆ ಈ ಕಥೆ ಉತ್ತಮ ಉದಾಹರಣೆಯಾಗಿದೆ. ಸದರಿ ಪ್ರಕರಣವು ತುಂಬಾ ಹಳೆಯದೇನು ಅಲ್ಲ. ಒಂದೆರಡು ವರ್ಷಗಳ ಹಿಂದೆ ಬೆಂಗಳೂರಿನ ಅನೇಕಲ್ ತಾಲ್ಲೂಕಿನ ಜಿಗಣಿಯ ಕಲ್ಲು ಕ್ವಾರಿಯಲ್ಲಿ ನಡೆದಂತಹ ಪ್ರಸಂಗ.

ತಮಿಳುನಾಡು ಮೂಲದ ಒಂದು ಕುಟುಂಬ ತನ್ನ 3 ಮಕ್ಕಳೊಂದಿಗೆ ಬೆಂಗಳೂರು(ನ) ಜಿಲ್ಲೆಯ ಅನೇಕಲ್ ತಾಲ್ಲೂಕಿನ ಜಿಗಣಿಯ ಒಂದು ಕಲ್ಲು ಕ್ವಾರಿಗೆ ಬಂದು, ಮುಂಗಡ ಹಣ ಪಡೆದು 11 ಜನರು ಒಂದು ಪುಟ್ಟ ಶೆಡ್‌ನಲ್ಲಿ ವಾಸ ಮಾಡುತ್ತಿರುತ್ತಾರೆ. ಈ ಸ್ಥಳದಲ್ಲಿ ಯಾವುದೇ ಮೂಲ ಭೂತ ಸೌಕರ್ಯವಿರುವುದಿಲ್ಲ, ಇವರೊಂದಿಗೆ ಸ್ವಲ್ಪ ದೂರದಲ್ಲಿ ಕ್ವಾರಿ ಮಾಲೀಕರ ಮನೆ. ಈ ಕಥೆಯಲ್ಲಿ ಬರುವ ಮಾದೇಶ್ , ಈ ಕ್ವಾರಿಗೆ ಬಂದಾಗ ಕೇವಲ 5 ವರ್ಷಗಳ ಬಾಲಕ. ಈ ಪುಟ್ಟ ಹುಡುಗ ತನ್ನ ಅಕ್ಕ, ತಮ್ಮಂದಿರೊಂದಿಗೆ ತಂದೆ ತಾಯಿಗೆ ರೈಲು ಹಳಿಗೆ ತುಂಬುವ ಕಲ್ಲುಗಳನ್ನು ಒಡೆಯುವ ಕೆಲಸ ಮಾಡುತ್ತಾ, ಮನೆ ಕೆಲಸ ಮಾಡುತ್ತಾ ಬೆಳೆಯುತ್ತಾನೆ. ಸರಿಯಾದ ಬಟ್ಟೆಯಿಲ್ಲ, ಮಳೆ ಬಂದರೆ ಆಶ್ರಯವಿಲ್ಲದ ಮನೆ, ತಿನ್ನಲು ಹೊಟ್ಟೆ ತುಂಬಾ ಊಟವು ಇಲ್ಲ. ಮಾಲೀಕನು ಹಾಗೂ ಮೇಲ್ವಿಚಾರಕರು ಸಿಟ್ಟು ಬಂದಾಗ ಈ ಪುಟ್ಟ ಮಕ್ಕಳ ಕೈಯಲ್ಲಿ ಅವರ ಮನೆಯ ಕೆಲಸ ಮಾಡಿಸುವುದು, ಹೊಡೆಯುವುದು ಮಾಡುತ್ತಿರುತ್ತಾರೆ. ಹೊಡೆದಾಗ ರೂ.20/- ನೀಡಿ ಔಷಧಿ ತೆಗೆದುಕೊಳ್ಳಿ ಎಂದು ದುಡ್ಡು ನೀಡುವುದು ವಾರದಲ್ಲಿ ಒಮ್ಮೆಯಾದರೂ ನಡೆಯುವ ಕಿರುಕುಳ. ಮಾದೇಶನ ತಾಯಿ ಊರಿಂದ ರೂ.5000/- ಪಡೆದು ಸಾಲ ತೀರಿಸಿ ಊರಿಗೆ ಕುಟುಂಬ ಸಮೇತ ವಾಪಸ್ಸು ಹೋಗಲು ಮಾಲೀಕರಲ್ಲಿ ಬೇಡಿದಾಗ, ಮಾಲೀಕನಲ್ಲಿ ಪಡೆದ ಮುಂಗಡ ಇದೀಗ ರೂ.50,0000/-ವಾಗಿದೆ ಎಂದು ಬೆದರಿಸುತ್ತಾರೆ. ಮಾದೇಶನ ತಾಯಿ ಕೋಪದಿಂದ ಮಾಲೀಕರಿಗೆ ಪ್ರಶ್ನೆ ಮಾಡಿದಾಗ ಆತ ಅಮಾನುಷವಾಗಿ ಮಾದೇಶನ ತಾಯಿಯನ್ನು ಇತರೆ ಕಾರ್ಮಿಕರ ಮುಂದೆ ಪಶುವನ್ನು ಹೊಡೆಯುವಂತೆ ಹೊಡೆಯುತ್ತಾನೆ . ಕುಟುಂಬದ ಯಾರೊಬ್ಬರು ಆಕೆಯನ್ನು ಬಿಡಿಸುವ ಧೈರ್ಯ ಮಾಡಲಾಗುವುದಿಲ್ಲ. ಸ್ವಲ್ಪ ದಿನಗಳಲ್ಲಿ ಅಂ-ದರೆ ಸೆಪ್ಟಂಬರ್ 2017ರಲ್ಲಿ ಅವರ ಸಂಬಂಧಿಕರೊಬ್ಬರು ತಮಿಳುನಾಡಿನಿಂದ ಈ ಕ್ವಾರಿಗೆ ಬಂದು ಕೃಷ್ಣಗಿರಿಯಲ್ಲಿರುವ ಒಬ್ಬ ಕಾರ್ಯಕರ್ತನ ಸಂಪರ್ಕ ಸಂಖ್ಯೆ ನೀಡುತ್ತಾರೆ. ಆತ ಕ್ವಾರಿಗೆ ಭೇಟಿ ನೀಡಿ ಫೋನ್ ಮೂಲಕ ಕುಟುಂಬದೊಂದಿಗೆ ನಿರಂತರ ಸಂಪರ್ಕ ಸಾಧಿಸಿ ಅಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆಯುತ್ತಾನೆ. ಡಿಸೆಂಬರ್ 15, 2017 ಬೆಳಗ್ಗೆ ಜಿಲ್ಲಾಡಳಿತ, ಪೋಲೀಸ್ ಹಾಗೂ ಸರ್ಕಾರೇತರ ಸಂಸ್ಥೆಯೊಂದಿಗೆ ಬಂದು ಅಲ್ಲಿಂದ ಕುಟುಂಬದವರನ್ನು ರಕ್ಷಿಸಿ ಪೋಲೀಸ್ ವಾಹನದಲ್ಲಿ ಸುರಕ್ಷಿತ ಸ್ಥಳಕ್ಕೆ ಕಳುಹಿಸುತ್ತಾರೆ. ಅಪರಾಧಿಗಳನ್ನು ಬಂಧಿಸಿ 110 ದಿನಗಳ ಕಾಲ ಜೈಲಿಗೆ ಹಾಕುತ್ತಾರೆ.

ಮಾದೇಶ ಮತ್ತು ಕುಟುಂಬದವರಿಗೆ ಬಿಡುಗಡೆ ಪ್ರಮಾಣ ಪತ್ರ ಹಾಗೂ ತುರ್ತು ಪರಿಹಾರ ತಲಾ ರೂ.20,000/-ಗಳನ್ನು ನೀಡಲಾಗುತ್ತದೆ. ಇದೀಗ ಮಾದೇಶ ಮತ್ತು ಅವರ ಕುಟುಂಬದವರು ಸ್ವತಂತ್ರದ ಬದುಕು ಬದುಕುತ್ತಿದ್ದಾರೆ. ಸ್ವಯಂ ಉದ್ಯೋಗ ಮಾಡುವುದು; ತರಕಾರಿ ತೋಟದಲ್ಲಿ ಕೆಲಸ ಮಾಡಿಕೊಂಡು ಉತ್ತಮ ವರಮಾನ ಪಡೆಯುತ್ತಿದ್ದಾರೆ. ಅಲ್ಲದೇ ಇದೀಗ 22 ವರ್ಷದ ಮಾದೇಶ ಹಾಗೂ ಅವರ ಸಹೋದರರು ಬೆಂಗಳೂರಿನ ಹಾಸ್ಟೆಲ್‌ನಲ್ಲಿ ವಿದ್ಯಾಭ್ಯಾಸ ಮುಂದುವರೆಸಿದ್ದಾರೆ. ಜಿಲ್ಲಾಡಳಿತದ ಒಂದು ದಿಟ್ಟ ಹೆಜ್ಜೆ ಕುಟುಂಬವೊಂದು ಪುನಶ್ಚೇತನಗೊಂಡು ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳಲು ಕಾರಣವಾಯಿತು.

ಜೀತ ಪದ್ಧತಿ ತುಂಬಾ ಅಮಾನವೀಯವಾದದ್ದು, ಸಮಾಜದ ಕೆಳ ವರ್ಗದ ಬಡ ಕುಟುಂಬಗಳು ತಮಗೆ ಅರಿವಿಲ್ಲದೇ ಅಥವಾ ಸಾಲ ಕಾರಣಕ್ಕಾಗಿ ಜೀತದಲ್ಲಿ ಸಿಲುಕಿ ಬದುಕನ್ನು ಕಳೆದುಕೊಂಡಿದ್ದಾರೆ. ಕೆಲವು ಮಾನವ ಹಕ್ಕು ಸಂರಕ್ಷಣಾ ಸಂಘಟನೆಗಳ ಮೂಲಕ, ಮಾದ್ಯಮದ ಮೂಲಕ, ಇಲ್ಲವೇ ಬಾಧಿತರೇ ಸ್ವತಃ ಬಂದು ನೆರವನ್ನು ಕೇಳಿದಾಗ ಯಾವುದೇ ವಿಳಂಬ ಮಾಡದೇ ಜಿಲ್ಲಾಡಳಿತವು ಕಾರ್ಮಿಕರನ್ನು ರಕ್ಷಿಸಿ, ಅಪರಾಧಿಗಳಿಗೆ ಶಿಕ್ಷೆ ಕೊಡಿಸುವ ಕೆಲಸವನ್ನು ಮಾಡಿದಾಗ ಮಾತ್ರ ಈ ಪದ್ಧತಿ ನಿರ್ಮೂಲನೆ ಮಾಡಲು ಸಾಧ್ಯ.

ಹಲವು ಸಂಸ್ಥೆಗಳು ಕಾರ್ಮಿಕರನ್ನು ಕನಿಷ್ಠ ವೇತನ, ಕೆಲಸದ ಸ್ವಾತಂತ್ರ್ಯ ನೀಡದೇ ಒತ್ತಾಯದಿಂದ ದುಡಿಸಿಕೊಳ್ಳುತ್ತಿರುತ್ತಾರೆ, ಜಿಲ್ಲಾ ಅಥವಾ ಉಪ-ವಿಭಾಗ ಮಟ್ಟದ ಜಾಗೃತಿ ಸಮಿತಿ ಸದಸ್ಯರ ತಂಡ ಮಾಡಿಕೊಂಡು ಇಂತಹ ಸ್ಥಳಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಕಾರ್ಮಿಕರ ಪರಿಸ್ಥಿತಿ ಅವಲೋಕಿಸಿದಾಗ ಪ್ರಕರಣಗಳು ಬೆಳಕಿಗೆ ಬರುತ್ತವೆ. ಜೀತವಿಮುಕ್ತರಿಗೆ ಕಾಲಮಿತಿಯೊಳಗೆ ಪುನರ್ವಸತಿ ನೀಡುವುದು ಬಹಳ ಮುಖ್ಯ, ಇಲ್ಲವಾದರೆ ಅವರು ಪುನಃ ಜೀತಕ್ಕೆ ಸಿಲುಕುವ ಎಲ್ಲಾ ಸಾಧ್ಯತೆಗಳು ಇರುತ್ತವೆ.

**ಕಥೆಯ ಕೃಪೆ- International Justice Mission, Bangalore.**



ಕೊಳವೆ ಭಾವಿ ಕಾರ್ಮಿಕರು
ಬೆಂಗಳೂರು ಕರ್ನಾಟಕ

# 7. ಜೀತಕಾರ್ಮಿಕರ ಪುನರ್ವಸತಿ ಯೋಜನೆಯ ಪ್ರಮುಖಾಂಶಗಳು (ಕೇಂದ್ರ ಮಾರ್ಗಸೂಚಿಯಲ್ಲಿರುವಂತೆ)

## 7. ಜೀತಕಾರ್ಮಿಕರ ಪುನರ್ವಸತಿ ಯೋಜನೆಯ ಪ್ರಮುಖಾಂಶಗಳು (ಕೇಂದ್ರ ಮಾರ್ಗಸೂಚಿಯಲ್ಲಿರುವಂತೆ) *(Detailed Information Enclosed pg.no. 105-132)*

ದಿನಾಂಕ 18.5.2016ರಂದು ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದವರು ಕಚೇರಿ ಆದೇಶ ಸಂಖ್ಯೆ–F No S-11012/01/2015-BL ರಲ್ಲಿ ಜೀತದಾಳುಗಳ ಪುನರ್ವಸತಿ ಯೋಜನೆಯ ಪರಿಷ್ಕೃತ ಮಾರ್ಗಸೂಚಿಯನ್ನು ಎಲ್ಲಾ ರಾಜ್ಯಗಳಿಗೂ ಕಳುಹಿಸಿ ಇನ್ನು ಮುಂದೆ ಜೀತದಾಳುಗಳ ಬಿಡುಗಡೆ ಮತ್ತು ಪುನರ್ವಸತಿಗೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ವಯ ಕ್ರಮವಹಿಸುವಂತೆ ಕೋರಿರುತ್ತಾರೆ.

1. ಸದರಿ ಮಾರ್ಗಸೂಚಿಯಲ್ಲಿನ ಮುಖ್ಯಾಂಶಗಳನ್ನು ಸಂಗ್ರಹ ರೂಪದಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಮಾಹಿತಿಗಾಗಿ ವಿವರಿಸಲಾಗಿದೆ, ಅಧಿಕೃತ ಬಳಕೆಗೆ ಹಾಗೂ ಉಲ್ಲೇಖದ ಕಾರಣಗಳಿಗೆ ಮೂಲ ಮಾರ್ಗಸೂಚಿಯನ್ನೇ ಬಳಸತಕ್ಕದ್ದು.

2. ಪರಿಷ್ಕೃತ 'ಜೀತದಾಳುಗಳ ಪುನರ್ವಸತಿ' ಯೋಜನೆಯು ಕೇಂದ್ರವಲಯ ಯೋಜನೆಯಾಗಿರತಕ್ಕದ್ದು ಮತ್ತು ಈ ಯೋಜನೆಯು 2016 ಮೇ 17ರಿಂದ ಜಾರಿಗೆ ಬರತಕ್ಕದ್ದು. ನಗದು ಪುನರ್ವಸತಿ ಉದ್ದೇಶಕ್ಕಾಗಿ ರಾಜ್ಯ ಸರ್ಕಾರಗಳು ಯಾವುದೇ ಹೊಂದಾಣಿಕೆಯ ವಂತಿಕೆಯನ್ನು ಪಾವತಿಸಬೇಕಾದ ಅವಶ್ಯಕತೆ ಇರುವುದಿಲ್ಲ.

2ಎ. OM- F.No.S- 11012/01/2015-BL, 18.05.2016 ರಲ್ಲಿ ಬಿಡುಗಡೆಯಾದ ಪ್ರತಿ ಜೀತ ವಿಮುಕ್ತರಿಗೆ ರೂ.5000/–ಗಳ ತುರ್ತು ಪರಿಹಾರ ಅನುದಾನ (ಕಾರ್ಪಸ್ ನಿಧಿ) ನೀಡುವಂತೆ ಸೂಚಿಸಲಾಗಿರುತ್ತದೆ. ಇದು ಸ್ವಂತ ಹಾಗೂ ಹೊರರಾಜ್ಯಕ್ಕೆ ಸೇರಿದ ಜೀತ ಕಾರ್ಮಿಕರಿಬ್ಬರಿಗೂ ಅನ್ವಯವಾಗುತ್ತದೆ. OM- F.No.S- 11012/01/2015-BL, 17.01.2017 ರಲ್ಲಿ ಬಿಡುಗಡೆಯಾದ ಪ್ರತಿ ಜೀತಕಾರ್ಮಿಕರಿಗೆ ನೀಡುವ ತುರ್ತು ಪರಿಹಾರ ಅನುದಾನವನ್ನು ರೂ.5000/–ದಿಂದ ರೂ.20,000/–ಗಳಿಗೆ ಕೇಂದ್ರ ಸರ್ಕಾರವು ಪರಿಷ್ಕರಿಸಿದ್ದು, ಸದರಿ ಆದೇಶ ಜಾರಿಯಾದ ದಿನಾಂಕದಿಂದ ಈ ಪರಿಷ್ಕೃತ ಅನುದಾನವನ್ನು ನೀಡುವಂತೆ ಸೂಚಿಸಲಾಗಿರುತ್ತದೆ. OM- F.No.S- 11012/01/2019-BL, 07.02.2022 ರಲ್ಲಿ ಬಿಡುಗಡೆಯಾದ ಪ್ರತಿ ಜೀತ ಕಾರ್ಮಿಕರಿಗೆ ನೀಡುವ ತುರ್ತು ಪರಿಹಾರ ಅನುದಾನವನ್ನು ರೂ.20,000/– ದಿಂದ ರೂ.30,000/– ಗಳಿಗೆ ಕೇಂದ್ರ ಸರ್ಕಾರವು ಪರಿಷ್ಕರಿಸಿದ್ದು, ಸದರಿ ಆದೇಶ ಜಾರಿಯಾದ ದಿನಾಂಕದಿಂದ ಈ ಪರಿಷ್ಕೃತ ಅನುದಾನವನ್ನು ನೀಡುವಂತೆ ಸೂಚಿಸಲಾಗಿರುತ್ತದೆ.

3. ಪುನರ್ವಸತಿ ಪ್ಯಾಕೇಜ್ ಪ್ರತಿ ವಯಸ್ಕ ಪುರುಷ ಫಲಾನುಭವಿಗೆ ರೂ.1,00,000/– ರೂ ಆಗಿರತಕ್ಕದ್ದು. ಫಲಾನುಭವಿಯು ಅದನ್ನು ಯಾವುದೇ ವರ್ಷಾಸನ ಠೇವಣಿ ಯೋಜನೆಯಲ್ಲಿ ಹೂಡಿಕೆ ಮಾಡುವ ಅಥವಾ ನಗದು ಅನುದಾನವನ್ನು ಸ್ವೀಕರಿಸುವ ಆಯ್ಕೆಯನ್ನು ಹೊಂದಿರತಕ್ಕದ್ದು. ಜಿಲ್ಲಾಡಳಿತವು ಫಲಾನುಭವಿಗಳ ನಗದು ಅವಶ್ಯಕತೆಯನ್ನು ನಿರ್ಧರಿಸಿ, ಈ ಬಗ್ಗೆ ತನ್ನ ಉತ್ತಮ ವಿವೇಚನೆಯನ್ನು ಬಳಸಿ, ಸದರಿ ವಯಸ್ಕ ಪುರುಷನ ಸಮ್ಮತಿಯೊಂದಿಗೆ ಹಣವನ್ನು ವಾರ್ಷಿಕ ಠೇವಣಿಯಲ್ಲಿ ಇರಿಸಲಿದೆ.

4. ಮಹಿಳೆಯರು, ಬಲಾತ್ಕಾರದ ಅಥವಾ ಸಂಘಟಿತ ಭಿಕ್ಷಾಟನೆಗೆ ದೂಡಲ್ಪಟ್ಟ ಅನಾಥರು, ಬಲಾತ್ಕಾರದ ದುಡಿಮೆಗೆ/ ಭಿಕ್ಷಾಟನೆಗೆಂದು ದುಡಿಸಿಕೊಂಡ ಮಕ್ಕಳನ್ನು ಈ ಯೋಜನೆಯಡಿ ಬಿಡುಗಡೆಗೊಳಿಸಿದಂತಹ ಸಂದರ್ಭದಲ್ಲಿ ಅಂತಹ ಫಲಾನುಭವಿಗಳಿಗೆ ಪುನರ್ವಸತಿ ನೆರವಿನ ಮೊತ್ತವು ರೂ.2.00 ಲಕ್ಷಗಳಾಗಿರತಕ್ಕದ್ದು. ಅದರಲ್ಲಿ ಕನಿಷ್ಠ ರೂ.1,25000/– ರೂಪಾಯಿಗಳನ್ನು ಪ್ರತಿಯೊಬ್ಬ ಫಲಾನುಭವಿಯ ಹೆಸರಿನಲ್ಲಿ ವರ್ಷಾಸನ ಠೇವಣಿ ಯೋಜನೆಯಲ್ಲಿ ಠೇವಣಿ ಇಡತಕ್ಕದ್ದು ಮತ್ತು ಇಸಿಎಸ್ ಮೂಲಕ ಫಲಾನುಭವಿಯ ಖಾತೆಗೆ ಬಾಕಿ ಮೊತ್ತವನ್ನು ವರ್ಗಾಯಿಸತಕ್ಕದ್ದು.

5. ವೇಶ್ಯಾವಾಟಿಕೆ ಗೃಹಗಳು, ಮಸಾಜ್ ಪಾರ್ಲರ್‌ಗಳು, ಉದ್ಯೋಗದ ಏಜೆನ್ಸಿಗಳು ಇತ್ಯಾದಿಗಳಂತಹ ಅಥವಾ ಅನೈತಿಕ ವ್ಯವಹಾರದಂತಹ ಮೇಲ್ನೋಟಕ್ಕೆ ಕಾಣುವ ಲೈಂಗಿಕ ಶೋಷಣೆ ತಾಣಗಳಿಂದ ರಕ್ಷಿಸಿದಂತಹ ತೃತೀಯ ಲಿಂಗಿಗಳು, ಮಹಿಳೆಯರು ಅಥವಾ ಮಕ್ಕಳ ಹಕ್ಕುಗಳನ್ನು ಕಸಿದುಕೊಂಡ ಅಥವಾ ಅವರನ್ನು ತುಚ್ಛವಾಗಿ ಕಾಣುವಂತಹ ತೀವ್ರತರವಾದ ಸಂದರ್ಭಗಳು ಅಥವಾ ಅಂಗವಿಕಲ ವ್ಯಕ್ತಿಗಳ ಸಂದರ್ಭಗಳು ಅಥವಾ ಜಿಲ್ಲಾಧಿಕಾರಿಗಳು ಸೂಕ್ತವೆಂದು ಭಾವಿಸಬಹುದಾದಂತಹ ಇತರ ಸಂದರ್ಭಗಳೂ ಒಳಗೊಂಡಂತೆ ಜೀತದ ಅಥವಾ ಬಲಾತ್ಕಾರದ ದುಡಿಮೆ ಪ್ರಕರಣಗಳಲ್ಲಿ ಪುನರ್ವಸತಿ ನೆರವು ರೂ.3.00 ಲಕ್ಷ ರೂಪಾಯಿಗಳಾಗಿರತಕ್ಕದ್ದು. ಅದರಲ್ಲಿ ಕನಿಷ್ಠ ರೂ.2.00 ಲಕ್ಷ ರೂಪಾಯಿಗಳನ್ನು ಪ್ರತಿಯೊಬ್ಬ ಫಲಾನುಭವಿಯ ಹೆಸರಿನಲ್ಲಿ ವರ್ಷಾಸನ ಠೇವಣಿ ಯೋಜನೆಯಡಿಯಲ್ಲಿ ಇಡತಕ್ಕದ್ದು ಮತ್ತು ರೂ.1.00 ಲಕ್ಷ ರೂಪಾಯಿಗಳನ್ನು ಇಸಿಎಸ್ ಮೂಲಕ ಫಲಾನುಭವಿಗಳ ಖಾತೆಗೆ ವರ್ಗಾಯಿಸತಕ್ಕದ್ದು.

6. ಈ ಮೇಲೆ ವಿವರಿಸಲಾದ ನಗದು ಪುನರ್ವಸತಿಯೊಂದಿಗೆ ಈ ಕೆಳಕಾಣಿಸಿದ ಅನುದಾನೇತರ ಪುನರ್ವಸತಿಯ ಕುರಿತು ಆಯಾ ರಾಜ್ಯ ಸರ್ಕಾರಗಳು ಅವಶ್ಯ ಕ್ರಮಗಳನ್ನು ವಹಿಸತಕ್ಕದ್ದು:

ಅ) ಮನೆ–ವಸತಿ ಮತ್ತು ಕೃಷಿ ಭೂಮಿಯ ಹಂಚಿಕೆ
ಆ) ಭೂ ಅಭಿವೃದ್ಧಿ
ಇ) ಕಡಿಮೆ ವೆಚ್ಚದ ವಸತಿ ಘಟಕಗಳನ್ನು ಒದಗಿಸುವುದು.
ಈ) ಪಶುಪಾಲನೆ,ಡೈರಿ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ ಇತ್ಯಾದಿ. ಉ) ವೇತನ ಸಹಿತ ಉದ್ಯೋಗ, ಕನಿಷ್ಠ ಮಜೂರಿಯ ಜಾರಿ ಇತ್ಯಾದಿ, ಊ) ಲಘು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಮತ್ತು ಸಂಸ್ಕರಣೆ,
ಎ) ನಿರ್ದಿಷ್ಟ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಅತ್ಯಾವಶ್ಯಕ ವಸ್ತುಗಳ ಪೂರೈಕೆ ಮತ್ತು ಏ) ಮಕ್ಕಳಿಗಾಗಿ ಶಿಕ್ಷಣ.

7. ಸಂಕ್ಷಿಪ್ತ ವಿಚಾರಣೆಯು ಮುಕ್ತಾಯವಾದ ನಂತರ, ಜಿಲ್ಲಾದಂಡಾಧಿಕಾರಿ/ಉಪ-ವಿಭಾಗೀಯ ದಂಡಾಧಿಕಾರಿಯವರು ಜೀತದಾಳು ಬಂಧನದ ಸ್ಥಿತಿಯಲ್ಲಿ ಇಲ್ಲ ಅಥವಾ ಜೀತದ ಸ್ಥಿತಿಯಲ್ಲಿ ಇಲ್ಲ ಆದರೆ ಆ ವ್ಯಕ್ತಿಗೆ ಸಾಮಾಜಿಕ ಹಾಗು ಆರ್ಥಿಕ ನೆರವಿನ ಅವಶ್ಯಕತೆಯಿದೆ ಎಂದಾದರೆ ಜಿಲ್ಲಾಧಿಕಾರಿಯು ತಮ್ಮ ಆಡಳಿತ ನಿರ್ವಹಣೆ ಅಡಿಯಲ್ಲಿರುವ ಯಾವುದೇ ಇತರೆ ಯೋಜನೆಯ ಅಡಿಯಲ್ಲಿ ಸರ್ಕಾರದ ನೆರವನ್ನು ಒದಗಿಸಬಹುದಾಗಿದೆ.

8. ಸಂಕ್ಷಿಪ್ತ ವಿಚಾರಣೆಯು ಇತ್ಯರ್ಥದಲ್ಲಿರುವಂತಹ ಅವಧಿಯಲ್ಲಿ ಸಂರಕ್ಷಿತ ವ್ಯಕ್ತಿಗಳ ಆರೈಕೆ ಮತ್ತು ರಕ್ಷಣೆಗಾಗಿ ತಕ್ಷಣದ ನೆರವು ಅವಶ್ಯಕವಾಗಿದೆ ಎಂದು ಜಿಲ್ಲಾ ದಂಡಾಧಿಕಾರಿ/ಉಪ-ವಿಭಾಗೀಯ ದಂಡಾಧಿಕಾರಿಯವರಿಗೆ ಕಂಡುಬಂದಂತಹ ಸಂದರ್ಭಗಳಲ್ಲಿ, ಈ ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಉಪಲಬ್ಧ ಹಕ್ಕುಗಳು ಏನೇ ಇದ್ದರೂ, ಸಂತ್ರಸ್ತರು ಅಥವಾ ಸಾಕ್ಷಿದಾರರಿಗೆ ಅಗತ್ಯವಿರುವ ಆಹಾರ, ವಸತಿ, ವೈದ್ಯಕೀಯ ನೆರವು, ಕಾನೂನು ನೆರವು ಇತ್ಯಾದಿಗಳನ್ನು ಕೂಡಲೇ ಯಾವುದೇ ಕಾನೂನು ಅಥವಾ ಯೋಜನೆಯ ಅಡಿಯಲ್ಲಿ ಒದಗಿಸತಕ್ಕದ್ದು.

**ವಿಶೇಷ ಸೂಚನೆ**: ಸಂಕ್ಷಿಪ್ತ ವಿಚಾರಣೆ ನೆಡಯುವ ಸಮಯದಲ್ಲಿ ಹಾಗೂ ಜೀತದಾಳುಗಳನ್ನು ಅವರ ಸ್ವಂತ ಸ್ಥಳಕ್ಕೆ ಮರಳ ಕಳುಹಿಸುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದಂತಹ ಕಾರ್ಪಸ್ ನಿಧಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಈ ವೆಚ್ಚಗಳನ್ನು ಬಳಸಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ- ಗ್ರಾಅಪ/18/ಆರ್‌ಬಿಎಲ್/2019, ಬೆಂಗಳೂರು, ದಿನಾಂಕ-2.1.2020 ಆದೇಶವನ್ನು ದಯವಿಟ್ಟು ಗಮನಿಸುವುದು.

9. ಅಧಿನಿಯಮದ ಪ್ರಕರಣ 21 ರ ಅಡಿಯಲ್ಲಿ ಸಂಕ್ಷಿಪ್ತ ಅಧಿವಿಚಾರಣೆಯು ನಿಯಮಾನುಸಾರ ಮುಕ್ತಾಯವಾಗದಿರುವ ಸಂದರ್ಭದಲ್ಲಿ, ಆದರೆ, ಜಿಲ್ಲಾ ದಂಡಾಧಿಕಾರಿ/ ಉಪ-ವಿಭಾಗೀಯ ದಂಡಾಧಿಕಾರಿಯವರು ಮೇಲ್ನೋಟಕ್ಕೆ ಜೀತವು ಕಂಡುಬಂದಿದೆ ಮತ್ತು ಅದಕ್ಕೆ ರುಜುವಾತಿದೆ ಎಂಬ ನಿರ್ಣಯಕ್ಕೆ ಬಂದರೆ, ಅಪರಾಧ ನಿರ್ಣಯದ ವಿವರಗಳು ಇಲ್ಲದಿದ್ದರೂ ನಗದು ನೆರವಿನ ಪ್ರಸ್ತಾವನೆಯನ್ನು ನಿಲ್ಲಿಸತಕ್ಕದ್ದಲ್ಲ. ಆದರೆ, ನಗದು ನೆರವಿನ ಅಂತಿಮ ವಿತರಣೆಯನ್ನು ನ್ಯಾಯಿಕ ಪ್ರಕ್ರಿಯೆಯನುಸಾರ ಜೀತದ ರುಜುವಾತಿನ ಮತ್ತು ಇತರ ಕಾನೂನು ಪರಿಣಾಮಗಳು ಮೇಲೆ ಮಾಡತಕ್ಕದ್ದು.

ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳು ಜೀತದಾಳುಗಳ ಬಿಡುಗಡೆ ನಂತರದ (Post Release) ಚಟುವಟಿಕೆಗಳ ಕುರಿತು ಕ್ರಮವಹಿಸುವುದು ಅವಶ್ಯಕವಾಗಿದೆ ಹಾಗೂ ಈ ಎಲ್ಲಾ ಪರಿಕ್ರಮಗಳು ಜೀತದಾಳುಗಳ ಹಿತದೃಷ್ಟಿಯಿಂದ ನಿರ್ವಹಿಸಬೇಕಿರುವ ಕೆಲಸವಾಗಿದೆ:

ಅ) ಜಿಲ್ಲಾಡಳಿತವು ಸರ್ಕಾರದ ಎಲ್ಲಾ ಸೂಕ್ತ ಇಲಾಖೆಗಳ ಸಹಕಾರದೊಂದಿಗೆ ಜೀತದಾಳುಗಳ ಮಕ್ಕಳ ಸಾಮರ್ಥ್ಯಾಭಿವೃದ್ಧಿಗಾಗಿ ಸಂರಕ್ಷಿತ ಮತ್ತು ಸುಭದ್ರ ವಾತಾವರಣವನ್ನು ಕಲ್ಪಿಸಿಕೊಡಲು ಒಮ್ಮುಖ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅದಕ್ಕನುಗುಣವಾಗಿ, ಅವರಿಗೆ ಸೂಕ್ತ ಶಿಕ್ಷಣ, ಮಾನಸಿಕ ಹಾಗೂ ಸಾಮಾಜಿಕ ಸಮಾಲೋಚನೆ, 12ನೇ ತರಗತಿವರೆಗಿನ ಶಿಕ್ಷಣ ಪಡೆಯುವವರೆಗೂ ಉಳಿದುಕೊಳ್ಳಲು ವಿದ್ಯಾರ್ಥಿ ನಿಲಯ/ ವಸತಿ ಸೌಕರ್ಯ, ಕೌಶಲ್ಯಾಭಿವೃದ್ಧಿ ಖಾತ್ರಿಪಡಿಸುವಂತಹ ಸೌಲಭ್ಯಗಳು ಪುನರ್ವಸತಿ ಪ್ಯಾಕೇಜ್‌ನ ಅವಿಭಾಜ್ಯ ಘಟಕವಾಗಿರತಕ್ಕದ್ದು.

ಆ) ಜೀತದಿಂದ ವಿಮುಕ್ತಿಗೊಂಡ ಮಹಿಳೆಯರ ವಿಶೇಷ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ, ರಾಜ್ಯ ಸರ್ಕಾರವು ಈ ಮೇಲೆ ವಿವರಿಸಲಾದ ಸಾಮರ್ಥ್ಯವೃದ್ಧಿ ಕ್ರಮಗಳ ಜೊತೆಗೆ ವಿವಾಹಕ್ಕಾಗಿ ಆರ್ಥಿಕ ಮತ್ತು ಇತರ ನೆರವನ್ನು ಕೂಡ ಒದಗಿಸತಕ್ಕದ್ದು.

ಇ) ಅಂಗವಿಕಲ ವ್ಯಕ್ತಿಗಳ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಅ) ಮತ್ತು ಆ)ರಲ್ಲಿ ನಮೂದಿಸಲಾದ ಕ್ರಮಗಳ ಜೊತೆಗೆ ಅಂಗವಿಕಲ ವ್ಯಕ್ತಿಗಳ ರಾಷ್ಟ್ರೀಯ ನೀತಿಯನ್ವಯ ಸರ್ಕಾರವು ವಿಶೇಷ ಆರೈಕೆ ಲಭ್ಯವಾಗುವಂತೆ ಮಾಡತಕ್ಕದ್ದು.

ಈ) C), D), E) ಗಳಲ್ಲಿ ವಿವರಿಸಲಾದ ವರ್ಗಗಳ ಅಡಿಯಲ್ಲಿ ಬಾರದ ವಯಸ್ಕ ಜೀತದಾಳುಗಳಿಗಾಗಿ, ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿಯು ಪುನರ್ವಸತಿಯ ಕಡ್ಡಾಯ ಘಟಕಾಂಶವಾಗಿರತಕ್ಕದ್ದು.

**ಜೀತಕಾರ್ಮಿಕರ ಕುರಿತ-ಗಣತಿ/ಸಮೀಕ್ಷೆ, IEC, ಮೌಲ್ಯಮಾಪನ ಕುರಿತ ಮಾಹಿತಿ**.

ಜೀತಕಾರ್ಮಿಕರ ಗಣತಿಗಾಗಿ ಪ್ರತಿ ಜಿಲ್ಲೆಗೆ ರೂ.4.50 ಲಕ್ಷ ರೂಪಾಯಿ ನಗದು ನೆರವನ್ನು ನೀಡತಕ್ಕದ್ದು. ಈ ಮೊತ್ತವನ್ನು ರಾಜ್ಯಗಳ ನಿಯಮಗಳನ್ವಯ ಜೀತಕಾರ್ಮಿಕರನ್ನು ಗುರುತಿಸುವುದಕ್ಕಾಗಿ ಸ್ವಯಂ ಸೇವಾ ಸಂಸ್ಥೆಗಳಿಗೆ ಅವರ ಪ್ರಯತ್ನಕ್ಕಾಗಿ ಹಣಕಾಸು ನೀಡಲು ಬಳಸಬಹುದು. ಪ್ರತಿಯೊಂದು ಗುರುತಿಸುವ ಯೋಜನೆಯಲ್ಲಿನ ತೃಪ್ತಿದಾಯಕ ಪ್ರಗತಿಯ ಆಧಾರದ ಮೇಲೆ ಈ ಮೊತ್ತವನ್ನು ಕೇಂದ್ರ ಸರ್ಕಾರವು ಮರುಪಾವತಿ ಮಾಡಲಿದೆ.

| ಕ್ರಮ ಸಂಖ್ಯೆ | ಗಣತಿಯಲ್ಲಿ ಒಳಗೊಂಡಿರುವ ವೆಚ್ಚ | ಅನುಮತಿಸಬಹುದಾದ ನಿಧಿ |
|---|---|---|
| 1 | ಪ್ರಶ್ನಾವಳಿಗಳ ಮುದ್ರಣಕ್ಕಾಗಿನ ವೆಚ್ಚ(ಪ್ರತಿ ಪ್ರಶ್ನಾವಳಿಗೆ 5 ರೂಪಾಯಿಯಂತೆ ಸರಾಸರಿ 2000 ಪ್ರಶ್ನಾವಳಿಗಳು) | ರೂ.10,000/- |
| 2 | ಮಾಹಿತಿ ಸಂಗ್ರಹಣೆಗಾಗಿ ಸಮೀಕ್ಷಾಗಾರರು/ ಕ್ಷೇತ್ರ ಸಿಬ್ಬಂದಿಗೆ ತರಬೇತಿ ನೀಡುವ ವೆಚ್ಚ(10 ತನಿಖೆದಾರರು/ ಕ್ಷೇತ್ರ ಸಿಬ್ಬಂದಿಗಳಿಗೆ ಪ್ರತಿಯೊಬ್ಬರಿಗೂ ಪ್ರತೀ ದಿನಕ್ಕೆ 500/- ರೂ.ನಂತೆ 5 ದಿನಗಳಿಗೆ (5000*5) | ರೂ.25,000/- |
| 3 | ಕ್ಷೇತ್ರದಿಂದ ಪ್ರಾಥಮಿಕ ದತ್ತಾಂಶ ಸಂಗ್ರಹಿಸುವುಕ್ಕಾಗಿ ವೆಚ್ಚ(10 ತನಿಖೆದಾರರು/ ಕ್ಷೇತ್ರ ಸಿಬ್ಬಂದಿಗಳಿಗೆ ಪ್ರತೀ ದಿನಕ್ಕೆ 500 ರೂ. ಗಳಂತೆ 2 ತಿಂಗಳುಗಳಿಗೆ (5000*60 ದಿನಗಳು) | ರೂ.3,00,000/- |
| 4 | ಪ್ರಾಥಮಿಕ ದತ್ತಾಂಶದ ಸಂಕಲನ, ತಃಖ್ತೆ ತಯಾರಿಸುವುದು ಮತ್ತು ವಿಶ್ಲೇಷಣೆಯ ವೆಚ್ಚ(2 ಸಂಶೋಧನಾ ಸಹಾಯಕರಿಗೆ ಪ್ರತಿ ತಿಂಗಳಿಗೆ ಪ್ರತಿಯೊಬ್ಬರಿಗೆ ರೂ.20,000/- ದಂತೆ 2 ತಿಂಗಳಿಗೆ ಪಾವತಿ (40,000*2 ತಿಂಗಳು) | ರೂ.80,000/- |
| 5 | ದತ್ತಾಂಶ/ ಮಾಹಿತಿಯ ಗಣಕೀಕರಣದ ವೆಚ್ಚ | ರೂ.35,000/- |
| | ಒಟ್ಟು ಮೊತ್ತ | ರೂ. 4,50,000/- |

**ಈ ಕೆಳಕಂಡ ಘಟಕಾಂಶಗಳನ್ವಯ ಪ್ರತಿ ರಾಜ್ಯಕ್ಕೆ ಪ್ರತಿ ವರ್ಷ ಗರಿಷ್ಠ ರೂ.10.00 ಲಕ್ಷಗಳ ಮಿತಿಗೆ ಒಳಪಟ್ಟು ಪ್ರಕರಣಗಳ ಆಧಾರದ ಮೇಲೆ ಅರಿವು ಮೂಡಿಸುವ ಬಗೆಗಿನ ವೆಚ್ಚವನ್ನು ಮರುಪಾವತಿ ಮಾಡತಕ್ಕದ್ದು.**

| ಕ್ರಮ ಸಂಖ್ಯೆ | ಘಟಕಾಂಶಗಳ ವೆಚ್ಚ | ಅನುಮತಿಸಬಹುದಾದ ನಿಧಿ |
|---|---|---|
| 1 | ಆಲ್ ಇಂಡಿಯಾ ರೇಡಿಯೋ, ದೂರದರ್ಶನ, ಗಾಯನ ಮತ್ತು ನಾಟಕ ವಿಭಾಗ ಇತ್ಯಾದಿಗಳ ಮೂಲಕ ಹಲವಾರು ಶ್ರವ್ಯ ಮತ್ತು ದೃಶ್ಯ ವಿಷಯಗಳ ಪ್ರಚಾರ ಮತ್ತು ಪ್ರಸಾರದ ವೆಚ್ಚ. | ರೂ. 7.00 ಲಕ್ಷಗಳು |
| 2 | ಸ್ಥಳೀಯ ಪತ್ರಿಕೆಗಳ ಮೂಲಕ ಪ್ರಚಾರ | ರೂ. 1.00 ಲಕ್ಷ |
| 3 | ಪ್ರಯಾಣದ ವೆಚ್ಚವನ್ನು ಒಳಗೊಂಡಂತೆ ಜಾನಪದ ಹಾಗೂ ಸಾಂಸ್ಕೃತಿಕ ತಂಡಗಳ ಮೂಲಕ ನಡೆಯುವ ಪ್ರದರ್ಶನದ ವೆಚ್ಚ | ರೂ.2.00 ಲಕ್ಷಗಳು |
| | **ಒಟ್ಟು ಮೊತ್ತ** | **ರೂ.10.00 ಲಕ್ಷಗಳು.** |

## ಅನುಬಂಧ – I

**ಜೀತಕಾರ್ಮಿಕರ ಪುನರ್ವಸತಿಗಾಗಿ ಕೇಂದ್ರವಲಯ ಯೋಜನೆ-2016 ಜೀತಕಾರ್ಮಿಕರ ವಿವರಗಳಿಗಾಗಿ ಪರಿಷ್ಕೃತ ನಮೂನೆ**

**I. ಗುರುತಿನ ವಿವರಗಳು**

| | |
|---|---|
| I | ಹೆಸರು: |
| II | ತಂದೆ/ ತಾಯಿ ಹೆಸರು: |
| III | ಲಿಂಗ: ಗಂಡು/ ಹೆಣ್ಣು/ ಇತರೆ |
| IV | ವಯಸ್ಸು |
| V | ವಿಶೇಷ/ ಇತರ ಪ್ರವರ್ಗವೇ: ಹೌದು/ ಇಲ್ಲ |
| VI | ವಿಕಲಚೇತನರೇ: ಹೌದು/ ಇಲ್ಲ |
| VII | ಹೌದಾದರೆ, ಅದರ ವಿವರಗಳು: |
| VIII | ಗ್ರಾಮ: |

| | |
|---|---|
| IX | ತಾಲ್ಲೂಕು: |
| X | ಬ್ಲಾಕ್: |
| XI | ಜಿಲ್ಲೆ: |
| XII | ರಾಜ್ಯ: |
| XIII | ಆಧಾರ್ ಮತ್ತು UWIN-Unrecognised Workers Identification No. (ಎನ್‌ಎಸ್‌ಎಸ್) ಸಂಖ್ಯೆ (ಲಭ್ಯವಿದ್ದರೆ): ಈ ಯೋಜನೆಯ ಕಂಡಿಕೆ 5 (iii) ಮತ್ತ 5(iv) ರಲ್ಲ ನಿರ್ದಿಷ್ಟಪದಿಸಿದ ವಿಶೇಷ/ ಇತರೆ ಪ್ರವರ್ಗ |

**II. ಕೌಟುಂಬಿಕ ಸದಸ್ಯರುಗಳ ವಿವರ:**

| ಕ್ರಮ ಸಂಖ್ಯೆ | ಹೆಸರು | ಪ್ರತಿವಾದಿಯ ಸಂಬಂಧ | ವಯಸ್ಸು | ಲಿಂಗ | ಶಿಕ್ಷಣ | ವೃತ್ತಿ | ಷರಾ |
|---|---|---|---|---|---|---|---|
| | | | | | | | |

**III. ವೃತ್ತಿಯ ವಿವರಗಳು:**

| | |
|---|---|
| I | ವೃತ್ತಿಯ ಸ್ವರೂಪ |
| II | ವೃತ್ತಿಯ ಅವಧಿ |
| III | ಎಲ್ಲಿಯಾದರೂ ಕೆಲಸಮಾಡಲು ಸಿದ್ಧರೇ ಅಥವಾ ಪ್ರಸ್ತುತ ಉದ್ಯೋಗದಾತರ ಕೆಲಸ ಬಿಡುವಿರಾ: ಹೌದು / ಇಲ್ಲ |
| IV | ಇಲ್ಲವಾದಲ್ಲಿ, ಕಾರಣಗಳನ್ನು ನಿರ್ದಿಷ್ಟಪಡಿಸಿ |

**IV. ಕೆಲಸದ ಸ್ಥಿತಿಗತಿಳು**

| | |
|---|---|
| I | ಉದ್ಯೋಗದಾತರು ನೀಡಲು ಒಪ್ಪಿಕೊಳ್ಳಲಾದ ಮಜೂರಿ |
| II | ವಸ್ತು ರೂಪದಲ್ಲಿ ಪಾವತಿಸಿದ ಮಜೂರಿ(ಪ್ರತಿದಿನ/ವಾರ/ತಿಂಗಳು/ವರ್ಷ) |
| III | ನಗದುರೂಪದಲ್ಲಿ ಪಾವತಿಸಿದ ಮಜೂರಿ(ಪ್ರತಿದಿನ/ವಾರ/ತಿಂಗಳು/ವರ್ಷ) |
| IV | ಉದ್ಯೋಗದಾತರಿಂದ ಸ್ವೀಕರಿಸಿದ ಯಾವುದೇ ನಗದೇತರ/ ವಸ್ತುವಿನ ರೂಪದಲ್ಲಿ ಪಡೆದ ಸವಲತ್ತು |
| V | ಕೆಲಸಕ್ಕೆ ಗೈರುಹಾಜರಿ ಅಥವಾ ಮಂದಗತಿಯ ಕೆಲಸಕ್ಕಾಗಿ ದಂಡನೆಯ ವಿವರಗಳು |
| VI | ದಿನದ ಕೆಲಸದ ಸಮಯ |

**V. ಜೀತದ ಸ್ವರೂಪ (ಮುಂಗಡ/ ಸಾಲದ ಬದಲಾಗಿ)**

| | |
|---|---|
| I | ಸಾಲ/ ಮಂಗಡ ಮೊತ್ತ(ನಗದು/ವಸ್ತು ರೂಪದಲ್ಲಿ): |
| II | ಬಡ್ಡಿಯ ದರ: |
| III | ಸಾಲ ಪಡೆದುಕೊಂಡಿದ್ದರ ಉದ್ದೇಶ: |
| IV | ಸಾಲ ಪಡೆದವನು ಮತ್ತು ಪ್ರತಿವಾದಿಯೊಂದಿಗೆ ಆತನ ಸಂಬಂಧ: |
| V | ಮರುಪಾವತಿಯ ವಿಧಾನ: |
| VI | ಸಾಲ ಪಡೆದುಕೊಂಡಿದ್ದಕ್ಕಾಗಿ ಕೆಲಸ ಮಾಡಿದ ವರ್ಷಗಳು: |
| VII | ಯಾವಾಗ ಸಾಲವನ್ನು ಬಡ್ಡಿಯೊಂದಿಗೆ ಮರುಪಾವತಿ ಮಾಡಲಾಗುವುದು? |
| VIII | ಕುಟುಂಬದ ಇನ್ಯಾರೇ ಸದಸ್ಯರು ಜೀತಕಾರ್ಮಿಕರಾಗಿರುವರೇ: ಹೌದು/ ಇಲ್ಲ ಹೌದಾದರೆ, ಆತ/ ಆಕೆಯ ವಿವರ ಸೂಚಿಸಿ: |

| ಹೆಸರು | ವಯಸ್ಸು | ಕೆಲಸದ ಅವಧಿ | ತೆಗೆದುಕೊಂಡ ಸಾಲ (ರೂಗಳಲ್ಲಿ) | ಬಡ್ಡಿ, ಯಾವುದಾದರೂ ಇದ್ದರೆ (ರೂಗಳಲ್ಲಿ) | ಕೆಲಸ ಮಾಡಿದ ಗಂಟೆಗಳು | ಪಾವತಿ ಮಾಡಿದ ಮಜೂರಿ (ರೂಗಳಲ್ಲಿ) |
|---|---|---|---|---|---|---|

**VI. ಸ್ವತ್ತಿನ ವಿವರಗಳು (ಜೀತಕಾರ್ಮಿಕನದು)**

| | |
|---|---|
| I | ಸ್ವಂತ ಭೂಮಿ: |
| II | ಹೈನು ಪ್ರಾಣಿಗಳು/ ಎತ್ತುಗಳು/ ಕುರಿ/ ಮೇಕೆ/ ಕೋಳಿಸಾಕಾಣಿಕೆ: |
| III | ಆತ/ ಆಕೆ ಸ್ವಂತ ಮನೆಯಲ್ಲಿ ವಾಸಿಸುತ್ತಿರುವರೇ ಅಥವಾ ಉದ್ಯೋಗದಾತರ ಭೂಮಿಯಲ್ಲಿ ವಾಸಿಸುತ್ತಿರುವರೇ: |
| IV | ಮನೆ ಸ್ವಂತದ್ದೇ ಅಥವಾ ಬಾಡಿಗೆಯದ್ದೇ: |
| V | ಶೈಕ್ಷಣಿಕ ಮಟ್ಟ: |

**VII. ಉದ್ಯೋಗದಾತರ ವಿವರಗಳು**

| | |
|---|---|
| I | ಹೆಸರು ಮತ್ತು ವಿಳಾಸ: |
| II | ತಂದೆ/ ತಾಯಿಯ ಹೆಸರು: |
| III | ವೃತ್ತಿ: |
| IV | ಈ ಉದ್ಯೋಗದಾತನ ಅಧೀನದಲ್ಲಿರುವ ಜೀತಕಾರ್ಮಿರ ಸಂಖ್ಯೆ: |
| V | ಆಧಾರ್ ಸಂಖ್ಯೆ: |
| VI | ಜಾಗೃತ ಸಮಿತಿಗೆ ವರದಿ ಸಲ್ಲಿಸಿದಂತೆ ಉದ್ಯೋಗದಾತನು ಹೊಡೆದಿರುವ/ ದೌರ್ಜನ್ಯ ಹಿಂಸೆ ಎಸಗಿರುವ ಯಾವುದೇ ಘಟನೆ(ದಯವಿಟ್ಟು ನಿರ್ದಿಷ್ಟಪಡಿಸಿ): |

**VIII. ಬಿಡುಗಡೆ ಮತ್ತು ಪುನರ್ವಸತಿ**

| | |
|---|---|
| I | ಪ್ರತಿವಾದಿಯು ಜೀತ ಪದ್ಧತಿ (ನಿರ್ಮೂಲನಾ) ಅಧಿನಿಯಮ ಉಪಬಂಧಗಳ ಬಗೆಗೆ ಅರಿವು ಹೊಂದಿರುವರೇ: |
| II | ಪ್ರತಿವಾದಿಯು ಜೀತಕಾರ್ಮಿಕರ ಪುನರ್ವಸತಿ ಯೋಜನೆಯ ಅರಿವು ಹೊಂದಿರುವರೇ: |
| III | ಪ್ರತಿವಾದಿಯು ಈ ಹಿಂದೆ ಜೀತ ಪದ್ಧತಿ (ನಿರ್ಮೂಲನಾ) ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ ಬಿಡುಗಡೆಯಾಗಿರುವರೇ: |
| IV | ಪ್ರತಿವಾದಿಯು ಜೀತ ಪದ್ಧತಿ (ನಿರ್ಮೂಲನಾ) ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ ಪ್ರಯೋಜನ ಪಡೆದಿದ್ದಾರೆಯೇ: |

**ಸತ್ಯಾಪನೆ**

**ಮೇಲ್ಕಂಡ ಪ್ರಶ್ನಾವಳಿಯಲ್ಲಿ ನಿರೂಪಿಸಲಾದ ಅಂಶಗಳು ಪ್ರತಿವಾದಿಯು ಒದಗಿಸಿದ ಮಾಹಿತಿಗೆ ಸರಿಯಾಗಿದ್ದು, ಅದನ್ನು ಆತನ ಮತೃಭಾಷೆಯಲ್ಲಿಯೇ ಓದಿ ಹೇಳಲಾಗಿದೆ ಮತ್ತು ವಿವರಿಸಲಾಗಿದೆ.**

**ದಿನಾಂಕ:** **ಗಣತಿದಾರನ ಸಹಿ**

**ಸ್ಥಳ:** **(ಹೆಸರು)**

## ಅನುಬಂಧ – II

## ಜೀತಕಾರ್ಮಿಕರ ಪುನರ್ವಸತಿಗಾಗಿ ಕೇಂದ್ರವಲಯ ಯೋಜನೆ–2016 ಜೀತಕಾರ್ಮಿಕರ ಪುನರ್ವಸತಿಗಾಗಿ ಕೇಂದ್ರದ ನೆರವಿನ ಬಿಡುಗಡೆಗಾಗಿ ಪ್ರಸ್ತಾವನೆ:

i. ಪುನರ್ವಸತಿಯ ಅವಶ್ಯಕತೆಯಿರುವ ಕಾರ್ಮಿಕರ ಸಂಖ್ಯೆ: (ಪುನರ್ವಸತಿಗಾಗಿನ ಪ್ರತಿಯೊಬ್ಬ ಜೀತಕಾರ್ಮಿಕರಿಗಾಗಿ ಬಿಡುಗಡೆ ಪ್ರಮಾಣಪತ್ರವನ್ನು ಲಗತ್ತಿಸಬೇಕು)

ii General, OBC, SC ಮತ್ತು ST ಫಲಾನುಭವಿಗಳ ಪ್ರವರ್ಗವಾರು ವಿಂಗಡಣೆ ಮತ್ತು ವಯಸ್ಕ ಪುರುಷ, ಮಹಿಳೆ, ತೃತಿಯಲಿಂಗಿಗಳು, ವಿಕಲಚೇತನರು, ಅಪ್ರಾಪ್ತ ಬಾಲಕರು, ಅಪ್ರಾಪ್ತ, ಬಾಲಕಿಯರು, ಹೀಗೆ ವಿಶೇಷ ವರ್ಗದಿಂದ ಬಿಡುಗಡೆಯಾದವರ ಸಂಖ್ಯೆಗಳನ್ನು ಈ ಕೆಳಕಂಡ ಕೋಷ್ಟಕದಂತೆ ನೀಡುವುದು.

| ಕ್ರಮ ಸಂಖ್ಯೆ | ಲಿಂಗ | ವಿಶೇಷ ಪ್ರವರ್ಗ | ಸಂಖ್ಯೆ |
|---|---|---|---|
| 1 | ಪುರುಷ | ವಯಸ್ಕ | |
| | | 18 ವರ್ಷಕ್ಕಿಂತ ಕೆಳಗಿನ ಬಾಲಕರು | |
| | | ಒಟ್ಟು | |
| 2 | ಮಹಿಳೆ | ವಯಸ್ಕ | |
| | | 18 ವರ್ಷಕ್ಕಿಂತ ಕೆಳಗಿನ ಬಾಲಕಿಯರು | |
| | ಒಟ್ಟು | | |
| 3 | ಕಂಡಿಕೆ 5(iii) ಮತ್ತು 5(iv) ರಲ್ಲಿ ನಿರ್ದಿಷ್ಟಪಡಿಸಿದಂತೆ ವಿಶೇಷ/ ಇತರ ಪ್ರವರ್ಗಗಳು | ವಯಸ್ಕ ಪುರುಷ | |
| | | ವಯಸ್ಕ ಮಹಿಳೆ | |
| | | 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು | |
| | | ವಿಕಲ ಚೇತನ ವ್ಯಕಿಗಳು | |
| | | ತೃತಿಯ ಲಿಂಗಿಗಳು | |
| | ಒಟ್ಟು | | |

"ವಿಕಲಚೇತನ ವ್ಯಕ್ತಿ" ಎಂದರೆ ವೈದ್ಯಕೀಯ ಪ್ರಾಧಿಕಾರದ ಮೂಲಕ ಪ್ರಮಾಣೀಕರಿಸಿದ ಶೇಕಡ ನಲವತ್ತಕ್ಕಿಂತ ಕಡಿಮೆಯಲ್ಲದ ಯಾವುದೇ ವಿಕಲತೆಯಿಂದ ಬಳಲುತ್ತಿರುವ ವ್ಯಕ್ತಿ. ವೈದ್ಯಕೀಯ ಪ್ರಾಧಿಕಾರ ಎಂದರೆ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಅನುದಾನ ಪಡದ ಆಸ್ಪತ್ರೆ.

iii. **ಅವಶ್ಯಕವಾಗಿರುವ ಕೇಂದ್ರ ನೆರವಿನ ಒಟ್ಟು ಮೊತ್ತ:**

| ಕ್ರಮ ಸಂಖ್ಯೆ | ಪ್ರವರ್ಗ | ಒಟ್ಟು ಸಂಖ್ಯೆ | ಜೀತಕಾರ್ಮಿಕ ಯೋಜನೆಯ ಅನ್ವಯ ನಿರ್ದಿಷ್ಟಪಡಿಸಿದ ಮಿತಿ (ರೂ.ಗಳಲ್ಲಿ) (ಸಾವಿರಗಳಲ್ಲಿ) | ಒಟ್ಟು ಮೊತ್ತ |
|---|---|---|---|---|
| 1 | ವಯಸ್ಕ ಪುರುಷ | | | |
| | ವಯಸ್ಕ ಮಹಿಳೆ/ ಅಪ್ರಾಪ್ತ ಬಾಲಕರು ಮತ್ತು ಬಾಲಕಿಯರು | | | |
| | ಕೇಂದ್ರ ಮಾರ್ಗಸೂಚಿಯ ಕಂಡಿಕೆ 5(iii) ಮತ್ತು 5(iv) ರಲ್ಲಿ ನಿರ್ದಿಷ್ಟಪಡಿಸಿದಂತೆ ವಿಶೇಷ/ ಇತರ ಪ್ರವರ್ಗಗಳು | | | |

| | | | | |
|---|---|---|---|---|
| | ಒಟ್ಟು | | | |
| | ಜೀತಕಾರ್ಮಿಕರ ಪುನರ್ವಸತಿ ನಿಧಿಯಲ್ಲಿ ಅನುಧಾನ ಲಭ್ಯವಿರುವ ಬಾಕಿ | | | |

ಕನಿಷ್ಠ 10.00 ಲಕ್ಷ ರೂಪಾಯಿಗಳ ಮೂಲನಿಧಿಯಾಗಿರುವ ಜೀತಕಾರ್ಮಿಕ ಪುನರ್ವಸತಿ ನಿಧಿಯನ್ನು ಪುನರ್ವಸತಿ ಪಡೆದ ಜೀತಕಾರ್ಮಿಕರಿಗೆ ತಕ್ಷಣದ ಆರ್ಥಿಕ ನೆರವು ಒದಗಿಸಲು ಬಳಸತಕ್ಕದ್ದು.

### vi. ಈ ಜೀತಕಾರ್ಮಿಕರನ್ನು (ಪ್ರವರ್ಗವಾರು) ಪತ್ತೆಹಚ್ಚಲಾದ ಜಿಲ್ಲೆ (ಗಳ) ಹೆಸರು:

| ಕ್ರಮ ಸಂಖ್ಯೆ | ಜಿಲ್ಲೆ(ಗಳ) ಹೆಸರು | ರಾಜ್ಯ ಹೆಸರು | ಜೀತಕಾರ್ಮಿಕರ ಸಂಖ್ಯೆ | | |
|---|---|---|---|---|---|
| | | | ಗುರುತಿಸಲಾಗಿದೆ | ಬಿಡುಗಡೆಯಾದ | ಪುನರ್ವಸತಿ ಪಡೆದ |
| 1 | | | | | |
| 2.3 | | | | | |
| ಒಟ್ಟು | | | | | |

v. ಗುರುತಿಸಲಾದ ವಿಧಾನ:

vi. ಸಕ್ಷಮ ಪ್ರಾಧಿಕಾರ ಪುನರ್ವಸತಿ ಯೋಜನೆಯನ್ನು ರೂಪಿಸಿ– ಅನುಮೋದಿಸಿದೆಯೇ? (ಯೋಜನೆಯ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು)

vii. ರಾಜ್ಯ ಸರ್ಕಾರ/ ಕೇಂದ್ರಾಡಳಿತ ಪ್ರದೇಶವು ಒಗಿಸಿದ ನೆರವಿನ ವಿವರವಾದ ವರದಿ (ಜೀತಕಾರ್ಮಿಕರ ವಿವರವಾದ ಹೆಸರುಗಳೊಂದಿಗೆ ಘೋಷ್ವಾರೆಯನ್ನು ನೀಡುವುದು)

viii. ಈ ಹಿಂದಿನ ವರ್ಷಗಳಲ್ಲಿ ಬಿಡುಗಡೆಯಾದ ಕೇಂದ್ರದ ನೆರವಿಗೆ ಹಣ ಬಳಕೆ ಪ್ರಮಾಣ ಪತ್ರ ಬಾಕಿ ಇದೆಯೇ? ಹೌದು/ಇಲ್ಲ

ಹೌದಾದರೆ, ಬಾಕಿಯಿರುವ ಹಣಬಳಕೆ ಪ್ರಮಾಣಪತ್ರಗಳ ವಿವರಗಳನ್ನು ನೀಡುವುದು:

| ರಾಜ್ಯ / ಕೇಂದ್ರಾಡಳಿತ ಪ್ರದೇಶದ ಹೆಸರು | | | | | | |
|---|---|---|---|---|---|---|
| ಕ್ರಮ ಸಂಖ್ಯೆ | ಘೋಷ್ವಾರೆವಾರು ಸ್ವೀಕರಿಸಲಾದ ಕೇಂದ್ರದ ನೆರವು | ಜಿಲ್ಲೆಯ(ಗಳ) ಹೆಸರು | ಅನುದಾನ ಬಿಡುಗಡೆಯಾದ ವರ್ಷ | ಕೇಂದ್ರ ನೆರವಿನ ಮೊತ್ತ (ರೂ. ಗಳಲ್ಲಿ) | ಯಾವ ಮೊತ್ತಕ್ಕಾಗಿ ಬಳಕೆ ಪ್ರಮಾಣಪತ್ರ ಸಲ್ಲಿಸಲಾಗಿದೆ (ರೂ.ಗಳಲ್ಲಿ) | ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸದಿರಲು ಕಾರಣಗಳು |
| 1 | | | | | | |
| 2,3 ಹೀಗೆ | | | | | | |
| ಒಟ್ಟು | ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಹೆಸರು | | | | | |

## ಜೀತಕಾರ್ಮಿಕರ ಪುನರ್ವಸತಿಗಾಗಿ ಕೇಂದ್ರವಲಯ ಯೋಜನೆ-2016

# ಬಿಡುಗಡೆ ಪ್ರಮಾಣಪತ್ರ ನಮೂನೆ- ಜೀತದಾಳು ಮೊಕದ್ದಮೆ ಸಂಖ್ಯೆ.......... ಜೀತಕಾರ್ಮಿಕ ಪದ್ಧತಿ (ನಿರ್ಮೂಲನೆ) ಅಧಿನಿಯಮ, 1976ರ 12ನೇ ಪ್ರಕರಣದ ಮೇರೆಗೆ JMFC/JMSC ಯ ಆದೇಶ)

| | |
|---|---|
| 1 | ಹೆಸರು: |
| 2 | ತಂದೆ/ ತಾಯಿಯ ಹೆಸರು: |
| 3 | ವಯಸ್ಸು: |
| 4 | ವಿಶೇಷ ಪ್ರವರ್ಗದವರೇ*: ಹೌದು/ ಇಲ್ಲ |
| 5 | ಹೌದಾದರೆ, ಅದರ ವಿವರ: |
| 6 | ದೈಹಿಕ ಅಂಗವಿಕಲರೇ*: ಹೌದು / ಇಲ್ಲ |
| 7 | ಹೌದಾದರೆ, ಅದರ ವಿವರ: |
| 8 | ಜೀತಕಾರ್ಮಿಕ ಪತ್ತೆಯಾದ ಸ್ಥಳ: |
| 9 | ಪುರುಷ/ಮಹಿಳೆ/ ತೃತಿಯ ಲಿಂಗಿ: |
| 10 | ಧರ್ಮ, ಜಾತಿ ವಿವರ: |
| 11 | ಆಧಾರ್/ ಯುಡಬ್ಲ್ಯೂಐಎನ್(ಎನ್ಎಸ್ಎಸ್) ಸಂ. (ಲಭ್ಯವಿದ್ದರೆ): |
| 12 | ಐಎಫ್ಎಸ್‌ಸಿ ಕೋಡ್‌ನೊಂದಿಗೆ ಜನಧನ್ ಖಾತೆ ಸಂಖ್ಯೆ: |
| 13 | ಜೀತಕಾರ್ಮಿಕನ ವಿಳಾಸ: |
| 14 | ವಶದಲ್ಲಿಟ್ಟುಕೊಂಡವನ/ ಜೀತ ಮಾಲಿಕನ ಹೆಸರು: |
| 15 | ವಶದಲ್ಲಿಟ್ಟುಕೊಂಡವನ/ ಜೀತ ಮಾಲಿಕನ ಆಧಾರ್ ಸಂಖ್ಯೆ: |
| 16 | ವಶದಲ್ಲಿಟ್ಟುಕೊಂಡವನ/ ಜೀತ ಮಾಲಿಕನ ವಿಳಾಸ: |
| 17 | ಅಪರಾಧನಿರ್ಣಯ ಮತ್ತು ಬಿಡುಗಡೆ ಆದೇಶದ ದಿನಾಂಕ: |
| 18 | ಅಧ್ಯಾಯ VI ರ ಅಡಿಯಲ್ಲಿ ದಂಡನೆಯ ಪ್ರಮಾಣ: |
| 19 | ಪ್ರಕರಣ 6ರ ಅಡಿಯಲ್ಲಿ ತೀರುವಳಿಯಾದ ಋಣದ ಮೊತ್ತ: |
| 20 | ಪ್ರಕರಣ 7 ರ ಅಡಿಯಲ್ಲಿ ಮುಕ್ತಗೊಳಿಸಿದ ವ್ಯಾಪ್ತಿ ಮತ್ತು ಸ್ವರೂಪ: |

**ಬಿಡುಗಡೆಗೊಂಡ ಜೀತಕಾರ್ಮಿಕನ ಸಹಿ ಹೊಂದಿದ ಕಲರ್ ಪಾಸ್‌ಪೋರ್ಟ್ ಚಿತ್ರವನ್ನು ಈ ಅಂಕಣದಲ್ಲಿ ಅಂಟಿಸಬೇಕು**

......................... ದಿನಾಂಕದಂದು ನನ್ನ ಮೊಹರು ಹಾಗು ಸಹಿ ಹಾಕಿ ನೀಡಿರುತ್ತೇನೆ.

ಸಹಿ

ಹೆಸರು ಜಿಲ್ಲಾ ದಂಡಾಧಿಕಾರಿ/ಉಪ-ವಿಭಾಗೀಯ ದಂಡಾಧಿಕಾರಿ ಜಿಲ್ಲೆ..............ರಾಜ್ಯ.........................

# ಜೀತಕಾರ್ಮಿಕರ ಪುನರ್ವಸತಿಗಾಗಿ ಕೇಂದ್ರವಲಯ ಯೋಜನೆ-2016

| ಕ್ರಮ ಸಂಖ್ಯೆ | ಬಿಡುಗಡೆಗೊಂಡ ಜೀತಕಾರ್ಮಿಕರ ಹೆಸರು | ಬಿಡುಗಡೆ ಪ್ರಮಾಣಪತ್ರದ ಅನುಸಾರ ಜೀತ ಕಾರ್ಮಿಕರ ಮೊಕದ್ದಮೆಯ ಸಂಖ್ಯೆ ಮತ್ತು ದಿನಾಂಕ | ನಿಣೀತ ಅರೋಪಿ/ ಅಪರಾಧಿಗೆ ನೀಡಿದ ದಂಡನೆಯ ಪ್ರಮಾಣ | ಶೈಕ್ಷಣಿಕ ನೆರವಿನ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಒದಗಿಸಿದ ಪ್ರಯೋಜನಗಳು ಮತ್ತು ಅದರ ಹಣಕಾಸಿನ ಮೌಲ್ಯ ಮತ್ತು ನಗದು ಘಟಕಾಂಶ | | | | | | | ಜಿಲ್ಲಾ ಜೀತಕಾರ್ಮಿಕರ ಬಿಡುಗಡೆ ನಿಧಿಯ ಮೂಲಕ ಒದಗಿಸಿದ ತುರ್ತು ನಗದು ನೆರವು |
|---|---|---|---|---|---|---|---|---|---|---|---|
| | | | | ಮನೆ/ ವಸತಿ | ಕೃಷಿ ಭೂಮಿ | ಭೂ ಅಭಿವೃದ್ಧಿ | ಎಲ್ಲಾ/ ಡೈರಿ/ ಕುಕ್ಕುಟೋದ್ಯಮ ಇತ್ಯಾದಿ | ಲಘು ಅರಣ್ಯ ಉತ್ಪನ್ನಗಳು | ಪಡಿತರ | ಶೈಕಷಣಿಕ ನೆರವು | |
| 1 | | | | | | | | | | | |
| 2 | | | | | | | | | | | |
| 3 | | | | | | | | | | | |
| | | | | | | | | | | | |
| ಒಟ್ಟು | | | | | | | | | | | |

ಬಿಡುಗಡೆಗೊಂಡ ಜೀತಕಾರ್ಮಿಕರಿಗೆ ರಾಜ್ಯ/ ಜಿಲ್ಲಾಡಳಿತದ ಮೂಲಕ ಒದಗಿಸಿದ ನೆರವಿನ ವಿವರವಾದ ಘೋಷ್ವಾರೆ: ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಪತ್ರ ಸಂಖ್ಯೆ.................... ದಿನಾಂಕ..............ದ ಮೂಲಕ....................... ಮೊತ್ತವನ್ನು ಮಂಜೂರು ಮಾಡಿದೆ.

ಜಿಲ್ಲಾ ಎನ್‌ಸಿಎಲ್‌ಪಿ ಸೊಸೈಟಿ ಅಧ್ಯಕ್ಷ ಸಹಿ..........................

ಪದನಾಮ..........................

ರಾಜ್ಯ ಸರ್ಕಾರ/ಕೇಂದ್ರಾಡಳಿತ ಪ್ರದೇಶದ ಆಡಳಿತ

ದಿನಾಂಕ ..........................

ಮೊಹರು




ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಮಾ ಮಹಾದೇವನ್‌ರವರು ಮುಕ್ತಿ ಒಕ್ಕೂಟವನ್ನು ಕೋಲಾರದಲ್ಲಿ ಉದ್ಘಾಟಿಸಿದರು.

# ೮. ಜೀತಕಾರ್ಮಿಕರ ರಕ್ಷಣೆ, ಪುನರ್ವಸತಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ

# ೮. ಜೀತಕಾರ್ಮಿಕರ ರಕ್ಷಣೆ, ಪುನರ್ವಸತಿಯಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ

ಪ್ರಜಾ ಪ್ರಭುತ್ವ ವ್ಯವಸ್ಥೆಯಡಿ ಸಮಾಜದ ಅರ್ಹ ವರ್ಗಗಳಿಗೆ ಸರ್ಕಾರದ ಯೋಜನೆಗಳನ್ನು ಮುಟ್ಟಿಸುವ ಕೆಲಸವು ಬಹಳ ಮುಖ್ಯವಾಗಿದೆ. ಇದಕ್ಕೆ ಅವಶ್ಯವಿರುವ ಇಲಾಖೆಗಳು, ಅಧಿಕಾರಿ ಮತ್ತು ಸಿಬ್ಬಂಧಿ ವರ್ಗಗಳ ಸಂಖ್ಯೆ ಕಡಿಮೆ ಇದೆ. ಈ ಕೆಲಸದಲ್ಲಿ ಸರ್ಕಾರಕ್ಕೆ ಎಲ್ಲಾ ಹಂತಗಳಲ್ಲೂ ಕೈಜೋಡಿಸುವ ಕೆಲಸವನ್ನು ಸರ್ಕಾರೇತರ ಸಂಸ್ಥೆಗಳು ಮಾಡುತ್ತಿವೆ.

ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಆರೋಗ್ಯವಂತ ಸಮಾಜವೆಂಬ ಗಾಡಿಯ ಎರಡು ಚಕ್ರಗಳಿದ್ದಂತೆ ಎಂದರೆ ಅತಿಶಯವಾಗಲಾರದು. ಈ ಎರಡೂ ಶಕ್ತಿಗಳು ಜೊತೆಯಾಗಿ ಸಾಗಿದರೆ ಸಮಾಜದ ಯಾವ ಸಮಸ್ಯೆಯನ್ನಾದರೂ ನಿರ್ಮೂಲನೆ ಮಾಡಲು ಸಾಧ್ಯವೆಂಬುದು ಸತ್ಯದ ಮಾತು.

ಸರ್ಕಾರೇತರ ಸಂಸ್ಥೆಗಳು ಯಾವುದೇ ಲಾಭಕ್ಕೆ ದುಡಿಯದೇ ಸಮಾಜದ ಸುಧಾರಣೆಯನ್ನು ಗುರಿಯಾಗಿರಿಸಿಕೊಂಡು, ಕಾನೂನಿನ ಚೌಕಟ್ಟಿನೊಳಗೆ ಬಹಳ ಸಾರಿ ಸ್ವತಂತ್ರವಾಗಿ ಇನ್ನು ಕೆಲವೊಮ್ಮೆ ಸರ್ಕಾರದೊಂದಿಗೆ ಕೈಜೋಡಿಸಿ ದುಡಿಯುತ್ತವೆ.

ಜೀತಪದ್ದತಿ ನಿರ್ಮೂಲನೆ ಮತ್ತು ಜೀತದಾಳುಗಳ ಬಿಡುಗಡೆ, ಪುನರ್ವಸತಿಯ ಕುರಿತು ಇದೇ ವಿಷಯವಾಗಿ ಪರಿಣಿತಿ ಹಾಗೂ ಅನುಭವ ಹೊಂದಿದ ಸರ್ಕಾರೇತರ ಸಂಸ್ಥೆಗಳ ಪಾತ್ರ:

| | |
|---|---|
| 1. | ಜೀತಕಾರ್ಮಿಕರ ಸಮೀಕ್ಷೆ ನಡೆದಾಗ ಸರ್ಕಾರ ಹಾಗೂ ಸ್ಥಳೀಯ ಆಡಳಿತ ಪ್ರಾಧಿಕಾರಗಳು ಸೂಚಿಸುವ ಸರ್ಕಾರೇತರ ಸಂಸ್ಥೆಗಳು ಸಮೀಕ್ಷಾ ತಂಡದಲ್ಲಿ ಪಾತ್ರ ವಹಿಸುವುದು. |
| 2. | ಸಮೀಕ್ಷಾ ತಂಡಗಳಿಗೆ ತರಬೇತಿ ನೀಡುವಲ್ಲಿ ಸರ್ಕಾರೇತರ ಸಂಸ್ಥೆಗಳು ಅವರುಗಳ ಅನುಭವ ಹಾಗೂ ವಿಧಾನವನ್ನು ಹಂಚಿಕೊಳ್ಳುವುದು. |
| 3. | ಜೀತಕಾರ್ಮಿಕರ ರಕ್ಷಣಾ ಸಮಯದಲ್ಲಿ ರಕ್ಷಣಾ ತಂಡದ ಭಾಗವಾಗಿ ಜೀತದಾಳುಗಳ ರಕ್ಷಣೆಯನ್ನು ಮಾಡುವುದು ಹಾಗೂ ಅಭಿಯೋಜನೆ/ವಿಚಾರಣೆ ಸಮಯದಲ್ಲಿ ಸಾಕ್ಷಿಗಳಾಗಿ ವಿಚಾರಣೆಯಲ್ಲಿ ಪಾಲ್ಗೊಳ್ಳುವುದು. |
| 4. | ಜೀತ ಕಾರ್ಮಿಕರ ಪದ್ಧತಿ(ರ) ಕಾಯ್ದೆ, 1976ರ ಕಲಂ 13 ಮತ್ತು 14ರಲ್ಲಿ ಉಲ್ಲೇಖಿಸಿರುವ ರೀತಿ ಜಿಲ್ಲಾ ಹಾಗೂ ಉಪವಿಭಾಗದ ಮಟ್ಟದ ಜಾಗೃತಿ ಸಮಿತಿ/ ವಿಚಕ್ಷಣಾ ಸಮಿತಿಗಳಲ್ಲಿ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಸಮಿತಿಯ ಸದಸ್ಯರಾಗಿ ಜೀತದಾಳುಗಳ ಗುರುತಿಸುವಿಕೆ , ಪುನರ್ವಸತಿ ಕಾರ್ಯಗಳ ಕುರಿತು ಕ್ರಮವಹಿಸುವುದು. |
| 5. | ಸರ್ಕಾರವು ನಡೆಸುವ ಅಧಿಕಾರಿಗಳ ಹಾಗೂ ಜನ ಪ್ರತಿನಿಧಿಗಳ ತರಬೇತಿ ಶಿಬಿರಗಳಲ್ಲಿ ಭಾಗವಹಿಸುವುದು ಮತ್ತು ಅವರುಗಳೊಂದಿಗೆ ವಿಷಯ-ಜ್ಞಾನ ಹಾಗೂ ಅನುಭವಗಳನ್ನು ಹಂಚಿಕೊಳ್ಳುವುದು. |
| 6. | ಜೀತ ನಿರ್ಮೂಲನೆ ಅಭಿಯಾನಗಳಲ್ಲಿ ಸ್ಥಳೀಯ ಮಟ್ಟದಲ್ಲಿ ಭಾಗವಹಿಸಿ ಜನರಿಗೆ ಜೀತ ಪದ್ಧತಿ ಕುರಿತ ಅರಿವು ಮೂಡಿಸುವ ಕಾರ್ಯವನ್ನು ಮಾಡುವುದು. |
| 7. | ಜೀತಕಾರ್ಮಿಕರ ಪುನರ್ವಸತಿ ಭಾಗವಾಗಿ ಜೀತದಾಳುಗಳಿಗೆ Micro-Finance (ಕಿರುಹಣಕಾಸು) ಬಗ್ಗೆ ಅರಿವು ಮೂಡಿಸಿ ಸ್ಥಳೀಯ ಸ್ವ-ಸಹಾಯ ಗುಂಪುಗಳಿಗೆ ಜೀತವಿಮುಕ್ತರು ಸೇರುವಂತೆ ಪ್ರೋತ್ಸಾಹ ನೀಡುವುದು, ಅವರುಗಳಿಗೆ ಆರ್ಥಿಕ ಉತ್ತೇಜನ ನೀಡುವಲ್ಲಿ ಸಹಕರಿಸುವುದು. |
| 8. | ಸರ್ಕಾರವು ಕೈಗೊಳ್ಳುವ ಮೌಲ್ಯಮಾಪನ, ಮಾಹಿತಿ ಸಂಕಲನಗಳ ಕಾರ್ಯಗಳಲ್ಲಿ ಸರ್ಕಾರಕ್ಕೆ ಮಾಹಿತಿ ನೀಡುವುದು ಹಾಗೂ Inputs ನೀಡುವುದು. |

ಒಟ್ಟಾರೆ ಸರ್ಕಾರವು ಮಾಡಲಚ್ಚಿಸುವ ಎಲ್ಲಾ ಪ್ರಯತ್ನಗಳಿಗೆ ಸಕಾರಾತ್ಮಕವಾಗಿ ಸ್ಪಂಧಿಸುವುದು ಹಾಗೂ ಸರ್ಕಾರದ ಜೊತೆಗೆ ಜೀತವಿಮುಕ್ತರ ಜೀವನ ಸುಧಾರಣೆಗೆ ಶ್ರಮಿಸುವ ಕಾರ್ಯವನ್ನು ಸರ್ಕಾರೇತರ ಸಂಸ್ಥೆಗಳು ಮಾಡಬೇಕಾಗಿದೆ.

ಸರ್ಕಾರೇತರ ಸಂಸ್ಥೆಗಳ ಪಾತ್ರದ ಬಗ್ಗೆ ವಿಚಾರ ಮಾಡಿದ ನಂತರ ನಮ್ಮ ರಾಜ್ಯದಲ್ಲಿ ಜೀತ ಪದ್ಧತಿ ನಿರ್ಮೂಲನೆ ಹಾಗೂ ಜೀತದಾಳುಗಳ ಜೀವನ ಸುಧಾರಣೆಗೆ ಶ್ರಮಿಸುತ್ತಿರುವ ಸರ್ಕಾರೇತರ ಸಂಸ್ಥೆಗಳ ಕುರಿತು ಮುನ್ನೋಟ– ಜೀತಪದ್ಧತಿಯ ನಿರ್ಮೂಲನೆ, ಜೀತಕಾರ್ಮಿಕರ ಗುರುತಿಸುವಿಕೆ, ರಕ್ಷಣೆ, ಅವರುಗಳ ಪುನರ್ವಸತಿ ಮತ್ತು ಜೀತಕಾರ್ಮಿಕರ ಪದ್ಧತಿ(ರ) ಕಾಯ್ದೆ 1976ರ ಅನುಷ್ಠಾನದ ವಿವಿಧ ಹಂತಗಳಲ್ಲಿ ಸರ್ಕಾರದ ಜೊತೆಗೆ ಸಮನಾಗಿ ಸರ್ಕಾರೇತರ ಸಂಸ್ಥೆಗಳು ಆಸಕ್ತಿವಹಿಸಿ ಕೆಲಸಮಾಡುತ್ತಿವೆ. ಜೀತದಾಳುಗಳ ಬಿಡುಗಡೆ , ಪುನರ್ವಸತಿಯಲ್ಲಿ ಕರ್ನಾಟಕ ಸರ್ಕಾರದೊಂದಿಗೆ ಸಮನಾಗಿ ಶ್ರಮಿಸಿರುವ ಎರಡು ಪ್ರಮುಖ ಸಂಸ್ಥೆಗಳೆಂದರೆ ಜೀವಿಕಾ ಸಂಸ್ಥೆ ಮತ್ತು International Justice Mission, Bangalore ಸಂಸ್ಥೆಗಳು.

ಜೀವಿಕಾ ಸಂಸ್ಥೆಯು ಕೆಲವು ದಶಕಗಳಿಂದ ಕರ್ನಾಟಕ ರಾಜ್ಯದಲ್ಲಿ ಜೀತದಾಳುಗಳ ಸಮಸ್ಯೆಗೆ ಸ್ಪಂದಿಸುತ್ತಾ ಬಂದಿರುತ್ತದೆ ಸದರಿ ಸಂಸ್ಥೆಯು ಗ್ರಾಮೀಣ ಭಾಗಗಳಲ್ಲಿ ಸಾಂಪ್ರದಾಯಿಕ ಜೀತ ಕಾರ್ಮಿಕರ (ಕೃಷಿ ಕ್ಷೇತ್ರ ಹಾಗೂ ಕೃಷಿ ಅವಲಂಬಿತ ಕ್ಷೇತ್ರ) ನ್ನು ಗುರುತಿಸುವಲ್ಲಿ, ಬಿಡುಗಡೆಗೊಳಿಸುವಲ್ಲಿ ಅವರುಗಳಿಗೆ ಪುನರ್ವಸತಿ ಕಲ್ಪಿಸುವಲ್ಲಿ ಮುಂಚೂಣಿಯ ಪಾತ್ರವನ್ನು ವಹಿಸಿದೆ. ಈ ಸಂಸ್ಥೆಯ ಸಂಚಾಲಕರಾದ ಶ್ರೀ ಕಿರಣ್ ಕಮಲ್ ರವರು ರಾಜ್ಯ ಮಟ್ಟದ ಶಿವಾಜಿ ಗಣೇಶನ್ ಸಮಿತಿಯ ಸದಸ್ಯರೂ ಸಹ ಆಗಿದ್ದರೂ. ಈ ಸಮಿತಿಯು ರಾಜ್ಯದಲ್ಲಿ ಜೀತದಾಳುಗಳ ಸಮಸ್ಯೆಗಳ ಕುರಿತು ಅಧ್ಯಯನ ನಡೆಸಿ ಶಿಫಾರಸ್ಸುಗಳನ್ನು ಸಹಾ ಮಾಡಿದೆ.

ಜೀವಿಕಾ ಸಂಸ್ಥೆಯ ದೂರವಾಣಿ–080–23210194, ಮಿಂಚಂಚೆ– jeevika90@gmail.com.

International Justice Mission (IJM), Bangalore ಸರ್ಕಾರೇತರ ಸಂಸ್ಥೆಯು 15+ ವರ್ಷಗಳಿಂದ ಸರ್ಕಾರದ ಜೊತೆಗೆ ನಿರಂತರವಾಗಿ ಜೀತದಾಳುಗಳ ಹಿತವನ್ನು ಕಾಪಾಡುವಲ್ಲಿ ಕೈಜೋಡಿಸಿದೆ. ಸದರಿ ಸಂಸ್ಥೆಯು ಮುಖ್ಯವಾಗಿ ವಲಸೆ ಜೀತ ಕಾರ್ಮಿಕರ ಸಂಕಷ್ಟಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುತ್ತಿದೆ. ಕೃಷಿಯೇತರ ವಲಯಗಳಲ್ಲಿ ಅಂದರೆ– ಇಟ್ಟಿಗೆ ಕಾರ್ಖಾನೆ, ಗುಡಿ ಕೈಗಾರಿಕೆ, ಗಣಿ, ಕಟ್ಟಡ ಉದ್ಯಮ, ಇಂತಹ ಕ್ಷೇತ್ರಗಳಲ್ಲಿ ಸಿಲುಕಿರುವ ಕಾರ್ಮಿಕರ ರಕ್ಷಣೆಯಲ್ಲಿ ಹಾಗೂ ಅವರುಗಳ ಪ್ರತ್ಯಾವರ್ತನೆಯಲ್ಲಿ ಸರ್ಕಾರದೊಂದಿಗೆ ಸತತವಾಗಿ ಕೈ ಜೋಡಿಸಿದೆ.

International Justice Mission (IJM), Bangalore ಮಿಂಚಂಚೆ– wchristopher@ijm.org., ಸಂಪರ್ಕ ಸಂಖ್ಯೆ– ಶ್ರೀ ವಿಲಿಯಮ್, +91–9900078061.

ಜೀವಿಕಾ ಸಂಸ್ಥೆ ಮತ್ತು International Justice Mission (IJM), Bangalore ಇವರೆಡು ಸಂಸ್ಥೆಗಳು ರಾಜ್ಯ ಮಟ್ಟದ ಜೀತದಾಳುಗಳ ಉನ್ನತ ಸಮಿತಿಯಲ್ಲಿ ಶಾಶ್ವತ ಸದಸ್ಯತ್ವವನ್ನು ಹೊಂದಿದ್ದು ಸರ್ಕಾರದ ನಿರ್ಧಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸುವರು.

ಇತ್ತೀಚೆಗೆ ಅಂದರೆ 2019ರಲ್ಲಿ ಜೀತ ಕಾರ್ಮಿಕರ, ವಲಸೆ ಕಾರ್ಮಿಕರ, ಮಾನವ ಕಳ್ಳ ಸಾಗಾಣಿಕೆ ಮೂಲಕ ಅಕ್ರಮ ಕೆಲಸಗಳಿಗೆ ದೂಡಲ್ಪಡುವ ಕಾರ್ಮಿಕರ ರಕ್ಷಣೆಗೆ ಹಾಗೂ ಮಾನವ ಹಕ್ಕುಗಳ ರಕ್ಷಣೆಗೆ 60 ಸರ್ಕಾರೇತರ ಸಂಸ್ಥೆಗಳು ಒಗ್ಗೂಡಿ ಮುಕ್ತಿ ಒಕ್ಕೂಟವನ್ನು ಸ್ಥಾಪಿಸಿವೆ. ಸದರಿ ಒಕ್ಕೂಟದ ಉದ್ಘಾಟನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಲ್.ಕೆ.ಅತೀಕ್, ಭಾಆಸೇ ಮತ್ತು ಪಂಚಾಯತ್ ರಾಜ್ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಮಾ ಮಹದೇವನ್, ಭಾಆಸೇ ರವರು ನೆರವೇರಿಸಿದರು. ಸದರಿ ಒಕ್ಕೂಟವು ತನ್ನ ಸಂಪರ್ಕಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡು ರಾಜ್ಯದ ಯಾವ ಮೂಲೆಯಲ್ಲಿ ಜೀತ ಪ್ರಕರಣ ಅಥವಾ ಮಾನವ ಅಕ್ರಮ ಸಾಗಾಣಿಕೆ ನಡೆದರೆ ಅದನ್ನು ಸ್ಥಳೀಯ ಆಡಳಿತದ ಸಹಭಾಗಿತ್ವದೊಂದಿಗೆ ಗುರುತಿಸಿ ಸಮಸ್ಯೆ ನೀಗಿಸುವ ಕಂಕಣಬದ್ಧತೆ ಬಿಂಬಿಸಿವೆ ಹಾಗೂ ಇದೇ ಹಾದಿಯಲ್ಲಿ ಒಕ್ಕೂಟ ಕಾರ್ಯ ಪ್ರವೃತ್ತಿಯಾಗಿದೆ.





ಸಂತ್ರಸ್ತರ ಬಿಡುಗಡೆ
ಬೆಂಗಳೂರು ಕರ್ನಾಟಕ

# ೯. ಜೀತಕಾರ್ಮಿಕರ ರಕ್ಷಣೆ ಮತ್ತು ಪುನರ್ವಸತಿ–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಕಾರ್ಮಿಕ ಇಲಾಖೆಗಳ ಪಾತ್ರ.

# ೯. ಜೀತಕಾರ್ಮಿಕರ ರಕ್ಷಣೆ ಮತ್ತು ಪುನರ್ವಸತಿ– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಕಾರ್ಮಿಕ ಇಲಾಖೆಗಳ ಪಾತ್ರ.

ಜೀತ ಕಾರ್ಮಿಕರ ಪದ್ಧತಿ(ರ) ಕಾಯ್ದೆ, 1976ರ ಅನುಷ್ಠಾನದ ಹೊಣೆ ಮುಖ್ಯವಾಗಿ ಜಿಲ್ಲಾಧಿಕಾರಿಗಳಿಗೆ/ ಉಪ–ವಿಭಾಗೀಯ ಅಧಿಕಾರಿಗಳಿಗೆ ನೀಡಿರುವ ಕಾರಣ ಜೀತ ಪದ್ಧತಿ ನಿರ್ಮೂಲನೆಯಲ್ಲಿ ಜಿಲ್ಲಾಡಳಿತದ ಪಾತ್ರ ಪ್ರಧಾನವಾಗಿದೆ. ಬಹುಪಾಲು ಗ್ರಾಮೀಣ ಭಾಗದ ಕಾರ್ಮಿಕರೇ ಜೀತ ಪದ್ಧತಿಯಲ್ಲಿ ಸಿಲುಕಿಕೊಳ್ಳುವ ಸಾಧ್ಯತೆ ಹೆಚ್ಚಾಗಿರುವುದರಿಂದ ಇವರುಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಪುನರ್ವಸತಿ ನೀಡುವ ಜವಾಬ್ದಾರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆಯಡಿ ಬರುವ ಜಿಲ್ಲಾ ಪಂಚಾಯಿತಿಗಳಿಗೆ ನೀಡಲಾಗಿದೆ. ಉಳಿದಂತೆ ಕಾರ್ಮಿಕ ನೀತಿಗಳನ್ನು ಪರಿಣಾಮಕಾ–ರಿಯಾಗಿ ಜಾರಿ ಮಾಡಿ ಆ ಮೂಲಕ ಕಾರ್ಮಿಕರಿಗೆ ನ್ಯಾಯಯುತ ವೇತನ ದೊರಕಿಸಿಕೊಡುವ ಜವಾಬ್ದಾರಿ ಕಾರ್ಮಿಕ ಅಧಿಕಾರಿಗಳ ಮೇಲಿದೆ.

**ಜೀತ ಕಾರ್ಮಿಕರ ರಕ್ಷಣೆ ಮತ್ತು ಪುನರ್ವಸತಿಯಲ್ಲಿ ಜಿಲ್ಲಾಡಳಿತದ ಪಾತ್ರ:**

1. ನಿಯತಕಾಲಿಕವಾಗಿ ಜೀತದಾಳುಗಳ ಗಣತಿ ನಡೆಸಬೇಕು . ಗಣತಿ ನಡೆಸಲು ಸಮೀಕ್ಷಾ ತಂಡಗಳನ್ನು ರಚಿಸಿ ಅವುಗಳಿಗೆ ತರಬೇತಿ ನೀಡಬೇಕು.ಈ ಕುರಿತ ಹೆಚ್ಚುವರಿ ಮಾಹಿತಿಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ–ಗ್ರಾಅಪ/13/ ಆರ್‌ಬಿಎಲ್/2019, ದಿನಾಂಕ–5.2.2020 ರಲ್ಲಿ ತಿಳಿದುಕೊಳ್ಳಬಹುದಾಗಿದೆ.
2. ಜೀತ ಕಾರ್ಮಿಕರ ಗಣತಿಯನ್ನು ಕನಿಷ್ಠ 3 ವರ್ಷಗಳಿಗೊಮ್ಮೆಯಾದರೂ ನಡೆಸಬೇಕು. ಜೀತ ಕಾರ್ಮಿಕರ ಗಣತಿ ನಡೆಸಲು ಪ್ರತೀ ಜಿಲ್ಲೆಗೆ ರೂ.4.50 ಲಕ್ಷಗಳನ್ನು ನೀಡಲಾಗುವುದು. ಜೀತ ಕಾರ್ಮಿಕರ ಸಮೀಕ್ಷೆ ನಡೆಸಲು ಇಚ್ಛಿಸುವ ಜಿಲ್ಲೆಗಳು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ನೀಡಿರುವ ಪರಿಷ್ಕೃತ ಮಾರ್ಗಸೂಚಿಯ ನಿಗದಿತ ನಮೂನೆಯಲ್ಲಿ ಸರ್ಕಾರಕ್ಕೆ ಕಳುಹಿಸಬಹುದಾಗಿದೆ.
3. ಜೀತಕಾರ್ಮಿಕರ ಪ್ರಕರಣಗಳ ಬಗ್ಗೆ ಮಾಹಿತಿ ಬಂದಾಗ , ಸ್ಥಳ ತನಿಖೆ ನಡೆಯಿಸಿ, ಪ್ರಕರಣದ ತನಿಖೆಯನ್ನು ಮಾದರಿ ಕಾರ್ಯವಿಧಾನದಲ್ಲಿ ವಿವರಿಸಿರುವಂತೆ ನಡೆಸಿ ಜೀತದಾಳುಗಳನ್ನು ಬಿಡುಗಡೆಗೊಳಿಸಬೇಕು.
4. ಬಿಡುಗಡೆಗೊಳಿಸಲಾದ ಜೀತದಾಳುಗಳಿಗೆ ಬಿಡುಗಡೆ ಪ್ರಮಾಣ ಪತ್ರ ಮತ್ತು ತುರ್ತು ಪರಿಹಾರ (ರೂ.30,000/–) (w.e.f. 27.01.2022) ಗಳನ್ನು ವಿತರಿಸಿ ಅವರ ಸ್ವಂತ ಸ್ಥಳಕ್ಕೆ ಮರಳಿ ಕಳುಹಿಸಬೇಕು.
5. ವರ್ಷವಾರು ಜೀತಕಾರ್ಮಿಕರ ಬಿಡುಗಡೆ ವಹಿಯನ್ನು ನಿರ್ವಹಿಸಿ ಅದರಲ್ಲಿ ಜೀತ ವಿಮುಕ್ತರ ವಿವರ ಹಾಗೂ ತುರ್ತು ಪರಿಹಾರ ನೀಡಿರುವ ವಿವರಗಳನ್ನು ಕಡ್ಡಾಯವಾಗಿ ದಾಖಲಿಸಬೇಕು. ಪ್ರತೀ ಜಾಗೃತಿ ಸಮಿತಿ ಸಭೆ ನಡೆದಾಗ ಈ ವಿವರಗಳನ್ನು ಸಭೆಯ ಗಮನಕ್ಕೆ ತರಬೇಕು ಹಾಗೂ ಸರ್ಕಾರದಿಂದ ಅಧಿಕಾರಿಗಳು ತಪಾಸಣೆಗೆ ಬಂದಾಗ ವಹಿಯನ್ನು ನೀಡಬೇಕು.
6. ಸರ್ಕಾರವು ಪ್ರತೀ ವರ್ಷ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವ ತುರ್ತು ಪರಿಹಾರ/ ಕಾರ್ಪಸ್ ನಿಧಿಯನ್ನು ಸೆಳೆದು ಪಿ.ಡಿ. ಖಾತೆಯಲ್ಲಿ ನಿರ್ವಹಿಸಬೇಕು. ಯಾವುದೇ ಕಾರಣಕ್ಕೂ ಅನುದಾನ ವ್ಯಪಗತವಾಗದಂತೆ ಎಚ್ಚರ ವಹಿಸಬೇಕು.
7. ಜೀತ ಕಾರ್ಮಿಕರು ಬಿಡುಗಡೆ ಹೊಂದಿದಾಗ ಅವರಿಗೆ ಯಾವುದೇ ಗುರುತಿನ ಚೀಟಿ ಇಲ್ಲದಿದ್ದಾಗ, ಆಧಾರ್ ಗುರುತಿನ ಚೀಟಿಯನ್ನು ಜಿಲ್ಲಾಡಳಿತ ಕಛೇರಿಯಲ್ಲಿಯೇ ಕೊಡಿಸಿಕೊಡುವ ಕಾರ್ಯವನ್ನು ಮಾಡಬೇಕು. ಜೀತ ಕಾರ್ಮಿಕರ ಬಿಡುಗಡೆ ಪತ್ರವನ್ನೇ ಗುರುತಿನ ಚೀಟಿಯೆಂದು ಪರಿಗಣಿಸಿ ಬ್ಯಾಂಕ್ ಖಾತೆ ತೆರೆಸಲು ಕ್ರಮವಹಿಸಬೇಕು.
8. ವಲಸೆ ಜೀತ ಕಾರ್ಮಿಕರು ಪತ್ತೆಯಾದಾಗ ಅವರುಗಳನ್ನು ಸ್ವಂತ ಊರಿಗೆ ಮರಳಿ ಕಳುಹಿಸುವವರೆಗೂ ಸೂಕ್ತ ಪೋಲೀಸ್ ರಕ್ಷಣೆ, ವಸತಿ , ಆಹಾರ, ಪ್ರಯಾಣ ವೆಚ್ಚ ಒದಗಿಸುವ ಜವಾಬ್ದಾರಿಯನ್ನು ಜಿಲ್ಲಾಡಳಿತ ನೆರವೇರಿಸಬೇಕು. ಈ ಕಾರಣಕ್ಕಾಗಿ ಕಾರ್ಪಸ್ ನಿಧಿ ಅನುದಾನ ಬಳಸಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಸರ್ಕಾರದ ಅದೇಶ ಸಂಖ್ಯೆ: ಗ್ರಾಅಪ/19/ಆರ್‌ಬಿಎಲ್/2019, ಬೆಂಗಳೂರು, ದಿನಾಂಕ–2.1.2020ರಲ್ಲಿ ಅನುವು ಮಾಡಿಕೊಡಲಾಗಿದೆ.
9. ಬಿಡುಗಡೆಗೊಳಿಸಲಾದ ಜೀತ ಕಾರ್ಮಿಕರಿಗೆ ಚುನಾವಣಾ ಗುರುತಿನ ಚೀಟಿ, ರೇಷನ್ ಕಾರ್ಡ್ ವಿತರಿಸಲು ಸಂಬಂಧಿಸಿದ ಜಿಲ್ಲಾಡಳಿತ ಕ್ರಮವಹಿಸಬೇಕು. ಅಲ್ಲದೇ ಖಾಲಿ ಇರುವ, ಕೃಷಿಗೆ ಯೋಗ್ಯವಾದ ಸರ್ಕಾರಿ ಜಮೀನನ್ನು ಗುರುತಿಸಿ, ಕೃಷಿ ಮಾಡಲು ಇಚ್ಛಿಸುವ ಜೀತದಾಳುಗಳಿಗೆ ಇದನ್ನು ವಿತರಿಸಬೇಕು.
10. ಜಿಲ್ಲಾ ಹಾಗೂ ಉಪ–ವಿಭಾಗೀಯ ಮಟ್ಟದಲ್ಲಿ ಜಾಗೃತಿ ಸಮಿತಿಗಳನ್ನು ಪ್ರತೀ 2 ವರ್ಷಗಳಿಗೊಮ್ಮೆ ಜೀತ ಪದ್ಧತಿ(ರ) ಕಾಯ್ದೆ, 1976ರ ಸೆಕ್ಷನ್ 13(2) ಹಾಗೂ 13(3) ರನ್ವಯ ರಚಿಸಬೇಕು. ಪ್ರತೀ 3 ತಿಂಗಳಿಗೊಮ್ಮೆ ಸಮಿತಿಗಳ ಸಭೆಯನ್ನು ನಡೆಸಿ, ಜೀತದಾಳುಗಳ ಪ್ರಕರಣಗಳು ಹಾಗೂ ಪುನರ್ವಸತಿ ಪ್ರಗತಿಗಳ ಕುರಿತು ಚರ್ಚಿಸಬೇಕು. ನಡವಳಿಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕು.

11. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಸಲ್ಲಿಸಲು ಸರ್ಕಾರಕ್ಕೆ ಪ್ರತೀ ವರ್ಷ ಜೀತದಾಳುಗಳ ಅರ್ಧ ವಾರ್ಷಿಕ ಮಾಹಿತಿಯನ್ನು ನಿಗದಿತ ನಮೂನೆಗಳಲ್ಲಿ ತಪ್ಪದೇ ಕಳುಹಿಸಬೇಕು ಹಾಗೂ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯಕ್ಕೆ ಕಳುಹಿಸಬೇಕಿರುವ ತ್ರೈಮಾಸಿಕ ವರದಿಯನ್ನು ಸಹಾ ನಿಗದಿತ ನಮೂನೆಯಲ್ಲಿ ಕಳುಹಿಸಬೇಕು.

12. ಜಿಲ್ಲೆಯ ವ್ಯಾಪ್ತಿಯಲ್ಲಿ ನೋಂದಣಿಯಾಗಿರುವ ಎಲ್ಲಾ ಉದ್ಯಮಗಳ(ಗಣಿ, ಕ್ವಾರಿ, ಇಟ್ಟಿಗೆ ಕಾರ್ಖಾನೆ, ಜವಳಿ ಇತ್ಯಾದಿ) ದಾಖಲೆ ಇರುವ ವಹಿಯನ್ನು ನಿರ್ವಹಿಸಬೇಕು. ವಹಿಯಲ್ಲಿ ಸಂಸ್ಥೆಯ ವಿಳಾಸ, ಮಾಲೀಕರ ಹೆಸರು, ಗುರುತು, ಸಂಪರ್ಕ ಸಂಖ್ಯೆ, ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆಯನ್ನು ದಾಖಲಿಸಬೇಕು.

13. ಸುತ್ತೋಲೆ ಸಂಖ್ಯೆ– ಗ್ರಾಅಪ/6/ಆರ್‌ಬಿಎಲ್/2017, ದಿನಾಂಕ–4.7.2018ರಲ್ಲಿರುವ ರೀತಿ ಜಿಲ್ಲಾಧಿಕಾರಿಗಳು ಹಾಗೂ ಉಪ–ವಿಭಾಗಧಿಕಾರಿಗಳು ಅವರುಗಳಿಗೆ ಜೀತ ಕಾರ್ಮಿಕರಿಂದ ಸ್ವೀಕೃತಿಯಾಗುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಬೇಕು.

14. ಪ್ರತೀ ವರ್ಷ ವೆಚ್ಚವಾಗಿರುವ ಕಾರ್ಪಸ್ ನಿಧಿಯ ವಿವರಗಳನ್ನು ಫಲಾನುಭವಿವಾರು ಸರ್ಕಾರಕ್ಕೆ ಕಳುಹಿಸಬೇಕು. ಅದರಲ್ಲಿ ಫಲಾನುಭವಿಗೆ ನೀಡಿರುವ ತುರ್ತು ಪರಿಹಾರದ ಸ್ವೀಕೃತಿ/ ಚೆಕ್ ವಿವರ ಕಡ್ಡಾಯವಾಗಿ ನಮೂದು ಮಾಡಬೇಕು.

15. ವಲಸೆ ಕಾರ್ಮಿಕರು ಪತ್ತೆಯಾದ ಸಂದರ್ಭದಲ್ಲಿ ಅವರಿಗೆ ಬಿಡುಗಡೆ ಪ್ರಮಾಣ ಪತ್ರ ಹಾಗೂ ತುರ್ತು ಪರಿಹಾರವನ್ನು ವಿತರಿಸಿ ಅವರುಗಳನ್ನು ಮರಳಿ ಕಳುಹಿಸುವ ಸ್ವಂತ ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ಹಾಗೂ ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಜೀತ ವಿಮುಕ್ತರ ಮುಂದಿನ ಪುನರ್ವಸತಿಯ ಪ್ರಕ್ರಿಯೆಗಳನ್ನು ನೆರವೇರಿಸುವಂತೆ ಪತ್ರ ಬರೆಯಬೇಕು. ಅವಶ್ಯವಿದ್ದಲ್ಲಿ ಸೂಕ್ತ ಪೊಲೀಸ್ ಭದ್ರತೆಯನ್ನು ಸಹಾ ಒದಗಿಸುವಂತೆ ತಿಳಿಸಬೇಕು.

16. ಸ್ವಂತ ರಾಜ್ಯಕ್ಕೆ ಸೇರಿದ ಜೀತದಾಳುಗಳನ್ನು ಬಿಡುಗಡೆಗೊಳಿಸಿದಾಗ ಅವರುಗಳ ಬಿಡುಗಡೆ ಪತ್ರದ ಪ್ರತಿಯೊಂದಿಗೆ, ಕಾರ್ಯಚರಣೆ ಟಿಪ್ಪಣಿ ಮಾಡಿ ಸಂಬಂಧಿಸಿದ ಜಿಲ್ಲಾ ಪಂಚಾಯಿತಿಗೆ ಕಳುಹಿಸಿ ಪುನರ್ವಸತಿ ಕ್ರಮಗಳನ್ನು ವಹಿಸುವಂತೆ ಕಡ್ಡಾಯವಾಗಿ ತಿಳಿಸಬೇಕು.

17. ಉಳಿದಂತೆ ಮಾದರಿ ಕಾರ್ಯವಿಧಾನದಲ್ಲಿ ತಿಳಿಸಿರುವ ಹಾಗೂ Flow Chart ನಲ್ಲಿ ವಿವರಿಸಿರುವ ಎಲ್ಲಾ ಕ್ರಮಗಳನ್ನು ಜಿಲ್ಲಾಡಳಿತ ಪಾಲಿಸಬೇಕು.

**ಜೀತಕಾರ್ಮಿಕರ ಪುನರ್ವಸತಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯಿತಿಗಳ ಜವಾಬ್ದಾರಿ:**

1. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ, 1993 ಮತ್ತು ತಿದ್ದುಪಡಿಗಳನ್ವಯ ನಿಯಮ 58ಎ ರಲ್ಲಿ ಜೀತದಾಳುಗಳ ಕುರಿತು ಗ್ರಾಮ ಪಂಚಾಯಿತಿ ಗೆ ಮಾಹಿತಿ ಸಾರ್ವಜನಿಕರ ಮುಖೇನ ಅಥವಾ ತಪಾಸಣೆ ವೇಳೆ ದೊರಕಿದಲ್ಲಿ ಅದನ್ನು ನಿಗದಿತ ನಮೂನೆಯನ್ವಯ ಸಕ್ಷಮ ಪ್ರಾಧಿಕಾರದ ಮೂಲಕ ಸಂಬಂಧಿಸಿದ ತಹಸಿಲ್ದಾರ್ ಅಥವಾ ಉಪ–ವಿಭಾಗೀಯ ಅಧಿಕಾರಿಗಳಿಗೆ ನೀಡುವುದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಜವಾಬ್ದಾರಿಯಾಗಿದೆ.

2. ಜಿಲ್ಲಾಡಳಿತದಿಂದ ಜೀತ ವಿಮುಕ್ತರ ಕುರಿತು ಮಾಹಿತಿ ಬಂದ ಕೂಡಲೇ ಜಿಲ್ಲಾ ಪಂಚಾಯಿತಿಯು ಅವರುಗಳನ್ನು ಪುನರ್ವಸತಿಗೊಳಿಸುವ ಪ್ರಕ್ರಿಯೆಯನ್ನು ಕೂಡಲೇ ಪ್ರಾರಂಭಿಸಬೇಕು.

   ಅ) ಮೊದಲಿಗೆ ಜೀತದಾಳುಗಳಿಗೆ ನೀಡುವ 24 ತಿಂಗಳ ಮಾಸಾಶನ ತಲಾ ರೂ.24,000/– ಅಂದರೆ ತಿಂಗಳಿಗೆ ರೂ.1000/– ದಂತೆ ನೀಡುವಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕು.

   ಆ) ಜೀತ ವಿಮುಕ್ತರಿಗೆ ಮೂಲ ಭೂತ ಸೌಲಭ್ಯ ನೀಡಬೇಕು. ನಿವೇಶನ, ವಸತಿ ಯೋಜನೆಗಳಡಿ ವಸತಿ, ಕೌಶಲ್ಯಾಭಿವೃದ್ಧಿ ಯೋಜನೆಗಳಡಿ ಕೌಶಲ್ಯ ತರಬೇತಿ, ನರೇಗಾ ಉದ್ಯೋಗ ಚೀಟಿ, ಸ್ವ ಸಹಾಯ ಗುಂಪುಗಳಿಗೆ ಜೀತವಿಮುಕ್ತರನ್ನು ಸೇರಿಸುವುದು, ಇತ್ಯಾದಿ.

   ಇ) ಪರಿಶಿಷ್ಠ ಪಂಗಡಗಳಿಗೆ ಸೇರಿದ ಜೀತವಿಮುಕ್ತರು ಜೀವನೋಪಾಯಕ್ಕಾಗಿ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಬದುಕುತ್ತಿರುತ್ತಾರೆ. ಅವರುಗಳನ್ನು ಒಟ್ಟುಗೂಡಿಸಿ ಒಂದು ಸಂಘವನ್ನು ರಚಿಸಿ, ನೋಂದಾಯಿಸಿ ಜೀತವಿಮುಕ್ತರು ತಯಾರುಮಾಡುವ ಉತ್ಪನ್ನಗಳನ್ನು ಮಾರಾಟಮಾಡಲು ಮಾರುಕಟ್ಟೆ ಮಾರುವಂತೆ ವ್ಯವಸ್ಥೆ ಕಲ್ಪಿಸುವುದರಿಂದ ಒಂದು ಸಮುದಾಯದ ಆರ್ಥಿಕ ಚೇತರಿಕೆ ಸಾಧ್ಯವಾಗುತ್ತದೆ. ಜೀತವಿಮುಕ್ತರ ಹಾಗೂ ಅವರ ಕುಟುಂಬದವರ ಬದುಕಿನಲ್ಲಿ ಸುಧಾರಣೆಯಾಗುತ್ತದೆ.

   ಈ) ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಹಲವು ಇಲಾಖೆಗಳು, ನಿಗಮಗಳು ಇರುತ್ತವೆ. ಜೀತವಿಮುಕ್ತರ ಪೈಕಿ ಕೆಲವು ವರ್ಗಗಳನ್ನು ಗುರುತಿಸಿ ಅವರಿಗೆ ಆರ್ಥಿಕ ನೆರವನ್ನು ನೀಡಬಹುದಾಗಿದೆ. ರಾಜ್ಯ ಸರ್ಕಾರದಿಂದ ನಿರ್ವಹಿಸಲಾಗುತ್ತಿರುವ ವಿವಿಧ ಅಭಿವೃದ್ಧಿ ನಿಗಮ ಹಾಗೂ ಮಂಡಳಿಗಳ ಮೂಲಕ ಆರ್ಥಿಕ ನೆರವನ್ನು ಒದಗಿಸಲು\ ಜಿಲ್ಲಾ ಪಂಚಾಯಿತಿಗಳು ಕ್ರಮವಹಿಸುವುದು.

3. ಸರ್ಕಾರದ ಅದೇಶ ಸಂಖ್ಯೆ– ಗ್ರಾಅಪ/13/ಆರ್‌ಬಿಎಲ್/2003, ಬೆಂಗಳೂರು, ದಿನಾಂಕ–6.9.2004ರನ್ವಯ ಪ್ರತೀ ಜಿಲ್ಲೆಯಲ್ಲೂ ತ್ರಿಸದಸ್ಯ ಸಮಿತಿಯನ್ನು ರಚಿಸಲಾಗಿದೆ. ಈ ತ್ರಿಸದಸ್ಯ ಸಮಿತಿಯು – ಆಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳನ್ನು ಒಳಗೊಂಡಿದ್ದು, ಸದರಿ ಸಮಿತಿಯು ಜೀತವಿಮುಕ್ತರಿಗೆ ವಿವಿಧ ಯೋಜನೆಗಳಡಿ ನಿಯಮಾನುಸಾರ ಲಭ್ಯವಾಗುವ ಸೌಲಭ್ಯಗಳನ್ನು ಒಗ್ಗೂಡಿಸಿ ಪುನರ್ವಸತಿ ಒದಗಿಸಬೇಕು. ಪ್ರತೀ 3 ತಿಂಗಳಿಗೊಮ್ಮೆ ಕಡ್ಡಾಯವಾಗಿ ಜೀತವಿಮುಕ್ತರ ಪುನರ್ವಸತಿ ಕುರಿತು ಪರಿಶೀಲನಾ ಸಭೆಯನ್ನು ನಡೆಸಬೇಕು ಹಾಗೂ ಜಾಗೃತಿ ಸಮಿತಿಗಳ ನಡವಳಿಗಳ ಕುರಿತ ಕ್ರಮವನ್ನು ಸಹಾ ಪರಿಶೀಲಿಸಬೇಕು.
4. ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕ ಎಲ್ಲಾ ನೋಂದಾಯಿತ ಕಾರ್ಖಾನೆ, ಉದ್ಯಮಗಳ ವಹಿಯನ್ನು ನಿರ್ವಹಿಸಬೇಕು. ಸದರಿ ಸಂಸ್ಥೆಗಳ ಮಾಲೀಕರ ವಿಳಾಸ, ಸಂಪರ್ಕ ಸಂಖ್ಯೆ, ನೌಕರರ ಸಂಖ್ಯೆ, ವಲಸೆ ಕಾರ್ಮಿಕರ ಮಾಹಿತಿ, ವಿಶೇಷ ವರ್ಗದ ಕಾರ್ಮಿಕರ ವಿವರ, ಪರವಾನಗಿ ಮಾಹಿತಿಯನ್ನು ನಿರ್ವಹಿಸುವುದರಿಂದ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದಾಗಿದೆ.
5. ಜೀತವಿಮುಕ್ತರ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಅವರುಗಳಿಗೆ ಶಾಲೆಯಲ್ಲಿ ಶಿಕ್ಷಣ ಮುಂದುವರೆಸುವಂತೆ ಕ್ರಮವಹಿಸಬೇಕು. ಈ ಕಾರ್ಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಪಾತ್ರ ಮಹತ್ತರವಾದದ್ದು.
6. ಜೀತ ವಿಮುಕ್ತರನ್ನು ವಸತಿ ಯೋಜನೆಗೆ ಆಯ್ಕೆ ಮಾಡುವಾಗ ಗ್ರಾಮ ಸಭೆಯ ಪೂರ್ವಾನುಮತಿ ಅವಶ್ಯವಿರುವುದಿಲ್ಲ. ಎಲ್ಲಾ ಯೋಜನೆಗಳಲ್ಲೂ ಜೀತವಿಮುಕ್ತರನ್ನು ಆದ್ಯತೆ ಮೇರೆಗೆ ಪರಿಗಣಿಸಿ ಆಯ್ಕೆ ಮಾಡಬೇಕಾಗಿರುತ್ತದೆ.

## ಕಾರ್ಮಿಕ ಇಲಾಖೆಯ ಪಾತ್ರ

1. ಬೆಂಗಳೂರು ನಗರ, ಬೆಂಗಳೂರು(ಗ್ರಾ), ರಾಮನಗರ, ಕೋಲಾರ ಇಂತಹ ನಗರಕ್ಕೆ ಸಮೀಪದಲ್ಲಿರುವ ಜಿಲ್ಲೆಗಳ ಹಾಗೂ ಗಡಿ ಭಾಗದಲ್ಲಿ ಬರುವ ಜಿಲ್ಲೆಗಳಲ್ಲಿ ವಲಸೆ ಕಾರ್ಮಿಕರು ಹೆಚ್ಚಾಗಿರುವುದರಿಂದ, ಕಟ್ಟಡ ಕಾಮಗಾರಿ, ರಸ್ತೆ ಕಾಮಗಾರಿ, ಇಟ್ಟಿಗೆ ಕಾರ್ಖಾನೆ, ಕ್ವಾರಿ ಇಂತಹ ಉದ್ಯಮಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ತಪಾಸಣೆ ಮುಖ್ಯವಾಗುತ್ತದೆ.
2. ಎಲ್ಲಾ ಜೀತ ಪ್ರಕರಣಗಳಲ್ಲೂ ವ್ಯತ್ಯಯವಾಗಿರುವ ವೇತನದ ಬಾಕಿ ಪಾವತಿಯನ್ನು ಜೀತವಿಮುಕ್ತರು ಪ್ರತ್ಯಾವರ್ತನೆಯಾಗುವ ಮೊದಲೇ ಅವರಿಗೆ ದೊರೆಯುವಂತೆ ಮಾಡುವುದು ಸೂಕ್ತ.
3. ಕನಿಷ್ಠ ವೇತನ ಪಾವತಿ, ಬಾಲ ಕಾರ್ಮಿಕ ನಿಯಂತ್ರಣ ಕಾಯ್ದೆಗಳ ಜಾರಿ ಮತ್ತು ಅನುಷ್ಠಾನ, ಕಾರ್ಮಿಕರಿಗೆ ದೊರಕಬೇಕಿರುವ ಸರ್ಕಾರದ ಸವಲತ್ತುಗಳು ಉದಾ: ಕಟ್ಟಡ ಕಾರ್ಮಿಕರಿಗೆ ನೀಡುವ ಸ್ಮಾರ್ಟ್ ಕಾರ್ಡ್ ಇತ್ಯಾದಿಗಳನ್ನು ಅನುಷ್ಠಾನ ಮಾಡುವುದು.
4. ಪೊಲೀಸ್, ಕಂದಾಯ, ಜಿಲ್ಲಾ ಪಂಚಾಯಿತಿಗಳೊಂದಿಗೆ ಸಮನ್ವಯ ಸಾಧಿಸಿ ಜೀತ ಪ್ರಕರಣಗಳನ್ನು ಗುರುತಿಸಿ, ಮಾಲೀಕರಿಂದ ದಂಡ ವಸೂಲಿ ಮಾಡಿ ಕಾರ್ಪಸ್ ನಿಧಿಗೆ ಜಮೆ ಮಾಡಿಸುವ ಕಾರ್ಯ.
5. ಅಸಂಘಟಿತ ವಲಯ ಕಾರ್ಮಿಕರಿಗೆ ನೀಡುವ ಯೋಜನೆಗಳ ನೆರವನ್ನು ಜೀತ ಕಾರ್ಮಿಕರಿಗೂ ಸಹಾ ವಿಸ್ತರಿಸುವ ಕಾರ್ಯ.
6. ವಲಸೆ ಕಾರ್ಮಿಕರ ಕುರಿತು ಕೇಂದ್ರೀಕೃತ ಮಾಹಿತಿ ಸಂಗ್ರಹವಾಗುವಂತಹ ತಂತ್ರಾಂಶವನ್ನು ಅಳವಡಿಸುವುದರಿಂದ ವಲಸೆ ಕಾರ್ಮಿಕರ ಜೀತ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಪತ್ತೆ ಹಚ್ಚಲು ಸಾಧ್ಯವಾಗುವುದು.
7. ರಾಜ್ಯದಲ್ಲಿರುವ ಎಲ್ಲಾ ಸಂಸ್ಥೆಗಳ ವಿವರ ಹಾಗೂ ನೌಕರರ ವಿವರ ಜಿಲ್ಲಾವಾರು ಕ್ರೋಡೀಕರಿಸಬೇಕು.
8. ಪ್ರತೀ ಜಿಲ್ಲಾ ಪಂಚಾಯಿತಿಯಲ್ಲೂ ಕಾರ್ಮಿಕ ಕಾಯ್ದೆಗಳ ಕುರಿತು ಅರಿವು ಶಿಬಿರಗಳನ್ನು ಆಯೋಜಿಸಿದಲ್ಲಿ ತಳ ಮಟ್ಟದ ಅಧಿಕಾರಿಗಳಿಗೆ ಜೀತ ಪ್ರಕರಣಗಳನ್ನು ಗುರುತಿಸುವುದು ಸುಲಭವಾಗುತ್ತದೆ.
9. ಉಳಿದಂತೆ ಮಾದರಿ ಕಾರ್ಯವಿಧಾನದಲ್ಲಿ ತಿಳಿಸಿರುವ ಹಾಗೂ Flow Chart ನಲ್ಲಿ ವಿವರಿಸಿರುವ ಎಲ್ಲಾ ಕ್ರಮಗಳನ್ನು ಕಾರ್ಮಿಕ ಇಲಾಖೆ ಪಾಲಿಸಬೇಕು.




# 10. ಜೀತ ಕಾರ್ಮಿಕ ಪದ್ಧತಿ ಕುರಿತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಪಾತ್ರ

## 10. ಜೀತ ಕಾರ್ಮಿಕ ಪದ್ಧತಿ ಕುರಿತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಪಾತ್ರ

ಆಯೋಗದ ಮೂಲ ಉದ್ದೇಶ ಮಾನವ ಹಕ್ಕುಗಳ ರಕ್ಷಣೆ. ಜೀತ ಕಾರ್ಮಿಕ ಪದ್ಧತಿ ಮೂಲತಃ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟುಮಾಡಿ ವ್ಯಕ್ತಿಗಳನ್ನು ಒತ್ತಾಯದಿಂದ ದುಡಿಸಿಕೊಳ್ಳುವ ಯಾವುದೇ ಸಂಸ್ಥೆ ಅಥವಾ ವ್ಯಕ್ತಿಗಳು ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದಂತಾಗುತ್ತದೆ. ಜೀತ ಪದ್ಧತಿ ನಿರ್ಮೂಲನೆ ಮಾಡಲೆಂದೇ ಮಾನವ ಹಕ್ಕುಗಳ ಆಯೋಗವು ಹಲವು ಪರಿಕ್ರಮಗಳನ್ನು ರೂಪಿಸಿದೆ. ಜೀತದಾಳುಗಳ ಬಿಡುಗಡೆ ಹಾಗೂ ಪುನರ್ವಸತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗವು ಜೀತ ಪ್ರಕರಣಗಳ ಕುರಿತು ಪರಿಶೀಲನೆ ನಡೆಸುವುದು, ರಾಜ್ಯ ಸರ್ಕಾರವು ಜೀತ ಪದ್ಧತಿ ನಿರ್ಮೂಲನೆ ಹಾಗೂ ಜೀತದಾಳುಗಳ ಪುನರ್ವಸತಿ ಮಾಡುವ ಕುರಿತಂತೆ ತೆಗೆದುಕೊಂಡಿರುವ ಪರಿಕ್ರಮಗಳ ಕುರಿತು ವಿಶ್ಲೇಷಿಸುವುದು ಮತ್ತು ಜೀತ ಪ್ರಕರಣಗಳ ಕುರಿತು ಸ್ವತಃ ಪ್ರಕರಣಗಳನ್ನು ದಾಖಲಿಸಿಕೊಂಡು ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡುವುದು ಹಾಗೂ ಬಾಧಿತರಿಗೆ ಪರಿಹಾರ ಕೊಡಿಸುವ ಕಾರ್ಯವನ್ನು ಮಾಡುತ್ತಿವೆ.

### ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಜೀತ ಪದ್ಧತಿ ನಿರ್ಮೂಲನೆ ಕುರಿತು ತೆಗೆದುಕೊಂಡಿರುವ ಪರಿಕ್ರಮಗಳು:

ಆಯೋಗವು ಜೀತಕಾರ್ಮಿಕರ ಕುರಿತು ಅಡಹಿಜ ಉಡಿಆಹಿ ಸಮಿತಿಯೊಂದನ್ನು ರಾಷ್ಟ್ರ ಮಟ್ಟದಲ್ಲಿ ಸ್ಥಾಪಿಸಿದೆ. ಈ ಸಮಿತಿಯು ರಾಜ್ಯಗಳು ಜೀತ ಪದ್ಧತಿ ಕುರಿತಂತೆ ತೆಗೆದುಕೊಂಡಿರುವ ಕ್ರಮಗಳ ಕುರಿತು ವಿಶ್ಲೇಷಣೆ ನಡೆಸುತ್ತದೆ ಹಾಗೂ ಜೀತ ಪದ್ಧತಿ ನಿರ್ಮೂಲನೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸುತ್ತದೆ. ಪ್ರತಿ ವರ್ಷ ಜೀತ ಪದ್ಧತಿ ನಿರ್ಮೂಲನೆ ಕುರಿತು ರಾಷ್ಟ್ರ ಮಟ್ಟದ ಕಾರ್ಯಗಾರವನ್ನು ನಡೆಸುತ್ತದೆ. ಹೆಚ್ಚು ಪ್ರಕರಣಗಳು ದಾಖಲಾಗುವಂತಹ ರಾಜ್ಯಗಳಲ್ಲಿ ವಿಷಯಾಧಾರಿತ ಕಾರ್ಯಗಾರಗಳನ್ನು ನಡೆಸಿ, ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುತ್ತದೆ.

ಜೀತ ಪ್ರಕರಣಗಳನ್ನು ಹೆಚ್ಚಾಗಿರುವ ಜಿಲ್ಲೆಗಳಿಗೆ ಸಾಮಾಜಿಕ ಸುಧಾರಣೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಗುಂಪುಗಳೊಂದಿಗೆ ಅನಿರೀಕ್ಷಿತ ಭೇಟಿ ನೀಡಿ ವಾಸ್ತವಿಕ ವರದಿಯನ್ನು ರಾಜ್ಯ ಸರ್ಕಾರಗಳ ಗಮನಕ್ಕೆ ತರುವಂತಹ ಕಾರ್ಯವನ್ನು ಆಯೋಗವು ಮಾಡುತ್ತದೆ. ರಾಜ್ಯ ಸರ್ಕಾರಗಳೊಂದಿಗೆ ಸಭೆ ನಡೆಯಿಸಿ ಜೀತ ಪದ್ಧತಿ(ರ) ಕಾಯ್ದೆ 1976ರ ಅನುಷ್ಠಾನದ ಪರಿಶೀಲನೆ ನಡೆಸುವುದು. ಜಾಗೃತಿ ಸಮಿತಿಗಳ ರಚನೆ ಮತ್ತು ಕಾರ್ಯನಿರ್ವಹಣೆ ಕುರಿತು ಪರಶೀಲಿಸುವುದು, ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಹಾಗೂ ಪುನರ್ವಸತಿ ಕುರಿತ ವಿಧಾನಗಳನ್ನು ಸರಳೀಕರಣಗೊಳಿಸಿ ರಾಜ್ಯಗಳಿಗೆ ಕಳುಹಿಸುವುದು. ಚಾಲ್ತಿಯಲ್ಲಿರುವ ಮಾರ್ಗಸೂಚಿ ಹಾಗೂ ರಾಜ್ಯ ಸರ್ಕಾರಗಳು ಜೀತದಾಳುಗಳ ನಿರ್ಮೂಲನೆ ಹಾಗೂ ಪುನರ್ವಸತಿ ಕುರಿತಂತೆ ರಚಿಸಿರುವ ಯೋಜನೆಗಳನ್ನು ಪರಿಶೀಲಿಸಿ ಸೂಕ್ತ ಸಲಹೆಗಳನ್ನು ನೀಡುವುದು. ಅಧಿಕಾರಿಗಳು ಹಾಗೂ ಆಸಕ್ತ ಗುಂಪುಗಳು, ಜನಪ್ರತಿನಿಧಿಗಳಿಗೆ , ಜಾಗೃತಿ ಸಮಿತಿಯ ಸದಸ್ಯರುಗಳಿಗೆ ಕಾರ್ಮಿಕ ನೀತಿಗಳ ಕುರಿತು, ಮಾನವ ಹಕ್ಕುಗಳ ಕುರಿತು ಅರಿವು ಮೂಡಿಸುವುದು ಹಾಗೂ ಈ ಕಾರ್ಮಿಕ ನೀತಿ, ಜೀತ ಕಾಯ್ದೆಗಳನ್ನು ಸಮರ್ಪಕವಾಗಿ ಬಳಕೆ ಮಾಡಲು ಆಯೋಗವು ಮಾರ್ಗದರ್ಶನ ನೀಡುತ್ತದೆ. ಜೀತದಾಳುಗಳ ರಾಜ್ಯ ಮಟ್ಟದ ಉನ್ನತ ಸಮಿತಿಯ ಸಭಾ ನಡವಳಿಗಳನ್ನು ಪರಾಮರ್ಶಿಸುವುದು ಹಾಗೂ ಅರ್ಧ ವಾರ್ಷಿಕ ವರದಿಗಳನ್ನು ಎಲ್ಲಾ ರಾಜ್ಯಗಳಿಂದ ಪಡೆದುಕೊಂಡು ಜೀತ ಪ್ರಕರಣಗಳ ಹಾಗೂ ಪುನರ್ವಸತಿ ಬಗ್ಗೆ ಅಧ್ಯಯನ ನಡೆಸುವ ಕರ್ತವ್ಯವನ್ನು ಆಯೋಗವು ಮಾಡುತ್ತದೆ.

### ರಾಜ್ಯ ಮಟ್ಟದಲ್ಲಿ ರಾಷ್ಟ್ರೀಯ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಪಾತ್ರ:

ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಮುಖೇನ ಅಥವಾ ಕಾರ್ಮಿಕ ಸಂಘಟನೆಗಳ ಮೂಲಕ ಜೀತ ಪ್ರಕರಣಗಳ ಕುರಿತು ದೂರುಗಳು ಬಂದಲ್ಲಿ ಅದನ್ನು ಆಯೋಗವು ನೋಂದಣಿ ಮಾಡಿಕೊಂಡು ಆಯಾಯ ರಾಜ್ಯ ಸರ್ಕಾರಗಳ ಮೂಲಕ ಸಮಸ್ಯೆಯನ್ನು ಬಗೆಹರಿಸುವ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ, ಪುನರ್ವಸತಿಗಳನ್ನು ಕಾಲ ಮಿತಿಯೊಳಗೆ ಆಯಾ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿಗಳು ನೆರವೇರಿಸಬೇಕು. ಆಯೋಗಕ್ಕೆ ಸಿವಿಲ್ ನ್ಯಾಯಾಲಯಕ್ಕೆ ನೀಡಿರುವ ಅಧಿಕಾರವನ್ನು ನೀಡಲಾಗಿದೆ. ಒಂದು ವೇಳೆ ಬಾಧಿತ ಜೀತದಾಳುಗಳು ರಾಷ್ಟ್ರೀಯ ಹಾಗೂ ರಾಜ್ಯ  ಮಾನವ ಹಕ್ಕುಗಳ ಆಯೋಗಗಳಲ್ಲಿ ಅರ್ಜಿ ಸಲ್ಲಿಸಿ ಪ್ರಕರಣ ದಾಖಲಿಸಿದರೆ, ಸಂಬಂಧಿಸಿದ ಅಧಿಕಾರಿಗಳು ಜವಾಬ್ದಾರರಾಗುತ್ತಾರೆ. ಇವುಗಳಿಗೆ ಆಸ್ಪದ ನೀಡದೇ ಸಂಬಂಧಿಸಿದ ಪ್ರಾಧಿಕಾರಗಳು ಮಾನವೀಯ ದೃಷ್ಟಿಯಿಂದ ಹಾಗೂ ಕರ್ತವ್ಯ ಪಾಲನೆಯ ಉದ್ದೇಶದಿಂದ  ಜೀತ ಪ್ರಕರಣಗಳನ್ನು ಸಮರ್ಪಕವಾಗಿ ನಿಭಾಯಿಸಬೇಕಾಗಿರುತ್ತದೆ.



ಬೆಂಗಳೂರು ಉತ್ತರದಲ್ಲಿ ಜೀತ ಪ್ರಕರಣ ಕಾರ್ಯಾಚರಣೆಯ ಸಂದರ್ಭದಲ್ಲಿ ಮಾಹಿತಿ ನೀಡುತ್ತಿರುವ ಕಂದಾಯ ಅಧಿಕಾರಿಗಳು

# 11. ಜಿಲ್ಲಾ ಹಾಗೂ ಉಪ-ವಿಭಾಗೀಯ ಜಾಗೃತ ಸಮಿತಿಗಳ ರಚನೆ ಮತ್ತು ಜಾಗೃತ ಸಮಿತಿಗಳ ಕರ್ತವ್ಯಗಳು

## 11. ಜಿಲ್ಲಾ ಹಾಗೂ ಉಪ-ವಿಭಾಗೀಯ ಜಾಗೃತ ಸಮಿತಿಗಳ ರಚನೆ ಮತ್ತು ಜಾಗೃತ ಸಮಿತಿಗಳ ಕರ್ತವ್ಯಗಳು

ಜೀತ ಕಾರ್ಮಿಕ ಪದ್ದತಿ(ರದ್ದತಿ) ಕಾಯ್ದೆ, 1976 ರಡಿ ಜಿಲ್ಲಾ ಹಾಗೂ ಉಪ-ವಿಭಾಗೀಯ ಮಟ್ಟದಲ್ಲಿ ಜಾಗೃತ ಸಮಿತಿಗಳ ರಚನೆ ಮತ್ತು ಕರ್ತವ್ಯಗಳ ಕುರಿತು ಕಲಂ 13(1), 13(2), 13(3), 14(1) ಮತ್ತು 14(2) ರಲ್ಲಿ ವಿವರಿಸಲಾಗಿದೆ.

| | |
|---|---|
| 13(1) | ಪ್ರತಿಯೊಂದು ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ಪ್ರತಿಯೊಂದು ಉಪ-ವಿಭಾಗದಲ್ಲಿ ತಾನು ಸೂಕ್ತವೆಂದು ಆಲೋಚಿಸಬಹುದಾದ ಸಂಖ್ಯೆಯ ಜಾಗೃತ ಸಮಿತಿಗಳನ್ನು ರಚಿಸತಕ್ಕದು. |
| 13(2) | ಜಿಲ್ಲೆಗಾಗಿ ರಚಿಸಲಾದ ಪ್ರತಿಯೊಂದು ಜಾಗೃತ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರು ಇರತಕ್ಕದು, ಎಂದರೆ :<br>(ಎ) ಜಿಲ್ಲಾ ದಂಡಾಧಿಕಾರಿಯು, ಅಥವಾ ಅವನು ನಾಮನಿರ್ದೇಶ ಮಾಡುವ ಒಬ್ಬ ವ್ಯಕ್ತಿ; ಅವನು ಅಧ್ಯಕ್ಷನಾಗಿರತಕ್ಕದು.<br>(ಬಿ) ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ಮತ್ತು ಆ ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಾಗೂ ಜಿಲ್ಲಾ ದಂಡಾಧಿಕಾರಿಯು ನಾಮ ನಿರ್ದೇಶನ ಮಾಡಬೇಕಾದ ಮೂವರು ವ್ಯಕ್ತಿಗಳು;<br>(ಸಿ) ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಾಗೂ ಜಿಲ್ಲಾ ದಂಡಾಧಿಕಾರಿಯು ನಾಮ ನಿರ್ದೇಶನ ಮಾಡಬೇಕಾದ ಇಬ್ಬರು ಸಮಾಜ ಸೇವಕರು;<br>(ಡಿ) ಗಾಮೀಣಾಭಿವೃದ್ಧಿಗೆ ಸಂಬಂಧಿಸಿದ ಜಿಲ್ಲೆಯಲ್ಲಿನ ಸರ್ಕಾರೀ ಅಥವಾ ಸರ್ಕಾರೇತರ ಸಂಸ್ಥೆಗಳನ್ನು ಪ್ರತಿನಿಧಿಸಲು ರಾಜ್ಯ ಸರ್ಕಾರವು ನಾಮ ನಿರ್ದೇಶ ಮಾಡಬೇಕಾದ ಮೂವರಿಗೆ ಮೀರದ ವ್ಯಕ್ತಿಗಳು;<br>(ಇ) ಜಿಲ್ಲೆಯಲ್ಲಿನ ಆರ್ಥಿಕ ಮತ್ತು ಪತ್ತಿನ (Credit) ಸಂಸ್ಥೆಗಳನ್ನು ಪತಿನಿಧಿಸಲು ಜಿಲ್ಲಾ ದಂಡಾಧಿಕಾರಿಯು ನಾಮನಿರ್ದೇಶನ ಮಾಡಬೇಕಾದ ಒಬ್ಬ ವ್ಯಕ್ತಿ. |
| 13(3) | ಉಪ-ವಿಭಾಗಕ್ಕಾಗಿ ರಚಿಸಿದ ಪ್ರತಿಯೊಂದು ಜಾಗೃತ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರು ಇರತಕ್ಕದು, ಎಂದರೆ –<br>(ಎ) ಉಪ-ವಿಭಾಗದ ದಂಡಾಧಿಕಾರಿ ಅಥವಾ ಅವನು ನಾಮನಿರ್ದೇಶನ ಮಾಡುವ ಒಬ್ಬ ವ್ಯಕ್ತಿ; ಅವನು ಅಧ್ಯಕ್ಷನಾಗಿರತಕ್ಕದು;<br>(ಬಿ) ಅನುಸೂಚಿತ ಜಾತಿಗೆ ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಮತ್ತು ಆ ಉಪವಿಭಾಗದಲ್ಲಿ ವಾಸಿಸುತ್ತಿರುವ ಹಾಗೂ ಆ ಉಪ-ವಿಭಾಗದ ದಂಡಾಧಿಕಾರಿಯು ನಾಮನಿರ್ದೇಶನ ಮಾಡಬೇಕಾದ ಮೂವರು ವ್ಯಕ್ತಿಗಳು;<br>(ಸಿ) ಉಪವಿಭಾಗದಲ್ಲಿ ವಾಸಿಸುತ್ತಿರುವ ಹಾಗೂ ಉಪವಿಭಾಗದ ದಂಡಾಧಿಕಾರಿ ನಾಮ ನಿರ್ದೇಶನ ಮಾಡಬೇಕಾದ ಇಬ್ಬರು ಸಮಾಜ ಸೇವಕರು;<br>(ಡಿ) ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ, ಉಪವಿಭಾಗದಲ್ಲಿನ ಸರ್ಕಾರೀ ಅಥವಾ ಸರ್ಕಾರೇತರ ಸಂಸ್ಥೆಗಳನ್ನು ಪ್ರತಿನಿಧಿಸಲು, ಜಿಲ್ಲಾ ದಂಡಾಧಿಕಾರಿ ನಾಮ ನಿರ್ದೇಶ ಮಾಡಬೇಕಾದ, ಮೂವರಿಗೆ ಮೀರದ ವ್ಯಕ್ತಿಗಳು;<br>(ಇ) ಉಪ ವಿಭಾಗದಲ್ಲಿನ ಆರ್ಥಿಕ ಮತ್ತು ಪತ್ತಿನ (Credit) ಸಂಸ್ಥೆಗಳನ್ನು ಪ್ರತಿನಿಧಿಸಲು ಉಪ ವಿಭಾಗದ ದಂಡಾಧಿಕಾರಿ ನಾಮನಿರ್ದೇಶನ ಮಾಡಬೇಕಾದ ಒಬ್ಬ ವ್ಯಕ್ತಿ; (ಎಫ್) 10ನೇ ಪಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಮತ್ತು ಉಪವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಬ್ಬ ಅಧಿಕಾರಿ. |
| 13(4) | ಪ್ರತಿಯೊಂದು ಜಾಗೃತ ಸಮಿತಿಯೂ ತನ್ನ ಕಾರ್ಯ ವಿಧಾನವನ್ನು ತಾನೇ ನಿಯಂತ್ರಿಸಿಕೊಳ್ಳತಕ್ಕದು ಮತ್ತು ಅವಶ್ಯಕವಾಗಬಹುದಾದಂಥ ಸಿಬ್ಬಂದಿ ನೆರವನ್ನು,<br>(ಎ) ಜಿಲ್ಲೆಗಾಗಿ ರಚಿಸಿದ ಜಾಗೃತ ಸಮಿತಿಯ ಸಂದರ್ಭದಲ್ಲಿ, ಜಿಲ್ಲಾ ದಂಡಾಧಿಕಾರಿಯು;<br>(ಬಿ) ಉಪವಿಭಾಗಕ್ಕಾಗಿ ರಚಿಸಿದ ಜಾಗೃತಾ ಸಮಿತಿಯ ಸಂದರ್ಭದಲ್ಲಿ, ಉಪವಿಭಾಗದ ದಂಡಾಧಿಕಾರಿಯು, ಒದಗಿಸತಕ್ಕದು. |

| | |
|---|---|
| 13(5) | ಜಾಗೃತ ಸಮಿತಿಯ ಯಾವ ವ್ಯವಹರಣೆಯೂ ಜಾಗೃತಾ ಸಮಿತಿಯ ರಚನೆಯಲ್ಲಿ ಅಥವಾ ಅದರ ನಡವಳಿಕೆಗಳಲ್ಲಿನ ಯಾವುದೇ ದೋಷಮಾತ್ರದ ಕಾರಣದಿಂದಾಗಿ ಅಸಿಂಧುವಾಗತಕ್ಕುದಲ್ಲ. |
| 14(1) | ಪತಿಯೊಂದು ಜಾಗೃತಾ ಸಮಿತಿಯ ಪ್ರಕಾರ್ಯಗಳು ಈ ಕೆಳಗಿನಂತಿರತಕ್ಕುದು –<br>(ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಉಪಬಂಧಗಳನ್ನು ಸೂಕ್ತ ರೀತಿಯಲ್ಲಿ ಕಾರ್ಯಗತಗೊಳಿಸಲಾಗಿದೆಯೆಂಬುದನ್ನು ಖಾತರಿ ಮಾಡಿಕೊಳ್ಳಲು ಮಾಡಿದ ಪ್ರಯತ್ನಗಳ ಬಗ್ಗೆ ಮತ್ತು ಕೈಕೊಂಡ ಕ್ರಮದ ಬಗ್ಗೆ ಜಿಲ್ಲಾ ದಂಡಾಧಿಕಾರಿಗೆ ಅಥವಾ ಅವನಿಂದ ಪ್ರಾಧಿಕೃತನಾದ ಯಾವನೇ ಅಧಿಕಾರಿಗೆ ಸಲಹೆ ಕೊಡುವುದು;<br>(ಬಿ) ವಿಮೋಚಿತರಾದ ಜೀತಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಪುನರ್ವಸತಿಗಾಗಿ ಅವಕಾಶ ಕಲ್ಪಿಸುವುದು;<br>(ಸಿ) ವಿಮೋಚಿತ ಜೀತಕಾರ್ಮಿಕರಿಗೆ ಸಾಕಷ್ಟು ಸಾಲ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಗ್ರಾಮೀಣ ಬ್ಯಾಂಕುಗಳ ಮತ್ತು ಸಹಕಾರಿ ಸಂಘಗಳ ಪ್ರಕಾರ್ಯಗಳನ್ನು ಸಮನ್ವಯಗೊಳಿಸುವುದು;<br>(ಡಿ) ಈ ಅಧಿನಿಯಮದ ಮೇರೆಗೆ ಗಮನಕ್ಕೆ ತೆಗೆದುಕೊಂಡಿರುವ ಅಪರಾಧಗಳ ಸಂಖ್ಯೆಯ ಮೇಲೆ ನಿಗಾ ಇಡುವುದು;<br>(ಇ) ಈ ಅಧಿನಿಯಮದ ಮೇರೆಗೆ ಗಮನಕ್ಕೆ ತೆಗೆದುಕೊಳ್ಳಬೇಕಾದ ಅಪರಾಧ ಯಾವುದಾದರೂ ಇದೆಯೇ ಎಂಬುದರ ಬಗ್ಗೆ ಸಮೀಕ್ಷೆ ಮಾಡುವುದು;<br>(ಎಫ್) ವಿಮೋಚಿತನಾದ ಜೀತದಾಳಿನ ಅಥವಾ ಅವನ ಕುಟುಂಬದ ಯಾವನೇ ವ್ಯಕ್ತಿಯ ಅಥವಾ ಅವನ ಮೇಲೆ ಅವಲಂಬಿತನಾದ ಯಾವನೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ಜೀತದ ಯಾವುದೇ ಪೂರ್ತಿ ಸಾಲವನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಜೀತಸಾಲವೆಂದು ಅಂಥ ವ್ಯಕ್ತಿಯು ಕ್ಲೇಮು ಮಾಡಿದ ಇತರ ಯಾವುದೇ ಸಾಲವನ್ನು ವಸೂಲು ಮಾಡಲು ಹೂಡಿದ ಯಾವುದೇ ದಾವೆಯಲ್ಲಿ ಅವನ ಪರವಾಗಿ ಪ್ರತಿವಾದಿಸುವುದು. |
| 14(2) | ವಿಮೋಚಿತ ಜೀತದಾಳಿನ ವಿರುದ್ಧ ಹೂಡಿದ ದಾವೆಯಲ್ಲಿ ಅವನ ಪರವಾಗಿ ಪ್ರತಿವಾದಿಸಲು ಜಾಗೃತ ಸಮಿತಿಯು ತನ್ನ ಸದಸ್ಯರಲ್ಲಿ ಒಬ್ಬರಿಗೆ ಪ್ರಾಧಿಕಾರವನ್ನು ಕೊಡಬಹುದು ಮತ್ತು ಹಾಗೆ ಪಾಧಿಕಾರವನ್ನು ಹೊಂದಿದ ಸದಸ್ಯನನ್ನು ಅಂತಹ ದಾವೆಯ ಉದ್ದೇಶಕ್ಕಾಗಿ ವಿಮೋಚಿತ ಜೀತದಾಳಿನ ಅಧಿಕೃತ ಪ್ರಾಧಿಕರ್ತನೆಂದು ಭಾವಿಸತಕ್ಕುದು. |

**ಜಿಲ್ಲಾ ಜಾಗೃತ ಸಮಿತಿಯ ಸದಸ್ಯರ ಪದಾವಧಿ ಮತ್ತು ಅವರು ಸ್ಥಾನವನ್ನು ತೆರವು ಮಾಡುವುದು –**

[(1) 13ನೇ ಪ್ರಕರಣದ (ಬಿ), (ಸಿ), (ಡಿ) ಮತ್ತು (ಇ) ಖಂಡಗಳ ಮೇರೆಗೆ ನಾಮನಿರ್ದೇಶನ ಹೊಂದಿದ ಜಿಲ್ಲಾ ಜಾಗೃತ ಸಮಿತಿಯ ಪತಿಯೊಬ್ಬ ಸದಸ್ಯನೂ ಸರಕಾರಿ ರಾಜ್ಯಪತ್ರದಲ್ಲಿ ಅವನ ನಾಮ ನಿರ್ದೇಶನವನ್ನು ಅಧಿಸೂಚಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಅಧಿಕಾರದಲ್ಲಿರತಕ್ಕುದು ಮತ್ತು ಸದರೀ ಅವಧಿಯು ಮುಕ್ತಾಯವಾದ ಅನಂತರ ತನ್ನ ಉತ್ತರಾಧಿಕಾರಿಯ ನಾಮನಿರ್ದೇಶನವಾಗುವವರೆಗೆ ಅವನು ಅಧಿಕಾರದಲ್ಲಿ ಮುಂದುವರಿಯತಕ್ಕುದು ಮತ್ತು ಪುನರ್ನಾಮ ನಿರ್ದೇಶನಕ್ಕೆ ಸಹ ಅವನು ಅರ್ಹನಾಗಿರತಕ್ಕುದು].

2. ಉಪ ನಿಯಮ (1)ನ್ನು ಎಸ್.ಓ.ನಂ.1755 ದಿನಾಂಕ 12–3–1983ರಂತೆ 2–4–1983ರಿಂದ ಕಾರ್ಯಗತಗೊಳ್ಳುವ ಹಾಗೆ ಬದಲಿಸಿದೆ. 18 (2) (1)ನೇ ಉಪನಿಯಮದಲ್ಲಿ ನಿರ್ದೇಶಿತನಾದ ಪ್ರತಿಯೊಬ್ಬ ಸದಸ್ಯನು (ಎ) 1 ತನ್ನನ್ನು ನಾಮ ನಿರ್ದೇಶನ ಮಾಡಿದ ಪ್ರಾಧಿಕಾರಿಗೆ 30 ದಿನಗಳ ಒಳಗಾಗಿ ಬರಹ ಮೂಲಕವಾಗಿ ನೋಟೀಸನ್ನು ಕೊಟ್ಟು ತನ್ನ ಹುದ್ದೆಗೆ ರಾಜೀನಾಮೆ ಕೊಡಬಹುದು ಮತ್ತು ಅಂಥ ರಾಜೀನಾಮೆಯು ಸ್ವೀಕೃತವಾದ ಅನಂತರ ಅಥವಾ ನೋಟೀಸು ಕೊಟ್ಟ 30 ದಿನದ ಅನಂತರ ಯಾವುದು ಮೊದಲು ಸಂಭವಿಸುತ್ತೋ ಅದರ ಪ್ರಕಾರ, ಅವನು ತನ್ನ ಹುದ್ದೆಯನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕುದು; (ಬಿ) (i) ಜಿಲ್ಲಾ ಜಾಗೃತಾ ಸಮಿತಿಯ ಒಂದಾದ ಮೇಲೊಂದು ನಡೆಯುವ ಮೂರು ಸಭೆಗಳಿಗೆ ಸಮಿತಿಯ ಅಧ್ಯಕ್ಷನಿಂದ ತನ್ನ ಗೈರು ಹಾಜರಿಯ ಬಗ್ಗೆ ಅನುಮತಿಯನ್ನು ಪಡೆಯದೆ ಹಾಜರಾಗಲು ತಪ್ಪಿದರೆ, ಅವನು ತನ್ನ ಪದವನ್ನು ತೆರವು ಮಾಡಿದ್ದನೆಂದು ಭಾವಿಸತಕ್ಕುದು; ಪರಂತು ಅವನ ನಾಮನಿರ್ದೇಶನ ಮಾಡಿದ ಪ್ರಾಧಿಕಾರಕ್ಕೆ, ಅಂಥ ಸದಸ್ಯನು ಸಮಿತಿಯ ಒಂದಾದ ಮೇಲೊಂದು ನಡೆಯುವ ಮೂರು ಸಭೆಗಳಿಗೆ ಹಾಜರಿರಲು ಸಾಕಷ್ಟು ಕಾರಣಗಳಿಂದ ಅಡ್ಡಿಯುಂಟಾಯಿತೆಂದು ಸಮಾಧಾನವಾದರೆ, ಆ ಪ್ರಾಧಿಕಾರವು ಅವನಿಗೆ ಸದಸ್ಯತ್ವವನ್ನು ಪುನಃ ಕೊಡಬಹುದು. (ii) ಕೆಳಕಂಡ ಯಾವುವೇ ಅನರ್ಹತೆಗಳಿಗೆ ಅವನು ಒಳಗಾದರೆ ಅವನು ತನ್ನ ಹುದ್ದೆಯನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕುದು; (1) ಅವನು ದಿವಾಳಿಯೆಂದು ನ್ಯಾಯಾಲಯದಿಂದ ನಿರ್ಣಯಿಸಲ್ಪಟ್ಟಿದ್ದರೆ; (2) ಸಕ್ಷಮ ನ್ಯಾಯಾಲಯದಿಂದ ಅವನು ಅಸ್ವಸ್ಥಚಿತ್ತನೆಂದು ಘೋಷಿಸಲ್ಪಟ್ಟಿದ್ದರೆ;

(3) ಅವನ ನಾಮನಿರ್ದೇಶನವನ್ನು ಮಾಡಿದ ಪ್ರಾಧಿಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನು ಒಳಗೊಳ್ಳುವ ಅಪರಾಧಕ್ಕಾಗಿ ಅವನು ಅಪರಾಧಿಯೆಂದು ನಿರ್ಣೀತನಾಗಿದ್ದರೆ;

4. ಉಪವಿಭಾಗ ಜಾಗೃತ ಸಮಿತಿಗಳ ಸದಸ್ಯರ ಪದಾವಧಿ ಮತ್ತು ಅವರು ಸ್ಥಾನವನ್ನು ತೆರವು ಮಾಡುವುದು–

1[(1)13ನೇ ಪಕರಣದ (3)ನೇ ಪ್ರಕರಣದ (ಬಿ) (ಸಿ), (ಡಿ) ಮತ್ತು (ಇ) ಖಂಡಗಳ ಮೇರೆಗೆ ನಾಮನಿರ್ದೇಶನ ಹೊಂದಿದ ಉಪವಿಭಾಗ ಜಾಗೃತ ಸಮಿತಿಯ ಪತಿಯೊಬ್ಬ ಸದಸ್ಯನು ಸರಕಾರೀ ರಾಜ್ಯಪತ್ರದಲ್ಲಿ ಅವನ ನಾಮನಿರ್ದೇಶನವನ್ನು ಅಧಿಸೂಚಿಸಿದ ದಿನಾಂಕದಿಂದ ಎರಡು ವರ್ಷಗಳ ಮುಕ್ತಾಯದ ಅನಂತರ ತನ್ನ ಉತ್ತರಾಧಿಕಾರಿಯ ನಾಮನಿರ್ದೇಶನವಾಗುವವರೆಗೆ ಅವನು ಅಧಿಕಾರದಲ್ಲಿ ಮುಂದುವರಿಯತಕ್ಕುದು ಮತ್ತು ಪುನರ್ನಾಮ ನಿರ್ದೇಶನಕ್ಕೆ ಸಹ ಅವನು ಅರ್ಹನಾಗಿರತಕ್ಕುದು.

(2) (1)ನೇ ಉಪನಿಯಮದಲ್ಲಿ ನಿರ್ದೇಶಿತನಾದ ಪತಿಯೊಬ್ಬ ಸದಸ್ಯನೂ – (ಎ) 2 ತನ್ನನ್ನು ನಾಮನಿರ್ದೇಶನ ಮಾಡಿದ ಪ್ರಾಧಿಕಾರಿಗೆ 30 ದಿನಗಳ ಒಳಗಾಗಿ ಬರಹ ಮೂಲಕವಾಗಿ ನೋಟೀಸನ್ನು ಕೊಟ್ಟು ತನ್ನ ಹುದ್ದೆಗೆ ರಾಜೀನಾಮೆ ಕೊಡಬಹುದು ಮತ್ತು ಅಂಥ ರಾಜೀನಾಮೆಯು ಸ್ವೀಕೃತವಾದ ಅನಂತರ, ಅವನು ತನ್ನ ಹುದ್ದೆಯನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕುದು; (ಬಿ) (i) ಉಪವಿಭಾಗ ಜಾಗೃತ ಸಮಿತಿಯ ಒಂದಾದ ಮೇಲೊಂದರಂತೆ ನಡೆಯುವ ಮೂರು ಸಭೆಗಳಿಗೆ ಆ ಸಮಿತಿಯ ಅಧ್ಯಕ್ಷನಿಂದ ಗೈರುಹಾಜರಿಯ ಬಗ್ಗೆ ಅನುಮತಿಯನ್ನು ಪಡೆಯದೆ ಒಂದೇ ಸಮನೆ ಹಾಜರಾಗಲು ತಪ್ಪಿದರೆ, ಅವನು ತನ್ನ ಹುದ್ದೆಯನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕುದು; ಪರಂತು, ಅವನ ನಾಮನಿರ್ದೇಶನ ಮಾಡಿದ ಪ್ರಾಧಿಕಾರಕ್ಕೆ, ಅಂಥ ಸದಸ್ಯನು ಸಮಿತಿಯ ಒಂದಾದ ಮೇಲೊಂದರಂತೆ ನಡೆಯುವ ಮೂರು ಸಭೆಗಳಿಗೆ ಹಾಜರಿರಲು ಸಾಕಷ್ಟು ಕಾರಣಗಳಿಂದ ಅಡ್ಡಿಯುಂಟಾಯಿತೆಂದು ಸಮಾಧಾನವಾದರೆ, ಆ ಪ್ರಾಧಿಕಾರಿಯು ಅವನಿಗೆ ಸದಸ್ಯತ್ವವನ್ನು ಪುನಃ ಕೊಡಬಹುದು.

(ii) ಕೆಳಕಂಡ ಯಾವುದೇ ಅನರ್ಹತೆಗಳಿಗೆ ಅವನು ಒಳಗಾದರೆ ಅವನು ತನ್ನ ಹುದ್ದೆಯನ್ನು ತೆರವು ಮಾಡಿದ್ದಾನೆಂದು ಭಾವಿಸತಕ್ಕುದು :– (1) ಅವನು ದಿವಾಳಿಯೆಂದು ನ್ಯಾಯಾಲಯದಿಂದ ನಿರ್ಣಯಿಸಲ್ಪಟ್ಟಿದ್ದರೆ; (2) ಸಕ್ಷಮ ನ್ಯಾಯಾಲಯದಿಂದ ಅವನು ಅಸ್ವಸ್ಥಚಿತ್ತನೆಂದು ಘೋಷಿಸಲ್ಪಟ್ಟಿದ್ದರೆ;

**ಈಗಾಗಲೇ ಪ್ರಕರಣ 14(1) ಮತ್ತು 14(2)ರಲ್ಲಿ ವಿವರಿಸಿರುವ ಕರ್ತವ್ಯಗಳೊಂದಿಗೆ ಈ ಕೆಳಕಂಡ ಚಟುವಟಿಕೆಗಳನ್ನು ಜಾಗೃತ ಸಮಿತಿಗಳು ಮಾಡಿದಾಗಲಷ್ಟೇ ಸಮಿತಿಗಳ ರಚನೆ ಹಾಗೂ ಅವುಗಳ ಅಸ್ಥಿತ್ವಕ್ಕೆ ಅರ್ಥ ಕಲ್ಪಿಸಿದಂತಾಗುತ್ತದೆ:**

| | |
|---|---|
| 1. | ಪ್ರತೀ 3 ತಿಂಗಳಿಗೊಮ್ಮೆ ಕಡ್ಡಾಯವಾಗಿ ಜಾಗೃತ ಸಮಿತಿಗಳ ಸಭೆಯನ್ನು ನಡೆಸಬೇಕು. ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಸರ್ಕಾರಕ್ಕೆ ಕಳುಹಿಸಬೇಕು ಹಾಗೂ ತ್ರಿಸದಸ್ಯ ಸಮಿತಿಗೆ ಕಳುಹಿಸಬೇಕು. |
| 2. | ಜಿಲ್ಲೆಯಲ್ಲಿ ಬಾಕಿ ಇರುವ ಜೀತಕಾರ್ಮಿಕರಿಂದ ಸ್ವೀಕೃತಿಯಾಗಿರುವ ಅರ್ಜಿಗಳ ಸಂಖ್ಯೆ, ವಿಲೇವಾರಿ ಕುರಿತು ಮಾಹಿತಿ ಪಡೆಯಬೇಕು. ಬಿಡುಗಡೆ ಹೊಂದಿದ ಜೀತಕಾರ್ಮಿಕರಿಗೆ ಬಿಡುಗಡೆ ಪ್ರಮಾಣ ಪತ್ರ, ತುರ್ತು ಪರಿಹಾರ ನೀಡಿರುವ ಕುರಿತು ಚರ್ಚಿಸಬೇಕು. ಇವುಗಳನ್ನು ನಡವಳಿಯಲ್ಲಿ ದಾಖಲಿಸಬೇಕು |
| 3. | ಬಿಡುಗಡೆಯಾಗಿರುವ ಜೀತವಿಮುಕ್ತರ ವಿವರಗಳಿರುವ ವಹಿಯನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಸದರಿ ವಹಿಯಲ್ಲಿ ಪ್ರಮಾಣ ಪತ್ರ ನೀಡಿರುವ ದಿನಾಂಕ, ತುರ್ತು ಪರಿಹಾರ ವಿತರಿಸಿರುವ ದಿನಾಂಕ, ಜೀತವಿಮುಕ್ತರ ಖಾಯಂ ವಿಳಾಸ ಇವುಗಳು ಇರುವ ಕುರಿತು ಖಾತರಿ ಪಡಿಸಿಕೊಳ್ಳಬೇಕು. |
| 4. | ಜೀತ ಪ್ರಕರಣಗಳಲ್ಲಿ ಸಂಕ್ಷಿಪ್ತ ವಿಚಾರಣೆ ಯಾವ ಹಂತದಲ್ಲಿದೆ ಎಂಬ ಮಾಹಿತಿ ಪಡೆಯಬೇಕು, ಶೀಘ್ರ ವಿಲೇವಾರಿಗೆ ಕ್ರಮ ವಹಿಸಬೇಕು. ಒಂದು ವೇಳೆ ಪ್ರಕರಣವು ಸಕ್ಷಮ ನ್ಯಾಯ್ಯಲಯದಲ್ಲಿ ನಡೆಯುತ್ತಿದ್ದರೆ, ನ್ಯಾಯಾಲಯಕ್ಕೆ ಪೂರಕ ಮಾಹಿತಿ ಒದಗಿಸಿರುವುದರ ಬಗ್ಗೆ ನಡವಳಿಯಲ್ಲಿ ದಾಖಲಿಸಬೇಕು. |
| 5. | ಸ್ವಂತ ರಾಜ್ಯಕ್ಕೆ ಸೇರಿದಂತಹ ಜೀತದಾಳುಗಳ ಪುನರ್ವಸತಿ ಪ್ರಗತಿಯನ್ನು ಪರಿಶೀಲಿಸಬೇಕು, ನಡವಳಿಯಲ್ಲಿ ಈ ಕುರಿತು ದಾಖಲಿಸಬೇಕು. ಸಮಿತಿಗಳಲ್ಲಿ ಉಪಸ್ಥಿತರಿರುವ ಬ್ಯಾಂಕ್ ಅಧಿಕಾರಿಗಳು, ಜೀತವಿಮುಕ್ತರು ಸ್ವಯಂ ಉದ್ಯೋಗ ಮಾಡಲು ಸಾಲ ಸೌಲಭ್ಯ ನೀಡುವ ಕುರಿತು ಚರ್ಚಿಸಿ ಅಗತ್ಯ ನೆರವು ನೀಡಲು ಕ್ರಮವಹಿಸಬೇಕು. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ಜೀತವಿಮುಕ್ತರಿಗೆ 24 ತಿಂಗಳ ಮಾಸಾಶನ, ಮೂಲಭೂತ ಸೌಲಭ್ಯಗಳನ್ನು ನೀಡಿರುವ ಕುರಿತು ಮಾಹಿತಿಯನ್ನು ಸಭೆಗೆ ಒದಗಿಸಬೇಕು, ಇವುಗಳನ್ನು ನಡವಳಿಯಲ್ಲಿ ದಾಖಲಿಸಬೇಕು. |
| 6. | ಜಾಗೃತ ಸಮಿತಿಗಳು ಜಿಲ್ಲಾಧಿಕಾರಿಗಳು/ ಉಪ–ವಿಭಾಗಾಧಿಕಾರಿಗಳಿಗೆ ಮಾಹಿತಿ ನೀಡಿ ಕೆಲವು ಅನಿರೀಕ್ಷಿತ ತನಿಖೆಗಳನ್ನು ನಡೆಸಬೇಕು. ಈ ಮೂಲಕ ಜೀತ ಸಮಸ್ಯೆಗಳ ಕುರಿತು ತಿಳಿಯಬೇಕು, ಒಂದು ವೇಳೆ ತನಿಖೆ ವೇಳೆ ಜೀತಕಾರ್ಮಿಕರುಗಳು ಇರುವುದು ವೇದ್ಯವಾದರೆ ಅವರುಗಳನ್ನು ಬಿಡುಗಡೆಗೊಳಿಸಲು ಸೂಕ್ತ ಕ್ರಮವಹಿಸಬೇಕು. |

| | |
|---|---|
| 7. | ಜೀತ ಪದ್ಧತಿ ಕುರಿತು ಸ್ಥಳೀಯ ಅಧಿಕಾರಿಗಳೊಂದಿಗೆ ಅರಿವು ಕಾರ್ಯಕ್ರಮಗಳನ್ನು ನಡೆಸಬೇಕು. ವಿವಿಧ ಉದ್ಯಮಗಳ ಸಂಘಟನೆಗಳೊಂದಿಗೆ ಸಭೆಗಳನ್ನು ಆಯೋಜಿಸಿ ಕಾರ್ಮಿಕ ನೀತಿ, ಕನಿಷ್ಠ ವೇತನಗಳ ಕುರಿತು ಅರಿವು ಮೂಡಿಸಬೇಕು. ಜೀತಕಾರ್ಮಿಕರುಗಳ ವಿಷಯವಾಗಿ ಪರಿಣಿತಿ ಹೊಂದಿದ ಸರ್ಕಾರೇತರ ಸಂಸ್ಥೆಗಳ ನೆರವನ್ನು ಈ ವಿಷಯವಾಗಿ ಪಡೆಯಬಹುದಾಗಿದೆ. |
| 8. | ಜಿಲ್ಲೆಯಲ್ಲಿ ಯಾವ ಉದ್ಯೋಗ ಕ್ಷೇತ್ರ/ವಲಯದಲ್ಲಿ ಹೆಚ್ಚಾಗಿ ಜೀತ ಪ್ರಕರಣಗಳು ಕಂಡು ಬರುತ್ತಿವೆ ಎಂಬುದರ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಡವಳಿಯಲ್ಲಿ ದಾಖಲಿಸಬೇಕು. |
| 9. | ಜೀತ ಪ್ರಕರಣಗಳನ್ನು ತಡೆಗಟ್ಟಲು ಕಾನೂನು ಚೌಕಟ್ಟಿನಲ್ಲಿ ಪರಿಕ್ರಮಗಳನ್ನು ಸ್ಥಳೀಯ ಪರಿಸ್ಥಿತಿಗನುಗುಣವಾಗಿ ರಚಿಸಿ ಅದನ್ನು ಸೂಕ್ತ ಪ್ರಾಧಿಕಾರಗಳ ನೆರವಿನಿಂದ ಅನುಷ್ಠಾನ ಮಾಡಿ, ಜಿಲ್ಲೆಯನ್ನು ಜೀತ ಮುಕ್ತವಾಗಿಸುವುದು. |

**1976ರ ಜೀತಕಾರ್ಮಿಕ ಪದ್ಧತಿ (ನಿರ್ಮೂಲನಾ) ಕಾಯ್ದೆಯ ಕಲಂ 13(2)ರನ್ವಯ ಜಿಲ್ಲಾ ಮಟ್ಟದ ಜಾಗೃತ ಸಮಿತಿಯ ಪುನರ್ ರಚನೆ ಮಾದರಿ ಪ್ರಸ್ತಾಪನೆ ನಮೂನೆ:**

| ಕ್ರ.ಸಂ | ಪ್ರವರ್ಗ | ವ್ಯಕ್ತಿ | ಪ್ರಾತಿನಿಧ್ಯ | ಸ್ಥಾನಮಾನ |
|---|---|---|---|---|
| 1 | ಅ) | ಜಿಲ್ಲಾದಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ | ..ಜಿಲ್ಲೆ | ಅಧ್ಯಕ್ಷರು |
| 2 | ಆ) | ಮಹಿಳಾ ಪ್ರತಿನಿಧಿ | ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರು | ಸದಸ್ಯರು |
| 3 | | ಪುರುಷ ಪ್ರತಿನಿಧಿ | ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರು | ಸದಸ್ಯರು |
| 4 | | ಪುರುಷ ಪ್ರತಿನಿಧಿ | ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರು | ಸದಸ್ಯರು |
| 5 | ಇ) | ಮಹಿಳಾ ಪ್ರತಿನಿಧಿ | ಸಮಾಜ ಸೇವಕರು | ಸದಸ್ಯರು |
| 6 | | ಪುರುಷ ಪ್ರತಿನಿಧಿ | ಸಮಾಜ ಸೇವಕರು | ಸದಸ್ಯರು |
| 7 | ಈ) | ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ | .ಜಿಲ್ಲಾ ಪಂಚಾಯತಿ | ಸದಸ್ಯರು |
| 8 | | ಮಹಿಳಾ ಪ್ರತಿನಿಧಿ | ಸ್ಥಳೀಯ ಸರ್ಕಾರೇತರ ಸಂಘ ಸಂಸ್ಥೆ | ಸದಸ್ಯರು |
| 9 | | ಪುರುಷ ಪ್ರತಿನಿಧಿ | ಸ್ಥಳೀಯ ಸರ್ಕಾರೇತರ ಸಂಘ ಸಂಸ್ಥೆ | ಸದಸ್ಯರು |
| 10 | ಉ) | ಬ್ಯಾಂಕ್ ಪ್ರತಿನಿಧಿ | ಹಣಕಾಸು/ ಸಾಲಸೌಲಭ್ಯ ನೀಡುವ ಸಂಸ್ಥೆ | ಸದಸ್ಯರು |
| 11 | | ಜಿಲ್ಲಾ ಆರಕ್ಷಕರು ಅದೀಕ್ಷಕರು | ..ಜಿಲ್ಲೆ | ಸದಸ್ಯರು |
| 12 | | ಜಿಲ್ಲಾ ಮಟ್ಟದ ಕಾರ್ಮಿಕ ಅಧಿಕಾರಿ | ..ಜಿಲ್ಲೆ | ಸದಸ್ಯರು |
| 13 | | ಜಿಲ್ಲಾ ಮಟ್ಟದ ರೇಷ್ಮೆ ಕೃಷಿ ಅಧಿಕಾರಿ | ..ಜಿಲ್ಲೆ | ಸದಸ್ಯರು |
| 14 | | ಜಿಲ್ಲಾ ಮಟ್ಟದ ಗಣಿ ಮತ್ತು ಭೂಗರ್ಭ ಇಲಾಖಾ ಅಧಿಕಾರಿ | ..ಜಿಲ್ಲೆ | ಸದಸ್ಯರು |
| 15 | | ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು ಹಾಗೂ ಅಪರ ದಂತಾಧಿಕಾರಿ. | ..ಜಿಲ್ಲೆ | ಸಂಚಾಲಕರು |

**1976ರ ಜೀತಕಾರ್ಮಿಕ ಪದ್ಧತಿ (ನಿರ್ಮೂಲನಾ) ಕಾಯ್ದೆಯ ಕಲಂ 13(3)ರನ್ವಯ ಉಪ-ವಿಭಾಗ ಮಟ್ಟದ ಜಾಗೃತ ಸಮಿತಿಯ ಪುನರ್ ರಚನೆ ಮಾದರಿ ಪ್ರಸ್ತಾಪನೆ ನಮೂನೆ:**

| ಕ್ರ.ಸಂ | ಪ್ರವರ್ಗ | ವ್ಯಕ್ತಿ | ಪ್ರಾತಿನಿಧ್ಯ | ಸ್ಥಾನಮಾನ |
|---|---|---|---|---|
| 1 | ಅ) | ಉಪ-ವಿಭಾಗಾಧಿಕಾರಿ ಹಾಗೂ ಉಪ-ವಿಭಾಗೀಯ ದಂಡಾಧಿಕಾರಿ | ಉಪ-ವಿಭಾಗ | ಅಧ್ಯಕ್ಷರು |
| 2 | ಆ) | ಮಹಿಳಾ ಪ್ರತಿನಿಧಿ | ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರು | ಸದಸ್ಯರು |
| 3 | | ಪುರುಷ ಪ್ರತಿನಿಧಿ | ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರು | ಸದಸ್ಯರು |
| 4 | | ಪುರುಷ ಪ್ರತಿನಿಧಿ | ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರು | ಸದಸ್ಯರು |
| 5 | ಇ) | ಮಹಿಳಾ ಪ್ರತಿನಿಧಿ | ಸಮಾಜ ಸೇವಕರು | ಸದಸ್ಯರು |
| 6 | | ಪುರುಷ ಪ್ರತಿನಿಧಿ | ಸಮಾಜ ಸೇವಕರು | ಸದಸ್ಯರು |
| 7 | ಈ) | ಕಾರ್ಯನಿರ್ವಾಹಕ ಅಧಿಕಾರಿ (ಉಪ-ವಿಭಾಗ ಕೇಂದ್ರ ಸ್ಥಾನ ವಿರುವ ತಾಲ್ಲೂಕು ಪಂಚಾಯತಿ) | .ತಾಲ್ಲೂಕು ಪಂಚಾಯತಿ | ಸದಸ್ಯರು |
| 8 | | ಮಹಿಳಾ ಪ್ರತಿನಿಧಿ | ಸ್ಥಳೀಯ ಸರ್ಕಾರೇತರ ಸಂಘ ಸಂಸ್ಥೆ | ಸದಸ್ಯರು |
| 9 | | ಪುರುಷ ಪ್ರತಿನಿಧಿ | ಸ್ಥಳೀಯ ಸರ್ಕಾರೇತರ ಸಂಘ ಸಂಸ್ಥೆ | ಸದಸ್ಯರು |
| 10 | ಉ) | ಬ್ಯಾಂಕ್ ಪ್ರತಿನಿಧಿ | ಹಣಕಾಸು/ ಸಾಲಸೌಲಭ್ಯ ನೀಡುವ ಸಂಸ್ಥೆ | ಸದಸ್ಯರು |
| 11 | | ಆರಕ್ಷಕ ಉಪ ಅಧಿಕ್ಷಕರು | ಉಪ-ವಿಭಾಗ | ಸದಸ್ಯರು |
| 12 | | ಉಪ-ವಿಭಾಗ ಮಟ್ಟದ ಕಾರ್ಮಿಕ ಅಧಿಕಾರಿ | ಉಪ-ವಿಭಾಗ | ಸದಸ್ಯರು |
| 13 | | ಉಪ-ವಿಭಾಗ ಮಟ್ಟದ ರೇಷ್ಮೆ ಕೃಷಿ ಅಧಿಕಾರಿ | ಉಪ-ವಿಭಾಗ | ಸದಸ್ಯರು |
| 14 | | ಉಪ-ವಿಭಾಗ ಮಟ್ಟದ ಗಣಿ ಮತ್ತು ಭೂಗರ್ಭ ಇಲಾಖಾ ಅಧಿಕಾರಿ | ಉಪ-ವಿಭಾಗ | ಸದಸ್ಯರು |
| 15 | | ತಹಶೀಲ್ದಾರ್ ಹಾಗೂ ತಾಲ್ಲೂಕು ದಂಡಾಧಿಕಾರ (ಉಪ ವಿಭಾಗ ಕೇಂದ್ರ ಸ್ಥಾನವಿರುವ ತಾಲೂಕು | ಉಪ-ವಿಭಾಗ | ಸಂಚಾಲಕರು |

# 12. ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಪತ್ರಗಳು

# 12. ಸರ್ಕಾರದ ಆದೇಶಗಳು, ಸುತ್ತೋಲೆಗಳು, ಪತ್ರಗಳು

**ಕರ್ನಾಟಕ ಸರ್ಕಾರ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

ಸಂಖ್ಯೆ: ಗ್ರಾಅಪ/6/RBL/2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, 2ನೇ ಮಹಡಿ, 3ನೇ ಹಂತ
ಬೆಂಗಳೂರು, ದಿನಾಂಕ: 20/09/2017

**ಸುತ್ತೋಲೆ**

ವಿಷಯ : ಸಂಜೀವಿನಿ, ರಾಜೀವ್ ಗಾಂಧಿ ಚೈತನ್ಯ ಯೋಜನೆ, ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಹಾಗೂ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಗಳಡಿ ಜೀತವಿಮುಕ್ತರನ್ನು ಪ್ರಥಮ ಆದ್ಯತೆ ಮೇರೆಗೆ ಫಲಾನುಭವಿಗಳಾಗಿ ಆಯ್ಕೆ ಮಾಡಿ ಈ ಕಾರ್ಯಕ್ರಮಗಳಡಿ ದೊರಕುವ ಸೌಲಭ್ಯಗಳನ್ನು ಇವರುಗಳಿಗೆ ವಿಸ್ತರಿಸುವ ಬಗ್ಗೆ.

****

ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976 ರನ್ವಯ ಜೀತದಾಳುಗಳನ್ನು ಗುರುತಿಸಿ, ಅವರುಗಳನ್ನು ಬಿಡುಗಡೆಗೊಳಿಸುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ. ಹೀಗೆ ಬಿಡುಗಡೆಗೊಂಡು ಜೀತವಿಮುಕ್ತರಾದವರನ್ನು ಪುನರ್ವಸತಿಗೊಳಿಸಿಸಾಮಾಜಿಕ ಹಾಗೂ ಆರ್ಥಿಕ ಭದ್ರತೆ ಒದಗಿಸಿ ಸಮಾಜದ ಮುಖ್ಯವಾಹಿನಿಯೊಂದಿಗೆ ಇವರುಗಳನ್ನು ಒಗ್ಗೂಡಿಸುವ ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿ ಸಾಧ್ಯವಾಗುವಂತೆ ಮಾಡುವ ಹೊಣೆಗಾರಿಕೆಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಡಿ ಬರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಯಡಿ ಬರುವ ಸಂಬಂಧಿಸಿದ ಅಧೀನ ಇಲಾಖೆಗಳ (Line departments) ದ್ದಾಗಿರುತ್ತದೆ.

ಸಂಜೀವಿನಿ ಯೋಜನೆಯಡಿ, ರಾಜ್ಯ ಸರ್ಕಾರ ಪ್ರಾಯೋಜಿತ ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ, ಕೇಂದ್ರ ಪ್ರಾಯೋಜಿತ ದೀನ್ ದಯಾಳ್ ಉಪಾಧ್ಯಾಯ ಯೋಜನೆಯಡಿ ಹಾಗೂ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ – ತರಬೇತಿ ಹಾಗೂ ಉದ್ಯೋಗಾವಕಾಶ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ / ಉದ್ಯೋಗಾಂಕ್ಷಿಗಳಿಗೆ ವಿಸ್ತರಿಸುವ ಕಾರ್ಯವನ್ನು ಜಿಲ್ಲಾ ಪಂಚಾಯಿತಿಗಳ ಮುಖೇನ ಅನುಷ್ಠಾನ ಮಾಡಲಾಗುತ್ತಿದೆ.

ಬಿಡುಗಡೆಯಾದಂತಹ ಜೀತವಿಮುಕ್ತರ ಪೈಕಿ–ಮಹಿಳೆಯರು, ಯುವಕರು ಸಾಕಷ್ಟು ಸಂಖ್ಯೆಯಲ್ಲಿದ್ದು, ಸದರಿ ಯೋಜನೆಗಳಡಿ ಫಲಾನುಭವಿಗಳಾಗಿ ಇವರುಗಳನ್ನು ಆಯ್ಕೆ ಮಾಡುವುದರಿಂದ ಇವರ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದ್ದು, ಪುನರ್ವಸತಿಯು ಲಭ್ಯವಾದಂತಾಗಿ ಜೀವನ ಮಟ್ಟ ಸುಧಾರಿಸಿ ಇವರುಗಳು ಪುನಃ ಜೀತಕ್ಕೆ ಒಳಗಾಗುವುದನ್ನು ತಪ್ಪಿಸಬಹುದಾಗಿದೆ.

ಈ ಮೇಲೆ ವಿವರಿಸಲಾದ ರಾಜ್ಯ ಹಾಗೂ ಕೇಂದ್ರ ಪ್ರಾಯೋಜಿತ ಯೋಜನೆಗಳಡಿ ಇನ್ನು ಮುಂದೆ ಫಲಾನುಭವಿಗಳನ್ನು ಆಯ್ಕೆ ಮಾಡುವಂತಹ ಸಂದರ್ಭದಲ್ಲಿ ಪ್ರಥಮ ಆದ್ಯತೆ ಮೇರೆಗೆ ಜೀತವಿಮುಕ್ತರನ್ನು ಆಯ್ಕೆ ಮಾಡಲು ತಿಳಿಸಿದೆ. ಹೀಗೆ ಜೀತದಾಳುಗಳನ್ನು ಸದರಿ ಯೋಜನೆಗಳಡಿ ಫಲಾನುಭವಿಗಳಾಗಿ ಆಯ್ಕೆ ಮಾಡಲು ಗ್ರಾಮ ಸಭೆ ಅನುಮೋದನೆ ಕಡ್ಡಾಯವಾಗಿರುವುದಿಲ್ಲ. ಜೀತವಿಮುಕ್ತರಿಗೆ ವಿತರಿಸಿರುವ ಬಿಡುಗಡೆ ಪ್ರಮಾಣ ಪತ್ರ ಹಾಗೂ ಗುರುತಿನ ಚೀಟಿಗಳ ಆಧಾರದ ಮೇಲೆ ಇವರುಗಳನ್ನು ಆಯ್ಕೆ ಮಾಡಬಹುದು.

ಈ ಬಗ್ಗೆ ಕೈಗೊಂಡ ಕ್ರಮದ ಕುರಿತು ಜಿಲ್ಲಾವಾರು ದೃಢೀಕೃತ ವರದಿಗಳನ್ನು ಕಳುಹಿಸಲು ಕೋರಿದೆ. ಜೊತೆಗೆ ಈ ಮೇಲೆ ತಿಳಿಸಿದ ಯೋಜನೆಗಳಡಿ ಫಲಾನುಭವಿಯಾಗಿ ಆಯ್ಕೆಯಾಗಿ, ಯಶಸ್ವಿಯಾಗಿ ತರಬೇತಿ ಅಥವಾ ಯೋಜನೆಯ ಸೌಲಭ್ಯ ಪಡೆದುಕೊಂಡ ಜೀತವಿಮುಕ್ತರ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಲು ತಿಳಿಸಿದೆ.

(ಸಹಿ)

(ಎನ್. ಕೃಷ್ಣಪ್ಪ ಕೋಡಿಪಾಳ್ಯ)

ನಿರ್ದೇಶಕರು ಹಾಗೂ

ಸರ್ಕಾರದ ಪ/ನಿ ಜಂಟಿ ಕಾರ್ಯದರ್ಶಿ

ರಾಜ್ಯ ಜೀತದಾಳುಗಳ ಪುನರ್ವಸತಿ ನೋಡಲ್ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

Phone : 080-220353852, karsgsy@gmail.com

**ಗೆ :**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು- ಅಗತ್ಯ ಕ್ರಮಕ್ಕಾಗಿ.
2. ಮಿಷನ್ ಡೈರೆಕ್ಟರ್, ಎನ್ ಆರ್ ಎಲ್ ಎಮ್ ಯೋಜನೆ, ಗ್ರಾಅಪ ಇಲಾಖೆ-ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು-ಅಗತ್ಯ ಕ್ರಮಕ್ಕಾಗಿ.
4. ಎಲ್ಲಾ ತಾಲ್ಲೂಕು ಪಂಚಾಯಿತಿ ಕಾಯಾನಿರ್ವಹಕಾಧಿಕಾರಿಗಳಿಗೆ (through CEOs) ಅಗತ್ಯ ಕ್ರಮವಹಿಸಲು ಕೋರಿದೆ.
5. ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು / ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (through CEOs)- ಅಗತ್ಯ ಕ್ರಮವಹಿಸಲು ಕೋರಿದೆ.

**ಪ್ರತಿಯನ್ನು :**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆರವರ ಆಪ್ತ ಕಾರ್ಯದರ್ಶಿಗಳಿಗೆ.
3. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪ ಇಲಾಖೆ.
4. ನಿರ್ದೇಶಕರು, ಗಣಕ ಕೋಶ, ಇಲಾಖಾ ವೆಬ್‌ಸೈಟಿನಲ್ಲಿ ಪ್ರಕಟಿಸಲು.

**ಕರ್ನಾಟಕ ಸರ್ಕಾರ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

ಸಂಖ್ಯೆ:ಗ್ರಾಅಪ/6/RBL/2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, 2ನೇ ಮಹಡಿ, 3ನೇ ಹಂತ
ಬೆಂಗಳೂರು, ದಿನಾಂಕ: 20/09/2017

**ಸುತ್ತೋಲೆ**

ವಿಷಯ : ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976ರನ್ವಯ ಜೀತದಾಳುಗಳನ್ನು ಗುರುತಿಸುವ ಹಾಗೂ ಬಿಡುಗಡೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ಉಪ-ವಿಭಾಗಾಧಿಕಾರಿಗಳು ಅನುಸರಿಸಬೇಕಾಗಿರುವ ಕರ್ತವ್ಯಗಳ ಕುರಿತು.

ಉಲ್ಲೇಖ: 1. ಜೀತದಾಳುಗಳ ಪುನರ್ವಸತಿಗೆ ಸಂಬಂಧಿಸಿದ ರಾಜ್ಯ ಮಟ್ಟದ ಉನ್ನತ ಸಮಿತಿ ಸಭಾ ನಡವಳಿ ದಿನಾಂಕ:18/06/2018.

2.ಜೀತದಾಳುಗಳ ಪುನರ್ವಸತಿಗೆ ಸಂಬಂಧಿಸಿದ ರಾಜ್ಯ ಮಟ್ಟದ ಉನ್ನತ ಸಮಿತಿ ಸಭಾ ನಡವಳಿ ದಿನಾಂಕ:29/01/2018.

****

ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976ರನ್ವಯ ಜೀತದಾಳುಗಳನ್ನು ಗುರುತಿಸಿ, ಅವರುಗಳನ್ನು ಬಿಡುಗಡೆಗೊಳಿಸುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ಹಾಗೂ ಅವರಿಂದ ಪ್ರಾಧಿಕೃತವಾದಂತಹ ಅಧಿಕಾರಿಗಳಿಗೆ ವಹಿಸಲಾಗಿದೆ.

ಪ್ರಸ್ತುತ ದಿನಗಳಲ್ಲಿ ಜೀತ ಪದ್ಧತಿಯು ನಗರ ಹಾಗೂ ನಗರದ ಹೊರವಲಯಗಳಲ್ಲಿ - ಇಟ್ಟಿಗೆಗೂಡು, ಸಣ್ಣ ಕೈಗಾರಿಕೆ, ಕಲ್ಲು ಕ್ವಾರಿ ಇಂತಹ ಕಡೆಗಳಲ್ಲಿ ಅವ್ಯಾಹತವಾಗಿ ಸಾಗಿದೆ. ಒರಿಸ್ಸಾ, ಬಿಹಾರ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಿಂದ ಬಂದ ಕಾರ್ಮಿಕರು ಜೀತ ಪದ್ಧತಿಗೆ ಒಳಗಾಗುತ್ತಿದ್ದಾರೆ. ಕನಿಷ್ಠ ವೇತನ, ಆರೋಗ್ಯ ವಿಮೆ, ಕುಡಿಯುವ ನೀರು, ಶೌಚಾಲಯ, ಶಿಕ್ಷಣ ಸೌಲಭ್ಯದಿಂದ ಅವರು ಹಾಗೂ ಅವರನ್ನು ನಂಬಿ ಬಂದ ಕುಟುಂಬಗಳು ಈ ಪದ್ಧತಿಗೆ ಸಿಲುಕಿ ಸ್ವಾತಂತ್ರ್ಯ ವಂಚಿತರಾಗಿ ಭಯದ ವಾತಾವರಣದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಇದಲ್ಲದೇ ಗ್ರಾಮೀಣ ಪ್ರದೇಶದ ಕೃಷಿ ವಲಯದಲ್ಲಿ ಈ ಪದ್ಧತಿ ಈಗಲೂ ರೂಢಿಯಲ್ಲಿದೆ.

ಈ ಸಂದರ್ಭದಲ್ಲಿ ಸರ್ಕಾರೇತರ ಸಂಸ್ಥೆಗಳ, ಸಾರ್ವಜನಿಕರ ಮೂಲಕ, ಮಾಧ್ಯಮಗಳ ಮೂಲಕ ಅಥವಾ ಖುದ್ದು ಜೀತದಾಳುಗಳ ಮೂಲಕ ದೂರು ಅಥವಾ ಅರ್ಜಿಗಳು ಸ್ವೀಕಾರವಾದಂತಹ ಸಂದರ್ಭದಲ್ಲಿ ಆಯಾ ಉಪ-ವಿಭಾಗಾಧಿಕಾರಿಗಳು ತಮ್ಮ ಅಧೀನ ಅಧಿಕಾರಿಗಳು/ಸಿಬ್ಬಂದಿಗಳು ಪ್ರಕರಣಗಳ ಕುರಿತು ವರದಿ ನೀಡಿದಾಗ ಸಾಕ್ಷ್ಯಾಧಾರಗಳನ್ನು ವಿವೇಚನೆಯಿಂದ ವಿಚಾರಣೆ ಮಾಡಿ, ವಿಚಾರಣೆ ಮಾಡುವಂತಹ ಸಂದರ್ಭದಲ್ಲಿ ಚಾಲ್ತಿ ಕೇಂದ್ರ ಸರ್ಕಾರದ ಮಾರ್ಗಸೂಚಿ 18/05/2016ರನ್ವಯ ಹಾಗೂ Systems of Procedures(SoP) ರನ್ವಯ, ಶ್ರೀ ಶಂಕರನ್ ವರದಿಗಳು ಪಾಲಿಸಿ ವಿಚಾರಣೆ ನಡೆಸಲು ಕೋರಿದೆ. ವಿಚಾರಣೆ ನಡೆಸದೇ ಯಾವುದೇ ತನಿಖಾ ವರದಿ (ಅನುಬಂಧ 1 ರಿಂದ 9 ಅಥವಾ ಕೇಂದ್ರ ಸರ್ಕಾರದ (ಪ್ರಶ್ನಾವಳಿ)ಗಳನ್ನು ಹಿಂದಿರುಗಿಸುವಂತಿಲ್ಲ. ಒಂದು ವೇಳೆ ಯಾವುದೇ ವಿಚಾರಣೆ ನಡೆಸದೇ ವರದಿಗಳನ್ನು ಹಿಂದಿರುಗಿಸಿದಲ್ಲಿ ಅಂತಹ (ಪ್ರಕರಣಗಳನ್ನು ಪುನರ್ ವಿಚಾರಣೆ ಮಾಡಬೇಕೆಂದು ಉಲ್ಲೇಖ-1ರ ರಾಜ್ಯ ಮಟ್ಟದ ಉನ್ನತ ಸಮಿತಿ ಸಭೆಯಲ್ಲಿ ನಿರ್ಧಾರವಾಗಿದ್ದು, ಈಗಾಗಲೇ ವಿವರಿಸಿದಂತೆ ವಿಚಾರಣೆಯನ್ನು ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು.

ಜೀತದಾಳುಗಳನ್ನು ಗುರುತಿಸುವ ಕಾರ್ಯವನ್ನು ಜೀತ ಪದ್ಧತಿ(ರದ್ಧತಿ)ಕಾಯ್ದೆ, 1976ರನ್ವಯ ಜಿಲ್ಲಾಧಿಕಾರಿಗಳಿಗೆ ವಹಿಸಿದ್ದರೂ, ಕಾಯ್ದೆಯಲ್ಲಿ ಅವಕಾಶವಿರುವಂತೆ ಅವರು ಈ ಕರ್ತವ್ಯವನ್ನು ಅವರ ಅಧೀನ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಲು ಅವಕಾಶವಿದೆ. ಬಹಳ ಜಿಲ್ಲೆಗಳಲ್ಲಿ ಜೀತದಾಳುಗಳ ಗುರುತಿಸುವಿಕೆ ಹಾಗೂ ವಿಚಾರಣೆ

ಕೆಲಸವನ್ನು ತಹಸೀಲ್ದಾರ್ ಹಂತದ ಅಧಿಕಾರಿಗಳು ನಿರ್ವಹಿಸುತ್ತಿದ್ದಾರೆ. ಆದರೆ, ಈ ಕೆಲಸದ ಮೇಲ್ವಿಚಾರಣೆ ಹಾಗೂ ಪರಿಣಾಮಕಾರಿಯಾಗಿ ಗುರುತಿಸುವಿಕೆ ಕೆಲಸವು ನಡೆಯುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳಲು ಬರುವಂತಹ ಅರ್ಜಿಗಳ ಪೈಕಿ ಕ್ರಮವಾಗಿ ಅರ್ಜಿ ವಿಚಾರಣೆಯನ್ನು ಜಿಲ್ಲಾಧಿಕಾರಿಗಳು ಹಾಗೂ ಉಪ-ವಿಭಾಗಾಧಿಕಾರಿಗಳು 2% ಮತ್ತು 8% ಖುದ್ದು ಸ್ಥಳ ತನಿಖೆ ಮಾಡಿ ಜೀತ ಪ್ರಕರಣಗಳ ಅರ್ಜಿ ವಿಚಾರಣೆ ನಡೆಸಬೇಕೆಂದು ಉಲ್ಲೇಖ-2ರ ರಾಜ್ಯ ಮಟ್ಟದ ಉನ್ನತ ಸಮಿತಿ ಸಭೆಯಲ್ಲಿ ನಿರ್ಧಾರವಾಗಿದ್ದು, ಈ ಕುರಿತು ಇನ್ನುಮುಂದೆ ಸಂಬಂಧಿಸಿದ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸಲು ಈ ಮೂಲಕ ತಿಳಿಸಿದೆ.

**ಪ್ರತಿಯನ್ನು** :

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತರಲು ಆಪ್ತ ಕಾರ್ಯದರ್ಶಿಗಳಿಗೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ.

(ಸಹಿ)/-
(ಡಾ. ಎನ್. ನಾಗಾಂಬಿಕ ದೇವಿ, ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಪಂಚಾಯತ್ ರಾಜ್ ಇಲಾಖೆ,

(ಸಹಿ)/-
(ಡಾ. ರಾಜ್‌ಕುಮಾರ್ ಖತ್ರಿ, ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ.

# ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ:13:ಆರ್‌ಬಿಎಲ್:2019

ಕರ್ನಾಟಕ ಸರ್ಕಾರದ ಸಚಿವಾಲಯ,
#201, 3ನೇ ಗೇಟ್, 2ನೇ ಹಂತ,
ಬಹುಮಹಡಿ ಕಟ್ಟಡ, ಬೆಂಗಳೂರು.
ದಿನಾಂಕ: 05-02-2020.

## ಸುತ್ತೋಲೆ

ವಿಷಯ : ಜೀತದಾಳುಗಳ ಗುರುತಿಸುವಿಕೆ, ಸಮೀಕ್ಷೆ, ಜೀತ ಪದ್ಧತಿ(ರದ್ಧತಿ) ಕಾಯ್ದೆ, ಕಲಂ 13(2) ಮತ್ತು 13(3)ರಡಿ ಜಾಗೃತಿ ಸಮಿತಿಗಳನ್ನು ರಚಿಸುವ ಕುರಿತು ಪಾಲಿಸಬೇಕಾಗಿರುವ ಅಂಶಗಳು.

ಉಲ್ಲೇಖ: 1. Report by Sri Lakshmidyhara Mishra, IAS(Retd) representative From Ministry of Labour datred – 1/8/2019.

2. O.M.issued by Deputy Secy to GOI, MoLE, No.F.No.S-11012/01/2015-BL, dated-18/5/2016.

**ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976 :**

ಈ ಕಾಯ್ದೆಯ ಸೆಕ್ಷನ್ 10 ರಿಂದ 12 ರವರೆಗೆ ಜಿಲ್ಲೆಗಳಲ್ಲಿ ಜೀತದಾಳುಗಳನ್ನು ಗುರುತಿಸುವ ಅಧಿಕಾರಿ/ ಅಧಿಕಾರಿಗಳು, ಅಪರ ವ್ಯಾಪ್ತಿ ಹಾಗೂ ಜವಾಬ್ದಾರಿಗಳನ್ನು ವಿವರಿಸಲಾಗಿದೆ. ಇದರನ್ವಯ, ಜಿಲ್ಲಾಧಿಕಾರಿಗಳು ಹಾಗೂ ಅವರಿಂದ ಪ್ರಾಧೀಕೃತವಾದಂತಹ ಅಧಿಕಾರಿಗಳು, ಅವರ ಜಿಲ್ಲೆಯಲ್ಲಿ ಜೀತ ಪದ್ಧತಿಯಡಿ ದುಡಿಯುತ್ತಿರುವ ಕಾರ್ಮಿಕರನ್ನು ಜೀತದಿಂದ ವಿಮುಕ್ತಿಗೊಳಿಸಿ ಅವರಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಯನ್ನು ಒದಗಿಸುವ ಮೂಲಕ ಜೀತ ಪದ್ಧತಿಯನ್ನು ನಿರ್ಮೂಲನೆ ಮಾಡಲು ಅವಶ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿ ವಿವರಿಸಿದೆ. ಆದ್ದರಿಂದ ಜೀತದಾಳುಗಳನ್ನು ಗುರುತಿಸಿ, ಬಿಡುಗಡೆಗೊಳಿಸಿ ಅವರಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಯನ್ನು ಒದಗಿಸುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ನೀಡಿದೆ. ಈ ಜವಾಬ್ದಾರಿಯನ್ನು ಲೋಪವಿಲ್ಲದೆ ಕಾರ್ಯಗತಗೊಳಿಸಬೇಕು.

ಜೀತ ಪದ್ಧತಿಯಡಿ ಒಬ್ಬ ವ್ಯಕ್ತಿಯು ತನ್ನ ಮೂಲಭೂತ ಸ್ವಾತಂತ್ರ್ಯವನ್ನು ಕಳೆದುಕೊಂಡು ಕೆಲಸ ಮಾಡುವ ಪರಿಸ್ಥಿತಿಗೆ ಒಳಗಾಗಿರುತ್ತಾನೆ. ಸಂವಿಧಾನದ ಆಶೋತ್ತರಗಳು ಹಾಗೂ ಮೂಲಭೂತ ಹಕ್ಕುಗಳು ಎಲ್ಲರಿಗೂ ಸಮಾನವಾಗಿ ದೊರಕಬೇಕಾಗಿರುವ ನಿಟ್ಟಿನಲ್ಲಿ ಜೀತ ಪದ್ಧತಿಯನ್ನು ನಿರ್ಮೂಲನೆ ಮಾಡುವ ಹೊಣೆಗಾರಿಕೆ ಜಿಲ್ಲಾಧಿಕಾರಿಗಳಿಗೆ ಇದೆ. ಆದ್ದರಿಂದ, ಜೀತಕ್ಕಿರುವ ಕಾರ್ಮಿಕರನ್ನು ಜೀತದಿಂದ ವಿಮುಕ್ತಿಗೊಳಿಸುವುದು ಅತೀ ಮುಖ್ಯ ಹಾಗೂ ಅವಶ್ಯಕ. ಜೀತ ಪದ್ಧತಿ(ರದ್ಧತಿ) ಕಾಯ್ದೆಯನ್ನು ಜೀತ ಕಾರ್ಮಿಕರಿಗೆ ಪೂರಕವಾದ ರೀತಿಯಲ್ಲಿ ಅನ್ವಯಿಸಬೇಕು.

ಜೀತದಾಳುಗಳ ಕುಂದು ಕೊರತೆ ನಿವಾರಿಸಲು ಹಾಗೂ ಈ ಕುರಿತಂತೆ ಬರುವ ದೂರುಗಳನ್ನು ಸ್ವೀಕರಿಸಿ ದೂರುಗಳ ಮೇಲೆ ಕ್ರಮವಹಿಸಲು ಜಿಲ್ಲಾ ಹಂತದಲ್ಲಿ ಒಂದು ಸಾಂಸ್ಥಿಕ ವ್ಯವಸ್ಥೆ ಆಗಬೇಕು. ಈ ಕೋಶವು ವಿವಿಧ ಇಲಾಖಾ ಜಿಲ್ಲಾಧಿಕಾರಿಗಳನ್ನು ಒಳಗೊಂಡಿದ್ದು ಪ್ರತೀ 15 ದಿನಕ್ಕೊಮ್ಮೆ ಕುಂದು ಕೊರತೆಗಳ ಬಗ್ಗೆ ಸಭೆ ನಡೆಸಿ ಸ್ಥಳದಲ್ಲೇ ಪರಿಹಾರವನ್ನು ಕಂಡುಕೊಂಡು ಆದೇಶ ಮಾಡಬೇಕು ಹಾಗೂ ಕ್ರಮದ ಕುರಿತು ಸರ್ಕಾರಕ್ಕೆ ಅನುಪಾಲನೆ ಕಳುಹಿಸಬೇಕು. (ಉಲ್ಲೇಖ-1ರ ವರದಿಯನುಸಾರ ಕೂಡಲೇ ಕೋಶವನ್ನು ಸ್ಥಾಪಿಸಲು ಎಲ್ಲಾ ಜಿಲ್ಲಾಧಿಕಾರಿಗಳು ಕ್ರಮವಹಿಸಬೇಕು).

### ಜೀತದಾಳುಗಳ ಸಮೀಕ್ಷೆ :

ರಾಜ್ಯದಲ್ಲಿ ಜೀತದಾಳುಗಳ ಸಮೀಕ್ಷೆಯನ್ನು 2012ರಿಂದ 2014ರಲ್ಲಿ ಕೈಗೊಳ್ಳಲು ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡಿದೆ. ಅದರಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರವು ನೀಡಿದ್ದ ಅನುಬಂಧ-1 ರಿಂದ ಅನುಬಂಧ-9ರವರೆಗಿನ ಪ್ರಶ್ನಾವಳಿಗಳನ್ವಯ ಸಮೀಕ್ಷೆ ನಡೆಸಿ ನಿಗಧಿತ ಪ್ರಪತ್ರದಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಆದರೆ, ಈ ಸಮೀಕ್ಷೆ ನಡೆಸಿ 5 ವರ್ಷಗಳ ಮೇಲಾಗಿದೆ. ತದನಂತರ ಗ್ರಾಮವಾರು ಸಮೀಕ್ಷೆಯನ್ನು ನಡೆಸಿರುವುದಿಲ್ಲ.

ಆದ್ದರಿಂದ, ಜೀತದಾಳುಗಳ ಸಮೀಕ್ಷೆಯನ್ನು ನಡೆಸಲು ಪೂರ್ವ ಸಿದ್ಧತೆಯೊಂದಿಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗ್ರಾಮವಾರು ಜೀತದಾಳುಗಳ ಸಮೀಕ್ಷೆಯನ್ನು ವೈಜ್ಞಾನಿಕವಾಗಿ ಕೈಗೊಳ್ಳಬೇಕಿದೆ. ಕಳೆದ ಬಾರಿ ನಡೆಸಿದ ಸಮೀಕ್ಷೆಯ ನ್ಯೂನತೆಗಳನ್ನು ಸರಿಪಡಿಸಿಕೊಂಡು, ಕೆಲವು ಮಾರ್ಪಾಡುಗಳೊಂದಿಗೆ ಜೀತದಾಳುಗಳ ಸಮೀಕ್ಷೆಯನ್ನು ನಡೆಸಿ ವರದಿಯನ್ನು ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು ಅವರ ಶಿಫಾರಸ್ಸು/ಟಿಪ್ಪಣಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಬೇಕು.

**ಸಮೀಕ್ಷಾ ಸಮಯದಲ್ಲಿ ಅನುಸರಿಸಬೇಕಿರುವ ಮಾರ್ಗಸೂಚಿಗಳು ಹಾಗೂ ಸಮೀಕ್ಷಾ ಪೂರ್ವ ಸಿದ್ಧತೆ ಕುರಿತು:**

ಯಾವ ಜಿಲ್ಲೆಗಳಲ್ಲಿ ಮತ್ತು ಉಪ-ವಿಭಾಗಗಳಲ್ಲಿ ಜಾಗೃತಿ ಸಮಿತಿಗಳ ಅವಧಿಯು ಮುಕ್ತಾಯವಾಗಿರುವುದೋ, ಅಂತಹ ಜಿಲ್ಲೆಗಳು ಜಾಗೃತಿ ಸಮಿತಿಗಳ ಪುನರ್ ರಚನೆಯನ್ನು ಸರ್ಕಾರವು ಈಗಾಗಲೇ ಕಳುಹಿಸಿರುವ ನಮೂನೆಯನ್ವಯ ರಚಿಸಲು ಕ್ರಮವಹಿಸಬೇಕು. ಯಾವುದೇ ಕಾರಣಕ್ಕೂ ವಿಳಂಬ ಮಾಡುವಂತಿಲ್ಲ.

ಜಿಲ್ಲಾ ಹಾಗೂ ಉಪ-ವಿಭಾಗ ಮಟ್ಟದ ಜಾಗೃತಿ ಸಮಿತಿಗಳ ಅಧ್ಯಕ್ಷರುಗಳಾದ ಜಿಲ್ಲಾಧಿಕಾರಿಗಳು ಹಾಗೂ ಉಪ-ವಿಭಾಗಾಧಿಕಾರಿಗಳು ಜೀತದಾಳುಗಳ ಸಮೀಕ್ಷೆ ನಡೆಸಲು ಸಮಿತಿಗಳ ಸಭೆಯನ್ನು ಆಯೋಜಿಸಿ ಸಮೀಕ್ಷಾ ತಂಡ/ ಕಾರ್ಯಪಡೆಯನ್ನು ರಚಿಸಲು ಕ್ರಮವಹಿಸಬೇಕು.

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಬಂಧುವಾ ಮುಕ್ತಿ ಮೋರ್ಚ ಪ್ರಕರಣದ ತೀರ್ಪಿನ ಕಂಡಿಕೆ 35ರಲ್ಲಿ ಜೀತದಾಳುಗಳನ್ನು ಗುರುತಿಸಲು ಕಾರ್ಯಪಡೆಯನ್ನು ರಚನೆ ಮಾಡಬೇಕು ಎಂದು ತಿಳಿಸಿದೆ. ಅದರಂತೆ, ಉಲ್ಲೇಖ-1ರ ವರದಿಯನ್ವಯ ರಚನೆ ಮಾಡಲಾಗುವ ಕಾರ್ಯಪಡೆಯಲ್ಲಿ ಕನಿಷ್ಟ 2 ವ್ಯಕ್ತಿಗಳು ಇರಬೇಕು. ಅದರಲ್ಲಿ ಒಬ್ಬ ವ್ಯಕ್ತಿಯು ಜಿಲ್ಲಾಡಳಿತದ ಪ್ರತಿನಿಧಿಯಾಗಿದ್ದು, ಮತ್ತೊಬ್ಬರು ಸ್ವಯಂ ಸೇವಾ ಸಂಸ್ಥೆಗೆ ಸೇರಿದವರಾಗಿರಬೇಕು.

ಸ್ವಯಂ ಸೇವಾ ಸಂಸ್ಥೆಗಳಿಂದ ಕಾರ್ಯಪಡೆಗೆ ವ್ಯಕ್ತಿಗಳನ್ನು ಆಯ್ಕೆ ಮಾಡುವಾಗ, ಜಿಲ್ಲೆಯಲ್ಲಿನ ಎಲ್ಲಾ ಸ್ವಯಂ ಸೇವಾ ಸಂಸ್ಥೆಗಳನ್ನು ಪಟ್ಟಿ ಮಾಡಿ ಜಾಗೃತಿ ಸಮಿತಿಯಲ್ಲಿ ಇಟ್ಟು, ಸಮಿತಿಯು ಆಯ್ಕೆ ಮಾಡುವ ಸ್ವಯಂ ಸೇವಾ ಸಂಸ್ಥೆಯಿಂದ ವ್ಯಕ್ತಿಗಳನ್ನು ಕಾರ್ಯಪಡೆಗೆ ಸೇರಿಸಿಕೊಳ್ಳಬೇಕು.

ಸಮೀಕ್ಷಾ ಕಾರ್ಯಪಡೆಯು ಆರಂಭಿಸುವ ಮುನ್ನ ಜಿಲ್ಲೆಯಲ್ಲಿನ ಎಲ್ಲಾ ತರಹದ ಉದ್ದಿಮೆಗಳನ್ನು ಮಾಲೀಕರ ವಿವರದೊಂದಿಗೆ ಹಾಗೂ ಕಾರ್ಮಿಕರ ಸಂಸ್ಥೆಗಳೊಂದಿಗೆ, ಪರವಾನಗಿ ವಿವರ, ಸಂಸ್ಥೆಯ ವಿಳಾಸ, ಸಂಪರ್ಕ ಸಂಖ್ಯೆ ಸಮೇತ ಒಂದು ವಹಿಯಲ್ಲಿ ಕಡ್ಡಾಯವಾಗಿ ದಾಖಲೆ ಮಾಡಬೇಕು. ಕಲ್ಲು, ಕ್ವ್ಯಾರಿ, ಚರ್ಮ ಸಂರಕ್ಷಣಾ ಘಟಕ, ಮೀನುಗಾರಿಕೆ, ರೈಸ್ ಮಿಲ್, ಬ್ಯಾಗ್ ತಯಾರಿಕೆ, ಪ್ಲಾಂಟೇಶನ್‌ಗಳು (ರೇಷ್ಮೆ, ಕಾಫಿ, ಟೀ, ಮಸಾಲ ಬೆಳೆಗಳು) ಇಟ್ಟಿಗೆ ಕಾರ್ಖಾನೆ, ಗುಡಿ ಕೈಗಾರಿಕೆ ಮುಂತಾದ ಎಲ್ಲಾ ಉದ್ದಿಮೆಗಳ ವಿವರವು ಈ ವಹಿಯಲ್ಲಿ ಲಭ್ಯವಾಗಬೇಕು.

ನಂತರದಲ್ಲಿ ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976ರನ್ವಯ ಜೀತಕ್ಕೆ ಕಾರ್ಮಿಕರನ್ನು ಇಟ್ಟುಕೊಳ್ಳುವುದು ಸಂಜ್ಞೇಯ ಅಪರಾಧ ಎಂದು ತಿಳಿಸುವುದರ ಜೊತೆಗೆ ಕಾಯ್ದೆಯ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಕಾರ್ಯಪಡೆಗಳಿಗೆ ವಿವರಿಸಬೇಕು.

ಗ್ರಾಮವಾರು ತನಿಖೆ ಮಾಡುವಾಗ ಯಾವ ವಲಯದಲ್ಲಿ ಈ ಸಮೀಕ್ಷೆ ಮಾಡಲಾಗಿದೆ ಎಂಬುದನ್ನು ಸಹಾ ದಾಖಲು ಮಾಡಬೇಕು. ಸಮೀಕ್ಷೆ ಪ್ರಪತ್ರವು ಉಲ್ಲೇಖ-2ರ ಮಾರ್ಗಸೂಚಿಯಲ್ಲಿ ಉಲ್ಲೇಖ ಮಾಡಿರುವ ಅನುಬಂಧ-1ರನ್ವಯ ಪ್ರಶ್ನಾವಳಿಯನ್ನು ಕೇಳಿ ಮಾಹಿತಿಯನ್ನು ದಾಖಲಿಸಬೇಕು. ಹಳೆಯ ಸಮೀಕ್ಷಾ ಅನುಬಂಧ 1 ರಿಂದ 9ನ್ನು ಉಪಯೋಗಿಸುವ ಅವಶ್ಯಕತೆಯಿರುವುದಿಲ್ಲ.

ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಗಳು ಜೀತದಾಳುವಿಗೆ, ಅವರ ಯಜಮಾನನ ಅನುಪಸ್ಥಿತಿಯಲ್ಲಿ ಮತ್ತು ಒಬ್ಬ ಸ್ವಯಂ ಸೇವಾ ಸಂಘಟನೆಯ ಪ್ರತಿನಿಧಿ ಅಥವಾ ಒಬ್ಬ ಸಮಾಜ ಸೇವಕರ ಸಮಕ್ಷಮ, ಮುಂಗಡ ಅಥವಾ ಬೇರಾವುದೇ ತರಹದ ಬಾಧ್ಯತೆ ಬಗ್ಗೆ, ವೇತನ, ಕೆಲಸ ಮಾಡುವ ಸ್ವಾತಂತ್ರ್ಯ(ಕೆಲಸ ಮಾಡುವ ಜಾಗ ಬಿಟ್ಟು ಬೇರೆಡೆ ಕೆಲಸ ಮಾಡಲು ಅವನಿಗೆ ಸ್ವಾತಂತ್ರ್ಯವಿದೆಯೇ ಎಂಬುದರ ಬಗ್ಗೆ) ಮುಂತಾದ ವಿಷಯಗಳ ಬಗ್ಗೆ ಚುಟುಕಾಗಿ ಕೆಲವು ಪ್ರಶ್ನೆಗಳನ್ನು ಕೇಳಿ ವ್ಯಕ್ತಿಯು ಜೀತಕ್ಕಿರುವ ಬಗ್ಗೆ ಮಾಹಿತಿಯನ್ನು ಪಡೆಯಬೇಕು. ವಿಚಾರಣೆಯು ವಿಷಯಾಂತರವಾಗಬಾರದು. ಅಸಂಬದ್ಧ/ ವೈಯಕ್ತಿಕ ಪ್ರಶ್ನೆಗಳನ್ನು ಕೇಳಬಾರದು. ಶ್ರೀ ಸಂಕರನ್‌ರವರ ಶಿಫಾರಸ್ಸಿನನ್ವಯ ಮಾಲೀಕರೆದುರಿಗೇ ಜೀತದಾಳುಗಳನ್ನು ಪ್ರಶ್ನಿಸುವಂತಿಲ್ಲ. ಅವರನ್ನು ಪ್ರತ್ಯೇಕ ಸ್ಥಳಕ್ಕೆ ಕರೆದೊಯ್ದು ಪ್ರಶ್ನಿಸಲು ತರಬೇತಿ ನೀಡಬೇಕು.

ಉಪ-ವಿಭಾಗೀಯ ಹಾಗೂ ಜಿಲ್ಲಾ ಹಂತದಲ್ಲಿ ಮಾಹಿತಿಯನ್ನು ಗಣಕೀಕರಣ ಮಾಡಬೇಕು. ಗುರುತಿಸಲಾದ ಜೀತದಾಳುಗಳ ಪೈಕಿ ಸ್ಥಳೀಯರು ಹಾಗೂ ವಲಸಿಗರ ಮಾಹಿತಿಯನ್ನು ದಾಖಲಿಸಬೇಕು. ಎಲ್ಲಾ ವಲಸಿಗ ಜೀತದಾಳುಗಳಿಗೆ ಸಮೀಕ್ಷಾ ವರದಿಯ ಪ್ರತಿ ಮತ್ತು ಬಿಡುಗಡೆ ಪತ್ರಗಳನ್ನು ನೀಡಿ ಪೋಲೀಸ್ ಹಾಗೂ ತಹಸೀಲ್ದಾರ್ ಹುದ್ದೆಗಿಂತ ಕಡಿಮೆಯಿಲ್ಲದ ಅಧಿಕಾರಿಯೊಂದಿಗೆ ಅವರ್ ಸ್ವಂತ ರಾಜ್ಯಗಳಿಗೆ ಪ್ರತ್ಯಾವರ್ತನೆ (Repatriation) ಮಾಡಬೇಕು. ಸ್ವಂತ ಅಥವಾ ಹೊರ ರಾಜ್ಯದ ಜೀತದಾಳುಗಳಿಗೆ ಬಾಲ ಜೀತ ಕಾರ್ಮಿಕರು ಒಳಗೊಂಡಂತೆ (6ರಿಂದ 14 ವರ್ಷ ವಯೋಮಿತಿಯಲ್ಲಿರುವ ಬಾಲ ಕಾರ್ಮಿಕರು) ಕಡ್ಡಾಯವಾಗಿ ಎಲ್ಲಾ ಜೀತದಾಳುಗಳಿಗೂ ರೂ.20,000/- ದಂತೆ ತುರ್ತು ಪರಿಹಾರವನ್ನು ನೀಡಬೇಕು. ಎಲ್ಲಾ ಜೀತ ಪ್ರಕರಣಗಳನ್ನು ಈಖಖ ಮಾಡಬೇಕು ನಂತರ ಪ್ರಕರಣವು ಕೇವಲ ಜೀತ ಪದ್ಧತಿಗೆ ಮಾತ್ರ ಸಂಬಂಧಿಸಿದಲ್ಲಿ ಆ ಪ್ರಕರಣವನ್ನು ಉಪ-ವಿಭಾಗಾಧಿಕಾರಿಗಳು ಜೀತ ಕಾಯ್ದೆ, 1976 ಕಲಂ 21ರನ್ವಯ ಸಂಕ್ಷಿಪ್ತ ವಿಚಾರಣೆ ಮಾಡಬೇಕು. ಬೇರೆ ತರಹದ ಅಪರಾಧಗಳು ಜೀತ ಅಪರಾಧದೊಂದಿಗೆ ಸೇರಿದ್ದಲ್ಲಿ ಅದನ್ನು ಸಕ್ಷಮ ನ್ಯಾಯಾಲಯಕ್ಕೆ ವರದಿಗಳ ಸಮೇತ ಸಲ್ಲಿಸಬೇಕು.

ಸಮೀಕ್ಷೆ ಸಮಯದಲ್ಲಿ ಬಾಲಕಾರ್ಮಿಕ ಪ್ರಕರಣಗಳು ಪತ್ತೆಯಾದಲ್ಲಿ ಹಾಗೂ ಅವರನ್ನು ತೀವ್ರ ತೆರೆನಾದ ಶೋಷಣೆಗೆ ಒಳಪಡಿಸಿದ್ದು ಕಂಡುಬಂದಲ್ಲಿ ಬಾಲ ಕಾರ್ಮಿಕ ಕಾಯ್ದೆಯನ್ವಯ ಮಾಲೀಕರನ್ನು ವಿಚಾರಣೆಗೆ ಒಳಪಡಿಸುವುದಲ್ಲದೆ ಅವರಿಂದ ರೂ.20,000/- ಗಳ ದಂಡವನ್ನು ವಸೂಲಿ ಮಾಡಿ ಜಿಲ್ಲಾ ಬಾಲ ಕಾರ್ಮಿಕ ಕಲ್ಯಾಣ ಮತ್ತು ಪುನರ್ವಸತಿ ನಿಧಿಗೆ ಜಮೆ ಮಾಡತಕ್ಕದ್ದು.

ಮುಕ್ತಾಯ ಮಾಡುತ್ತ ಈ ಮೂಲಕ ಜಿಲ್ಲಾಧಿಕಾರಿಗಳ ಗಮನಕ್ಕೆ ತರಬಯಸುವುದೇನೆಂದರೆ, ಸಮೀಕ್ಷೆಯು ವಲಯವಾರು ಇರತಕ್ಕದ್ದು. ಸಮೀಕ್ಷಾ ಮಾಹಿತಿಯು ಗುಣಾತ್ಮಕವಾಗಿರತಕ್ಕದ್ದು. ಯಾವ ವಲಯ/ಉದ್ದಿಮೆಗಳಲ್ಲಿ ಜೀತ ಸಮಸ್ಯೆಯು ತೀವ್ರವಾಗಿದೆ ಎಂಬುದು ಅರಿಯಲು ಸಾಧ್ಯವಾಗಬೇಕು. ಸಮೀಕ್ಷಾ ಪ್ರಪತ್ರಗಳ ಪ್ರತಿಗಳನ್ನು ಖುದ್ದು ಉಪ- ವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಯವರು ಕ್ರಮಬದ್ಧವಾಗಿ ಶೇ.8% ಮತ್ತು ಶೇ.2% ಪರಿಶೀಲಿಸಬೇಕು. ಸಮೀಕ್ಷಾ ಮಾಹಿತಿಯನ್ನು ಜಾಗೃತಿ ಸಮಿತಿಗಳ ಸಭೆಯಲ್ಲಿ ಮಂಡಿಸತಕ್ಕದ್ದು ನಂತರ ಸಮೀಕ್ಷಾ ವರದಿಗಳ ಕುರಿತು ಜಿಲ್ಲಾಧಿಕಾರಿಯವರು ಅವರ ಹಂತದಲ್ಲಿ ಮೌಲ್ಯಮಾಪನ ಮಾಡಿ ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಕೋರಿದೆ.

(ಸಹಿ/-)
(ಕೆ. ರೇವಣಪ್ಪ)
ನಿರ್ದೇಶಕರು (ಗ್ರಾ.ಮೂ.ಸೌ-2) ಹಾಗೂ
ಪ/ನಿ ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
kargsy@gmail.com, Ph: 080-22353852

**ಪ್ರತಿಯನ್ನು :**

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
2. ಎಲ್ಲಾ 30 ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕಳುಹಿಸುತ್ತಾ ಜೀತ ಸಮೀಕ್ಷೆ ಕುರಿತು ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳಿಗೆ ಜೀತ ಪ್ರಕರಣಗಳು ಕಂಡು ಬಂದಲ್ಲಿ ಪ್ರಕರಣ Karnataka Gram Swaraj and Panchayat Raj Act, 2015 Sec 58 ರನ್ವಯ ಆ ಪ್ರಕರಣಗಳನ್ನು ಸಂಬಂಧಿಸಿದ ಉಪ-ವಿಭಾಗಾಧಿಕಾರಿಗಳ ಗಮನಕ್ಕೆ ತರತಕ್ಕದ್ದು ಹಾಗೂ ಸಮೀಕ್ಷಾ ಕಾರ್ಯದಲ್ಲಿ ಜಿಲ್ಲಾಧಿಕಾರಿಯವರಿಗೆ ಸಂಪೂರ್ಣ ಸಹಕಾರವನ್ನು ನೀಡಲು ಈ ಮೂಲಕ ಕೋರಿದೆ.
3. ನಿರ್ದೇಶಕರು, ಇ-ಆಡಳಿತ ಕೋಶ, ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಿ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಅಪಂ. ರಾಜ್ ಇಲಾಖೆರವರ ಆಪ್ತ ಶಾಖೆಗೆ.
5. ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರ

ಸಂಖ್ಯೆ–KPRC-ADM20RBL/9/RDPR/DD2

ಕರ್ನಾಟಕ ಸರ್ಕಾರದ ಸಚಿವಾಲಯ
3ನೇ ಹಂತ, 3ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು,
ದಿನಾಂಕ– 18.11.2020

## ಸುತ್ತೋಲೆ

ವಿಷಯ: ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976ರಡಿ ಬಿಟ್ಟಿ ಚಾಕರಿ ಆಚರಣೆಯನ್ನು ಕರ್ನಾಟಕ ರಾಜ್ಯದಲ್ಲಿ ನಿಷೇಧಿಸುವ ಕುರಿತು

* * * *

ಕೆಲವು ವರ್ಷಗಳಿಂದ, ಉತ್ತರ ಕರ್ನಾಟಕದ ಭಾಗಗಳಲ್ಲಿ ಕೆಲವು ಸಮುದಾಯಗಳು ಸಂಪ್ರದಾಯದ ನಿರ್ಬಂಧಗಳ ಕಾರಣದಿಂದ ಯಾವುದೇ ವೇತನವಿಲ್ಲದೆ ವರ್ಷಾಂತ್ಯದಲ್ಲಿ ಹಿಡಿಗೂಳು ಜೋಳ/ಧಾನ್ಯಕ್ಕೆ ಇಡೀ ವರ್ಷ ದಿನದ ಕೆಲವು ಗಂಟೆಗಳ ಕಾಲ ಅವರ ಯಜಮಾನರ ಮನೆಯ ದನದ ಕೊಟ್ಟಿಗೆ ಸ್ವಚ್ಛ ಗೊಳಿಸುವ ಕೆಲಸ, ಮನೆಯ ಪ್ರಾಂಗಣವನ್ನು ಶುಚಿ ಮಾಡುವ ಕೆಲಸ ಹಾಗೂ ಸಮಾರಂಭಗಳಲ್ಲಿ ಅವರ ಯಜಮಾನರು ಸೂಚಿಸುವ ರೂಢಿಗತ ಕೆಲಸ ಮಾಡುವುದನ್ನು ಬಿಟ್ಟಿ ಚಾಕರಿ ಆಚರಣೆ ಎಂಬ ಹೆಸರಿನಿಂದ ಗುರುತಿಸಲಾಗಿದೆ. ಈ ಪ್ರಕಾರವಾಗಿ ದುಡಿಸಿಕೊಂಡು ನೀಡುತ್ತಿರುವ ಹಿಡಿಗೂಳು ಜೋಳ/ಧಾನ್ಯ ಸರ್ಕಾರವು ಕಾಲಕಾಲಕ್ಕೆ ಘೋಷಿಸಿರುವ ಯಾವುದೇ ರೀತಿಯ ದುಡಿಮೆಯ ಕನಿಷ್ಠ ವೇತನಕ್ಕಿಂತ ಕಡಿಮೆ ಇರುತ್ತದೆ.

2015ರಲ್ಲಿ ಕರ್ನಾಟಕ ರಾಜ್ಯದಲ್ಲಿ ಜೀತ ಪದ್ಧತಿ ಪರಿಶೀಲನೆಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ಶ್ರೀ ಶಿವಾಜಿ ಗಣೇಶನ್ ನೇತೃತ್ವದ 7 ವ್ಯಕ್ತಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿತ್ತು. ಸದರಿ ಸಮಿತಿಯು ಬಿಟ್ಟಿ ಚಾಕರಿ ಪದ್ಧತಿಯು ಒಂದು ಪ್ರಕಾರವಾದ ಜೀತ ಪದ್ದತಿಯೇ ಆಗಿದ್ದು, ಇದನ್ನು ನಿಷೇಧಿಸಲು ಸರ್ಕಾರವು ಕ್ರಮವಹಿಸಬೇಕೆಂದು ಶಿಫಾರಸ್ಸು ನೀಡಿರುತ್ತದೆ.

ಶ್ರೀ ಶಿವಾಜಿ ಗಣೇಶನ್ ಸಮಿತಿ ಶಿಫಾರಸ್ಸುಗಳು ಹಾಗೂ ಶ್ರೀ ಕಿರಣ್ ಕಮಲ್ ಪ್ರಸಾದ್ ರವರು ನೀಡಿರುವ ದೂರನ್ನು ಸರ್ಕಾರವು ಸಂಬಂಧಿಸಿದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕ್ರಮವಾಗಿ ಪತ್ರ ಸಂಖ್ಯೆಗಳಾದ – RDP/3/RBL/2014(01), ದಿನಾಂಕ: 5.11.2015 ಮತ್ತು RDPR/05/RBL/2018, ದಿನಾಂಕ– 13.3.2019 ಗಳನ್ನು ಕಳುಹಿಸಿ, ಸದರಿ ವಿಷಯದ ಕುರಿತು ಕೂಲಂಕಷವಾಗಿ ಪರಿಶೀಲಿಸುವಂತೆ ಸೂಚಿಸಿರುತ್ತದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸಹಾ ಪ್ರಕರಣ ಸಂಖ್ಯೆ – ಬಿಟ್ಟಿ ಚಾಕರಿ ಆಚರಣೆ ಕುರಿತು ಪರಿಶೀಲಿಸುವಂತೆ ಸರ್ಕಾರಕ್ಕೆ ಸೂಚಿಸಿರುತ್ತದೆ. ಈ ಎಲ್ಲಾ ವಾಸ್ತಾವಾಂಶಗಳ ,ಹಿನ್ನೆಲೆಯಲ್ಲಿ ಬಿಟ್ಟಿ ಚಾಕರಿ ಆಚರಣೆಯಡಿ ವರ್ಷಾಂತ್ಯದಲ್ಲಿ ನೀಡುವ ಹಿಡಿಗೂಳು ಜೋಳ/ ಧಾನ್ಯಕ್ಕಾಗಿ ಇಂತಹ ಸಾಂಪ್ರದಾಯಿಕ ಸೇವೆಗಳನ್ನು ಪಡೆದುಕೊಳ್ಳುವುದು ಜೀತ ಪದ್ಧತಿ(ರ) ಕಾಯ್ದೆ, 1976ರ ಕಲಂ 2 (b), ಕಲಂ 2 ರ (ii) ಮತ್ತು ಕಲಂ 2 ರ (v) ರನ್ವಯ ಜೀತ ಪದ್ಧತಿಯೇ ಆಗಿರುತ್ತದೆ ಎಂಬುದಾಗಿ ಸರ್ಕಾರವು ಮನಗಂಡಿದೆ. ಈ ಹಿನ್ನೆಲೆಯಲ್ಲಿ ಕೆಲವು ಸಮುದಾಯಗಳಿಂದ ಬಿಟ್ಟಿ ಚಾಕರಿ ಹೆಸರಿನಲ್ಲಿ ಈ ಮೇಲೆ ವಿವರಿಸಲಾದಂತೆ ಯಾವುದೇ ಸಾಂಪ್ರದಾಯಿಕ ಸೇವೆಗಳನ್ನು ಪಡೆದುಕೊಳ್ಳುವ ಆಚರಣೆಯನ್ನು ಈ ಅಧಿಸೂಚನೆ ಹೊರಡಿಸುವ ಮೂಲಕ ತಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯಾದ್ಯಂತ ನಿಷೇಧಿಸಿ ಆದೇಶಿಸಿದೆ. ಯಾರಾದರೂ ಇಂತಹ ಸಮುದಾಯಗಳನ್ನು ಈ ಸೇವೆಗಳಿಗೆ ಬಳಸಿಕೊಂಡಲ್ಲಿ ಜೀತ ಪದ್ಧತಿ (ರದ್ಧತಿ) ಕಾಯ್ದೆ, 1976 ರಡಿ ಅವರನ್ನು ಶಿಕ್ಷೆಗೊಳಪಡಿಸಲಾಗುತ್ತದೆ. ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಸಹಿ/–)
(ಎಲ್.ಕೆ ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಕ್ಕಾಗಿ ಕಳುಹಿಸಿದೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಲಾಡಳತ ಇಲಾಖೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ
6. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ

# ಕರ್ನಾಟಕ ಸರ್ಕಾರ

ಸಂಖ್ಯೆ–KPRC-ADM20RBL/17/RDPR/DD2

ಕರ್ನಾಟಕ ಸರ್ಕಾರದ ಸಚಿವಾಲಯ
3ನೇ ಹಂತ, 3ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು,
ದಿನಾಂಕ– 6.1.2021

**ಅಧಿಸೂಚನೆ**

ವಿಷಯ: ಜಿಲ್ಲಾ ಪಂಚಾಯಿತಿಯಲ್ಲಿ ಜೀತದಾಳುಗಳ ಪುನರ್ವಸತಿ ಯೋಜನೆಯ ಕಾರ್ಯಕ್ರಮವನ್ನು ಉಸ್ತುವಾರಿ ಮಾಡುವ ಹಿರಿಯ ಶ್ರೇಣಿಯ ಸರ್ಕಾರಿ ಅಧಿಕಾರಿಯನ್ನು ಈ ಕಾರ್ಯಕ್ರಮದ ಸಲುವಾಗಿ ನೋಡಲ್ ಅಧಿಕಾ– ರಿಯಾಗಿ ನೇಮಿಸುವ ಕುರಿತು

* * * *

ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976ರನ್ವಯ ಪತ್ತೆಯಾಗಿ ಬಿಡುಗಡೆಯಾಗುವ ಸ್ವಂತ ರಾಜ್ಯದ ಜಿಲ್ಲಾಪಂಚಾಯಿತಿ ವ್ಯಾಪ್ತಿಯಲ್ಲಿ ವಾಸವಿರುವ ಜೀತದಾಳುಗಳನ್ನು ಸಂಪೂರ್ಣವಾಗಿ ಪುನರ್ವಸತಿಗೊಳಿಸುವ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯಿತಿಗಳಿಗೆ ವಹಿಸಲಾಗಿದೆ. ಜಿಲ್ಲಾ ಪಂಚಾಯಿತಿ ಜೀತವಿಮುಕ್ತರಿಗೆ– ನಿವೇಶನ, ವಸತಿ, ನರೇಗಾ ಉದ್ಯೋಗ ಚೀಟಿ, ಕೌಶಲ್ಯ ತರಬೇತಿ, ಸ್ವಯಂ ಉದ್ಯೋಗ ಮಾಡಲು ಸಾಲ ಸೌಲಭ್ಯ, ತನ್ನ ಅಧೀನದಲ್ಲಿ ಬರುವ ಇತರೆ ಇಲಾಖೆ/ನಿಗಮಗಳಲ್ಲಿ ಬರುವಂತಹ ಕಾರ್ಯಕ್ರಮಗಳ ಪ್ರಯೋಜನವನ್ನು ಜೀತವಿಮುಕ್ತರಿಗೆ ದೊರಕಿಸಿಕೊಡುವ ಕಾರ್ಯ ಮಾಡುತ್ತಿದೆ.

ಇದರ ಜೊತೆಗೆ ಇನ್ನು ಮುಂದೆ ಜೀತವಿಮುಕ್ತರ ಪುನರ್ವಸತಿ ಸಂಬಂಧ ಜಿಲ್ಲಾಡಳಿತ ಕಛೇರಿಯೊಂದಿಗೆ ಸಂಪರ್ಕಾಧಿಕಾರಿ ಕೆಲಸ, ಜೀತವಿಮುಕ್ತರಿಗೆ ನೀಡಿರುವ ಸೌಲಭ್ಯಗಳ ವಿವರ, ಜೀತವಿಮುಕ್ತರಿಗೆ ಸಂಬಂಧಿಸಿದ ಇತರೆ ಮಾಹಿತಿಗಳನ್ನು ಸರ್ಕಾರಕ್ಕೆ ನೀಡುವುದು ಹಾಗೂ ಜೀತವಿಮುಕ್ತರಿಗೆ ಈ ಮೇಲೆ ವಿವರಿಸಲಾದ ಸೌಲಭ್ಯಗಳನ್ನು ನೀಡುವ ಜವಾಬ್ದಾರಿ, ಪುನರ್ವಸತಿ ಪ್ರಗತಿಯನ್ನು ಜಿಲ್ಲಾ ಪಂಚಾಯಿತಿ ಹಂತದಲ್ಲಿ ಪರಿಶೀಲಿಸುವ ಜವಾಬ್ದಾರಿಯನ್ನು ಈ ಕಾರ್ಯಕ್ರಮವನ್ನು ಉಸ್ತುವಾರಿ ಮಾಡುವ ಉಪ ಕಾರ್ಯದರ್ಶಿ/ ಯೋಜನಾ ನಿರ್ದೇಶಕರಿಗೆ ನೀಡಿದೆ ಮತ್ತು ಜಿಲ್ಲಾ ಪಂಚಾಯಿತಿ ಹಂತದ ನೋಡಲ್ ಅಧಿಕಾರಿಯನ್ನಾಗಿ ಈ ಅಧಿಸೂಚನೆ ಮೂಲಕ ನೇಮಿಸಿದೆ.

(ಸಹಿ/–)
(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ
3. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಉಪ ಕಾರ್ಯದರ್ಶಿಗಳು ಹಾಗೂ ಯೋಜನಾ ನಿರ್ದೇಶಕರುಗಳಿಗೆ
4. ಎಲ್ಲಾ ಉಪವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿಗಳಿಗೆ.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ. ರಾಜ್), ಗ್ರಾಅಪಂ. ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳಿಗೆ,.
2. ಆಯುಕ್ತರು, ಕರ್ನಾಟಕ ಪಂ. ರಾಜ್ ಆಯುಕ್ತಾಲಯ, ಗಾಂಧಿನಗರ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ

## ಕರ್ನಾಟಕ ಸರ್ಕಾರ

ಸಂಖ್ಯೆ– ಜಿಲ್ಲೆ

ದಿನಾಂಕ–

## ಮಾದರಿ ಅಧಿಸೂಚನೆ

ವಿಷಯ: ಜೀತ ಪದ್ಧತಿ(ರದ್ಧತಿ) ಕಾಯ್ದೆ, 1976ರಡಿ ಕಲಂ 10,11 ಹಾಗೂ 12ರಡಿ ಜಿಲ್ಲಾಧಿಕಾರಿಗಳಿಗೆ ನೀಡಿರುವ ಜವಾಬ್ದಾರಿಯನ್ನು ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೆ ಪ್ರತ್ಯಾಯೋಜಿಸುವ ಕುರಿತು.

* * * *

ಜೀತ ಪದ್ದತಿ(ರದ್ದತಿ) ಕಾಯ್ದೆ, 1976 ರಡಿ ಜೀತ ಪದ್ದತಿಯನ್ನು ದೇಶದಾದ್ಯಂತ ನಿಷೇಧಿಸಲಾಗಿದೆ. ಈ ಪದ್ಧತಿಯಯಡಿ ಜೀತಕ್ಕಾಗಿ ಕಾರ್ಮಿಕರನ್ನು ಬಳಸುವಂತಹ ವ್ಯಕ್ತಿ/ಸಂಸ್ಥೆಗಳನ್ನು ಗುರುತಿಸಿ ಅವರಿಗೆ ಕಾಯ್ದೆಯನ್ವಯ ಶಿಕ್ಷೆ ಕೊಡಿಸುವುದು ಹಾಗೂ ಈ ಪದ್ದತಿಯಡಿ ಸಿಲುಕಿದಂತಹ ವ್ಯಕ್ತಿಗಳನ್ನು ಜೀತದಿಂದ ಮುಕ್ತಗೊಳಿಸುವ ಕರ್ತವ್ಯವನ್ನು ಈ ಕಾಯ್ದೆಯ ಕಲಂ 10, 11 ಹಾಗೂ 12ರಡಿ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಜಿಲ್ಲಾಧಿಕಾರಿಗಳು ಈ ಕರ್ತವ್ಯವನ್ನು ತಮ್ಮ ಅಧೀನ ಅಧಿಕಾ– ರಿಗಳಿಗೆ ಪ್ರತ್ಯಾಯೋಜಿಸಬಹುದಾಗಿದೆ. ಅಂತೆಯೇ , ಕಲಂ 21ರಡಿ ಸಂಕ್ಷಿಪ್ತ ವಿಚಾರಣೆ ನಡೆಸುವ ಜವಾಬ್ದಾರಿಯನ್ನು ಉಪವಿಭಾಗಾಧಿಕಾರಿಗಳಿಗೆ ವಹಿಸಲಾಗಿದೆ.

ಜೀತ ಪದ್ಧತಿಯಡಿ ಪತ್ತೆಯಾಗಿ ಬಿಡುಗಡೆಯಾದ ವ್ಯಕ್ತಿಗಳ ಬಿಡುಗಡೆ ಪ್ರಮಾಣ ಪತ್ರಗಳನ್ನು ಕ್ರೋಡೀಕರಿಸುವುದು, ಅವರುಗಳಿಗೆ ತುರ್ತು ಪರಿಹಾರ(ಕಾರ್ಪಸ್ ನಿಧಿ)ಯನ್ನು ಹಂಚಿಕೆ ಮಾಡಿರುವ ವಿವರ, ಅಪರಾಧಿಗಳ ಮೇಲೆ FIR, Charge Sheet ಮಾಡಿರುವ ವಿವರ, ಪ್ರಕರಣವನ್ನು ನಡೆಸುವ ಪ್ರಾಧಿಕಾರದ ವಿವರ (SDM/AC court, JMFC court), ಪ್ರಕರಣದ ವಿಚಾರಣೆಯ ಹಂತದ ವಿವರಗಳನ್ನು, SHRC , NHRC ಪ್ರಕರಣಗಳ ವಿವರವನ್ನು ಸರ್ಕಾರಕ್ಕೆ ಕಳುಹಿಸುವ ಜವಾಬ್ದಾರಿಯನ್ನು ಮತ್ತು ಜೀತ ಪ್ರಕರಣಗಳ ಹಾಗೂ ಜೀತದಾಳುಗಳ ಪುನರ್ವಸತಿ ಸಂಬಂಧ ನೆನಪೋಲೆಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸುವ ಜವಾಬ್ದಾರಿಗಳನ್ನು ಈ ಅಧಿಸೂಚನೆಯ ಮೂಲಕ ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.

ಹೆಚ್ಚುವೆರಿ ಜಿಲ್ಲಾಧಿಕಾರಿಗಳನ್ನು ಈ ಕಾರ್ಯಕ್ರಮದ ಸಂಬಂಧ ಜಿಲ್ಲಾಡಳಿತದಲ್ಲಿ ನೋಡಲ್ ಅಧಿಕಾರಿಯಾಗಿ ನೇಮಿಸಿ ಅಧಿಸೂಚನೆ ಹೊರಡಿಸಿದೆ.

(ಸಹಿ/–)
ಜಿಲ್ಲಾಧಿಕಾರಿಗಳು
......................... ಜಿಲ್ಲೆ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಸರ್ಕಾರದ ಜೀತವಿಮುಕ್ತರ ಪುನರ್ವಸತಿ ಸಹಾಯಧನ ಯೋಜನೆಯಡಿ 2015-16 ಸಾಲಿನಿಂದ ಜೀತವಿಮುಕ್ತರಿಗೆ ಹಾಲಿ ಇರುವ ಮಾಹೆಯಾನ ಪಿಂಚಣಿ ಮೊತ್ತವನ್ನು ರೂ.300/- ರಿಂದ ರೂ.1000/- ಗಳಿಗೆ ಹೆಚ್ಚಿಸಿರುವ ಬಗ್ಗೆ. ಓದಲಾಗಿದೆ : 1. ದಿ: 12.07.04 ರಂದು ನಡೆದ ರಾಜ್ಯ ಉನ್ನತ ಅಧಿಕಾರ ಸಮಿತಿ ಸಭೆ ನಡವಳಿ.

2. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ:15 ಆರ್.ಬಿ.ಎಲ್.2004 ಬೆಂಗಳೂರು ದಿನಾಂಕ: 21.01.2006.

3. ದಿ: 17-02-14 ರಂದು ನಡೆದ ರಾಜ್ಯ ಸರ್ಕಾರದ ಉನ್ನತ ಅಧಿಕಾರ ಸಮಿತಿ ಸಭೆ ನಡವಳಿಕೆ.

* * * *

**ಪ್ರಸ್ತಾವನೆ** :

ದಿನಾಂಕ: 09-10 ಅಕ್ಟೋಬರ್ 2003 ರಂದು ಬೆಂಗಳೂರಿನಲ್ಲಿ ನಡೆದ ಎರಡು ದಿನಗಳ ಕಾರ್ಯಾಗಾರದಲ್ಲಿ ಜೀತವಿಮುಕ್ತರುಗಳಿಗೆ ಪುನರ್ವಸತಿ ಸೌಲಭ್ಯವನ್ನು ಒದಗಿಸುವ ಕಾರ್ಯವು ಇನ್ನೂ ರೂಪುಗೊಳ್ಳುತ್ತಿರುವ ಸಮಯದಲ್ಲಿ ಅವರುಗಳು ಹೊಸ ಸಾಲಗಳಿಗೆ ಮತ್ತೆ ಮಾರುಹೋಗದಂತೆ, ತಡೆಯುವ ಸಲುವಾಗಿ ರಾಜ್ಯ ಸರ್ಕಾರವು ರಾಜ್ಯದ ಜೀತವಿಮುಕ್ತರುಗಳಿಗೆ ಪಿಂಚಣಿ ನೀಡಲು ಒಂದು ಯೋಜನೆಯನ್ನು ಸಿದ್ಧಪಡಿಸಬೇಕೆಂದು ಶಿಫಾರಸ್ಸಾಗಿರುತ್ತದೆ. ಕಾರಣ ಜೀತಕ್ಕೆ ಒಳಗಾದವರನ್ನು ಜೀತಪದ್ಧತಿಯಿಂದ ಬಿಡುಗಡೆಗೊಳಿಸಿದ ನಂತರ ಅವರುಗಳಿಗೆ ಸರ್ಕಾರವು ಮಾನವೀಯ ದೃಷ್ಠಿಯಿಂದ ಕನಿಷ್ಠ ಆರ್ಥಿಕ ಸವಲತ್ತನ್ನು ಒದಗಿಸುವ ಉದ್ದೇಶಕ್ಕಾಗಿ ತಕ್ಷಣದಿಂದ ಮಾಹೆಯಾನ ರೂ.300/- ಗಳನ್ನು ಸಹಾಯಧನ ರೂಪದಲ್ಲಿ 2 ವರ್ಷಗಳ ಕಾಲ ಒದಗಿಸುವ ಸಲುವಾಗಿ, ರಾಜ್ಯ ಸರ್ಕಾರವು 2005-06ನೇ ಸಾಲಿನಿಂದ ಜೀತವಿಮುಕ್ತರ ಪುನರ್ವಸತಿ ಸಹಾಯಧನ ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲು ಸಚಿವ ಸಂಪುಟವು ದಿ:08-12-2005ರಂದು ಅನುಮೋದನೆಯನ್ನು ನೀಡಿದ್ದು, ಉಲ್ಲೇಖ-(2)ರ ಆದೇಶದಂತೆ, ದಿನಾಂಕ: 21-01-2006ರಿಂದ ಈ ಯೋಜನೆಯನ್ನು ರಾಜ್ಯಾದಂತ ಜಾರಿಗೆ ತರಲಾಗಿದೆ.

ಈ ಯೋಜನೆಯಡಿ ರೂಪಿಸಿರುವ ನಿರ್ದೇಶನದಂತೆ, ದಿನಾಂಕ: 21-01-2006ರ ತರುವಾಯ 2014-15ನೇ ಸಾಲಿನವರೆಗೆ ಅಂದರೆ ಮಾರ್ಚ್ 2015ರವರೆಗೆ ಜೀತಪದ್ಧತಿಯಿಂದ ಬಿಡುಗಡೆಗೊಳಿಸುವ ರಾಜ್ಯದ ಪ್ರತಿ ಜೀತ ಕಾರ್ಮಿಕ/ಬಾಲಜೀತಕಾರ್ಮಿಕರಿಗೆ ಮಾಹೆಯಾನ ರೂ.300/- ರಂತೆ ಸಹಾಯಧನವನ್ನು ಜೀತಪದ್ಧತಿಯಿಂದ ಬಿಡುಗಡೆಗೊಳಿಸಿದ ದಿನದಿಂದ ಮೊದಲ 24 ತಿಂಗಳುಗಳ ಅವಧಿಗೆ ಪಾವತಿಸಲು ಸರ್ಕಾರವು ಉಲ್ಲೇಖ-(2)ರಂತೆ, ಆದೇಶವನ್ನು ಮಾಡಲಾಗಿತ್ತು.

ಪ್ರಸ್ತುತ, ದಿ:17-02-2014ರಂದು ನಡೆದ ರಾಜ್ಯ ಸರ್ಕಾರದ ಉನ್ನತ ಅಧಿಕಾರದ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ, ಪ್ರತಿ ಜೀತದಾಳುವಿಗೆ ಹಾಲಿ ಒದಗಿಸುತ್ತಿರುವ ರೂ.300/-ಗಳ ಸಹಾಯಧನವು ತೀರ ಕಡಿಮೆಯಾಗಿದ್ದು ಅವರ ಈಗಿನ ಆರ್ಥಿಕ ಮಟ್ಟದ ಸ್ಥಿತಿಯ ಸುಧಾರಣೆಗಾಗಿ ಸದರಿ ಅನುದಾನವನ್ನು ಹೆಚ್ಚಿಸುವುದು ಅಗತ್ಯವಿದ್ದು "ರಾಜ್ಯ ಸರ್ಕಾರದ ಜೀತ ವಿಮುಕ್ತರ ಪುನರ್ವಸತಿ ಸಹಾಯಧನ" ಯೋಜನೆಯಡಿ ಹಾಲಿ ನಿಗಧಿಯಾಗಿರುವ ರೂ.300/- ರ ಪಿಂಚಣಿಯನ್ನು ರೂ.1000/-ಗಳಿಗೆ ಹೆಚ್ಚಿಸಲು ತೀರ್ಮಾನಿಸಿ ಅನುಮೋದನೆಯನ್ನು ನೀಡಿದೆ. ಆದ್ದರಿಂದ ಈ ಆದೇಶ. ಸರ್ಕಾರದ ಆದೇಶ ಸಂ.ಗ್ರಾಅಪ. 11 ಆರ್‌ಬಿಎಲ್.2014 ಬೆಂಗಳೂರು. ದಿನಾಂಕ: 23-05-2015

2015-16ನೇ ಸಾಲಿನ ತರುವಾಯ ಅಂದರೆ ದಿನಾಂಕ: 01-04-2015ರ ನಂತರ ಜೀತಪದ್ಧತಿಯಿಂದ ಬಿಡುಗಡೆಗೊಳಿಸಿದ ಜೀತವಿಮುಕ್ತರ ಪುನರ್ವಸತಿಗೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ಪರಿಗಣಿಸಿದ ನಂತರ, ಜೀತಪದ್ಧತಿಯಿಂದ ಬಿಡುಗಡೆಗೊಳಿಸಿದ ದಿನಾಂಕದಿಂದ ಮೊದಲ 2 ವರ್ಷಗಳು ಅಂದರೆ, 24 ತಿಂಗಳುಗಳ ಅವಧಿಗೆ ಮಾತ್ರ ಮಾಹೆಯಾನ ರೂ.1000/- ಗಳನ್ನು (ಒಂದು ಸಾವಿರ ರೂಪಾಯಿಗಳು) ಸಹಾಯಧನ ರೂಪದಲ್ಲಿ ಪಾವತಿ ಮಾಡಲು ರಾಜ್ಯ ಸರ್ಕಾರದ ಜೀತವಿಮುಕ್ತರ ಪುನರ್ವಸತಿ ಸಹಾಯಧನ ಯೋಜನೆಯಡಿ ಈ ಕೆಳಗಿನ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದೆ.

**ಈ ಯೋಜನೆಯು ರಾಜ್ಯದ ಜೀತದಾಳುಗಳಿಗೆ ಮಾತ್ರ ಅನ್ವಯಿಸತಕ್ಕದ್ದು.**

1. ಇದು ಹೊಸದಾಗಿ ಗುರುತಿಸಲಾದ ಜೀತ ಪ್ರಕರಣಗಳಿಗೆ ಮಾತ್ರ ಅನ್ವಯಿಸುತ್ತದೆ.
2. ಯಾವುದೇ ಮಾಧ್ಯಮದ ಮುಖಾಂತರ ಜೀತದಾಳುಗಳ ಬಗ್ಗೆ ಮಾಹಿತಿ ಬಂದ ಕೂಡಲೇ ಸಂಬಂಧಪಟ್ಟ ಜಿಲ್ಲಾಧಿಕಾರಿ/ ಉಪ ವಿಭಾಗಾಧಿಕಾರಿಯು 1976ರ ಜೀತಗಾರಿಕೆ ಪದ್ಧತಿ(ನಿರ್ಮೂಲನೆ) ಕಾಯ್ದೆ ಅನ್ವಯ ತನಿಖೆ ನಡೆಸಿ ಗರಿಷ್ಠ ಒಂದು ತಿಂಗಳ ಅವಧಿಯೊಳಗೆ ಅವರುಗಳನ್ನು ಜೀತಪದ್ಧತಿಯಿಂದ ಬಿಡುಗಡೆಗೊಳಸತಕ್ಕದ್ದು.
3. ಜೀತಪದ್ಧತಿಯಿಂದ ಬಿಡುಗಡೆಗೊಳಸಿದ ದಿನವೇ ಪ್ರತಿಯೊಬ್ಬ ಜೀತ ವಿಮುಕ್ತರುಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಯು / ಉಪ ವಿಭಾಗಾಧಿಕಾರಿಯು ಜೀತವಿಮುಕ್ತ ಪತ್ರವನ್ನು ನೀಡತಕ್ಕದ್ದು ಹಾಗೂ ಈ ಕುರಿತಾಗಿ ಪೂರ್ಣ ಪ್ರಮಾಣದ ಮಾಹಿತಿಯನ್ನು ಕೆಳಕಂಡ ಕಂಡಿಕೆ(8)ರಲ್ಲಿ ನಮೂದಿಸಿರುವಂತೆ, ಆ ದಿನವೇ ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಲ್ಲಿಸುವುದು, ತದನಂತರ ಜಿಲ್ಲಾ ಪಂಚಾಯಿತಿಯು ಒಂದು ವಾರದ ಅವಧಿಯೊಳಗಾಗಿ ನಿರ್ದೇಶಕರು, ಗ್ರಾ.ಮೂ.ಸೌ–2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟೆ, ಬೆಂಗಳೂರು. ಇವರಿಗೆ ಜೀತವಿಮುಕ್ತರ ಪೂರ್ಣ ಮಾಹಿತಿಯನ್ನೊಳಗೊಂಡ ಪುನರ್ವಸತಿ ಕೋರುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
4. ಜಿಲ್ಲಾಧಿಕಾರಿಗಳ / ಉಪ ವಿಭಾಗಾಧಿಕಾರಿಗಳ ವರದಿ ಆಧಾರದ ಮೇಲೆ ನಿರ್ದೇಶಕರು, ಗ್ರಾ.ಮೂ.ಸೌ–2 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರತಿ ಆರ್ಥಿಕ ವರ್ಷದಲ್ಲಿ ಒಂದೇ ಕಂತಿನಲ್ಲಿ (24 ತಿಂಗಳುಗಳ ಅವಧಿಗೆ ಪ್ರತಿ ಜೀತ ವಿಮುಕ್ತರಿಗೆ ಮಾಹೆಯಾನ ರೂ.1000/– ರ ದರದಲ್ಲಿ) ಒಟ್ಟಾರೆಯಾಗಿ ಬಿಡುಗಡೆ ಮಾಡಲಾಗುವ ರೂ.24,000/– ಸಹಾಯ ಧನವನ್ನು ಕೂಡಲೇ ಸಂಬಂಧಪಟ್ಟ ಜೀತವಿಮುಕ್ತರ ಬ್ಯಾಂಕ್ ಉಳಿತಾಯ ಖಾತೆಗೆ ಜಮೆ ಮಾಡುವ ಷರತ್ತಿಗೊಳಪಟ್ಟು ಗ್ರಾಮ ಪಂಚಾಯಿತಿಗಳಿಗೆ ಸಂಪೂರ್ಣವಾಗಿ ಮರು ಬಿಡುಗಡೆ ಮಾಡತಕ್ಕದ್ದು.
5. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯು ಅಂತಹ ಜೀತ ವಿಮುಕ್ತ ಪ್ರಮಾಣ ಪತ್ರದ ಆಧಾರದ ಮೇಲೆ ಆಯಾ ಜೀತ ವಿಮುಕ್ತರುಗಳಿಗೆ ಒಂದು ವಾರದೊಳಗೆ ಭಾವಚಿತ್ರ ಸಹಿತ ಗುರುತಿನ ಚೀಟಿಯನ್ನು ನೀಡತಕ್ಕದ್ದು ಹಾಗೂ ಗ್ರಾಮ ಪಂಚಾಯಿತಿಗೆ ಮೇಲ್ಕಂಡಂತೆ ಮರು ಬಿಡುಗಡೆಯಾಗುವ ಸದರಿ ಪುನರ್ವಸತಿ ಸಹಾಯ ಧನವನ್ನು ಆ ಗ್ರಾಮ ಪಂಚಾಯಿತಿ ಖಾತೆಯಿರುವ ಬ್ಯಾಂಕಿನಲ್ಲಿ ಪ್ರತ್ಯೇಕ ಉಳಿತಾಯ ಖಾತೆ ತೆರೆದು ಆ ಖಾತೆಗೆ ಜಮೆ ಮಾಡತಕ್ಕದ್ದು. ತದನಂತರ ಕೂಡಲೇ ಸದರಿ ಅನುದಾನವನ್ನು ಎರಡು ಕಂತುಗಳಲ್ಲಿ (24 ತಿಂಗಳ ಅವಧಿಗೆ ನಿಗದಿಪಡಿಸಿದಂತೆ) ಪ್ರತಿ ಬಾರಿಗೆ ರೂ.12,000/– ರಂತೆ, ಪ್ರತಿ ಜೀತವಿಮುಕ್ತರ ಬ್ಯಾಂಕ್ ಖಾತೆಗೆ ಕಡ್ಡಾಯವಾಗಿ ಜಮೆ ಮಾಡಲು ಕ್ರಮವಹಿಸುವುದು. ಈ ಅನುದಾನ ವಹಿವಾಟಿನ ಕುರಿತಂತೆ, ಜೀತವಿಮುಕ್ತರು (ಆತನು/ಆಕೆಯು) ಹಾಲಿ ಹೊಂದಿರುವ ಬ್ಯಾಂಕ್ ಉಳಿತಾಯ ಖಾತೆಯ ಮಾಹಿತಿಯನ್ನು ಹಾಗೂ ಅನುದಾನದ ವಿವರದ ಕುರಿತು ಪ್ರತ್ಯೇಕ ವಹಿಯನ್ನು ಗ್ರಾಮ ಪಂಚಾಯಿತಿಯಲ್ಲಿ ಹಾಗೂ ಜಿಲ್ಲಾ ಪಂಚಾಯಿತಿಯಲ್ಲಿಯೂ ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
6. ಒಂದು ವೇಳೆ ಈ ಎರಡು ವರ್ಷದ ಅವಧಿಯಲ್ಲಿ ಪುನರ್ ವಸತಿ ಸಹಾಯ ಧನ ಸ್ವೀಕರಿಸುತ್ತಿರುವ ಜೀತ ವಿಮುಕ್ತನು/ಳು ಮೃತಪಟ್ಟಲ್ಲಿ, ತಾಲ್ಲೂಕು ತಹಸೀಲ್ದಾರ್ ರವರಿಂದ ನೀಡಲ್ಪಡುವ ದೃಢೀಕೃತ ಮರಣ ಸಮರ್ಥನಾ ಪತ್ರ ಹಾಗೂ ಕುಟುಂಬ ವಾರಸುದಾರರ ಪ್ರಮಾಣ ಪತ್ರಗಳ ಆಧಾರದ ಮೇಲೆ ಆತನ/ಆಕೆಯ ಕುಟುಂಬದ ಹಿರಿಯ ಸದಸ್ಯರಿಗೆ ಉಳಿದ ಅವಧಿಗೆ ಮಾತ್ರ ಮಂಜೂರು ಮಾಡಿ ಪಾವತಿಸತಕ್ಕದ್ದು.
7. ಜಿಲ್ಲಾಧಿಕಾರಿಗಳ / ಉಪ ವಿಭಾಗಾಧಿಕಾರಿಗಳ ಮುಖಾಂತರ ಆಯಾ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಜೀತದಾಳುಗಳ ಇರುವಿಕೆಯ ಬಗ್ಗೆ ಸ್ಪಷ್ಟವಾಗಿ ಖಾತರಿ ಮಾಡಿಕೊಂಡು ಸರ್ಕಾರವು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆಗೊಳಿಸುವ ಜೀತವಿಮುಕ್ತರ ಪುನರ್ ವಸತಿ ಸಹಾಯ ಧನ ಮೊತ್ತವನ್ನು ತಪ್ಪದೇ 15 ದಿನದೊಳಗಾಗಿ ಸಂಬಂಧಪಟ್ಟ ಜೀತ ವಿಮುಕ್ತರಿಗೆ ಪಾವತಿಸಲು ಕ್ರಮವಹಿಸುವುದು. ಹಾಗೂ ಜೀತವಿಮುಕ್ತರಿಗೆ ಪಾವತಿಸಲಾದ ಮೊತ್ತದ ಮಾಹಿತಿ ಹಾಗೂ ಪ್ರತಿ ಜೀತವಿಮುಕ್ತರ ಪೂರ್ಣ ಮಾಹಿತಿಯನ್ನು (ಜೀತವಿಮುಕ್ತರ ಹೆಸರು, ತಂದೆ / ಗಂಡನ ಹೆಸರು, ಸ್ವಗ್ರಾಮದ ವಿಳಾಸ, ವಯಸ್ಸು, ಲಿಂಗ, ಜಾತಿ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ) ಜೀತಕ್ಕೆ ತೊಡಗಿಸಿಕೊಂಡ ವ್ಯಕ್ತಿಯ ವಿವರ, ಜೀತವಿಮುಕ್ತರ ಒಪ್ಪಿಗೆಯಂತೆ ಇತರೆ ರಾಜ್ಯದಲ್ಲಿರುವ ಸ್ವಂತ ಊರಿಗೆ ವರ್ಗಾವಣೆಯಾಗಿರುವ ಮಾಹಿತಿ, ವರ್ಗಾವಣೆಯ ಸಂದರ್ಭದಲ್ಲಿ ಆರಕ್ಷಕರ ನೇತೃತ್ವದಲ್ಲಿ ಇತರೆ ರಾಜ್ಯದ ಸ್ವಂತ ಊರಿಗೆ ಜೀತವಿಮುಕ್ತರನ್ನು ತಲುಪಿಸಿರುವ ಮಾಹಿತಿ, ಜೀತಕ್ಕೆ ಇರಿಸಿಕೊಂಡವರ ಹೆಸರು ಮತ್ತು ವಿಳಾಸ. ಜೀತಕ್ಕೆ ತೊಡಗಿಸಿಕೊಂಡ ಮಾಲೀಕರ ವಿರುದ್ಧ ನ್ಯಾಯಾಲಯದಲ್ಲಿ ಹೂಡಿರುವ ದಾವೆಯ ವಿವರ, ಈ ಎಲ್ಲಾ ಮಾಹಿತಿಯನ್ನೊಳಗೊಂಡಂತೆ) ಪ್ರತ್ಯೇಕ ವಹಿಯಲ್ಲಿ ನಿರ್ವಹಿಸತಕ್ಕದ್ದು.

8. ಈ ಯೋಜನೆಯ ಕಾರ್ಯಕ್ಕಾಗಿ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2230-ಕಾರ್ಮಿಕ ಮತ್ತು ಉದ್ಯೋಗ-01- ಕಾರ್ಮಿಕ-198-ಗ್ರಾಮ ಪಂಚಾಯತ್‌ಗಳಿಗೆ ಸಹಾಯ-6-ಗ್ರಾಮ ಪಂಚಾಯಿತಿಗಳು-01-ಬ್ಲಾಕ್ ಅನುದಾನ- 300-ಒಟ್ಟು ಜಿಲ್ಲಾ ಪಂಚಾಯಿತಿ (ಜೀತದಾಳುಗಳ ಪುನರ್ ವಸತಿ) (ಯೋಜನೆ)ಗೆ ಜಮಾ ಮಾಡತಕ್ಕದ್ದು.

9. ಈ ಆದೇಶವನ್ನು ಆರ್ಥಿಕ ಇಲಾಖೆ (ವೆಚ್ಚ-6)ರ ಸಹಮತಿ ಸಂ:ಆಇ200ವೆಚ್ಚ-6/2014, ದಿನಾಂಕ:18-03-2015 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಹಿ/-)
(ಎನ್. ಕೃಷ್ಣಪ್ಪ)
ನಿರ್ದೇಶಕರು, ಗ್ರಾ.ಮೂ.ಸೌ-2 ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಗೆ :**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಅಪಂ ರಾಜ್ ಇಲಾಖೆ.
3. ಕಾರ್ಯದರ್ಶಿ/ಉಪ ಕಾರ್ಯದರ್ಶಿ/ಉಪ ವಿಶೇಷಾಧಿಕಾರಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಕಾರ್ಯದರ್ಶಿ, ಕಾನೂನು ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರು.
5. ಕಾರ್ಯದರ್ಶಿ, ಆರ್ಥಿಕ/ತೋಟಗಾರಿಕೆ/ಕೃಷಿ/ಸಮಾಜ ಕಲ್ಯಾಣ ಇಲಾಖೆ.
6. ಸಹಾಯಕ ವಿಲೇಖನಾಧಿಕಾರಿ, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು.
7. ವಿಶೇಷ ಕಾನೂನು ಕಾರ್ಯದರ್ಶಿ, ಕಾನೂನು ಇಲಾಖೆ, ವಿಧಾನಸೌಧ, ಬೆಂಗಳೂರು.
8. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ನಿರ್ದೇಶಕರು, ಗ್ರಾ.ಮೂ.ಸೌ-2, ಬಹುಮಹಡಿ ಕಟ್ಟಡ, ಗ್ರಾಅಪಂ ರಾಜ್ ಇಲಾಖೆ.
10. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ / ಉಪ ವಿಭಾಗಾಧಿಕಾರಿಗಳಿಗೆ.
11. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
12. ನಿರ್ದೇಶಕರು, ಯೋಜನೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
13. ನಿರ್ದೇಶಕರು, ರಾಜ್ಯ ಅಬ್ದುಲ್ ನಜೀರ್ ಸಾಬ್, ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
14. ಕಾರ್ಯದರ್ಶಿ, ವಿಮುಕ್ತಿ ಟ್ರಸ್ಟ್, (ಜೀವಿಕ):1289 ISEC ರಸ್ತೆ, ನಾಗರಭಾವಿ, ಬೆಂಗಳೂರು-560072.

# Proceedings of the Government of Karnataka

Sub: Constituting a Three Member Committee at the district level to Implement the rehabilitation programmes for the freed bonded Labourers by pooling together resources.

Read .1. Recommendations of the two day workshop on eradication of Bonded labour and child labour held on 9-10 October 2003 at the National Law School of India University, Bangalore.

2. Minutes of the meeting held on 28-7-2004, under the Chairmanship of Sri.K.R Venugopal, Special Rapporteur, NHRC.

**Introduction:**

……..During the workshop, the opinion emerged as a recommendation Was that "with a view to pooling together grants available under different Programmes for the purpose of working out on time rehabilitation facilities

To freed bonded labourers and child bonded labourers, a committee could be constituted under the chairmanship of the Deputy Commissioner Compromising the President of Zilla Panchayat and Chief Executive Officer of Zilla Panchayath as members."

In order to implement the above recommendation, it was decided in the meeting held on 28-7-2004 under the Chairmanship of Sri. K.R Venugopal,

